ದೆಹಲಿ ಕರ್ನಾಟಕ ಸಂಘದ

# ಅಭಿಮತ

ಆಗಸ್ಟ್ 2026 । ಬೆಲೆ ರೂ.1



## ಆಕಾಶ ದೀಪವು ನೀನು

ಹಾಡು ಹಳೆಯದಾದರೇನು
ಭಾವ ನವ ನವೀನ

# ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ 2024 ಮತ್ತು 2025ನೇ ಸಾಲಿನ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪಡೆದ ಹೆಮ್ಮೆಯ ಕನ್ನಡಿಗರು

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 2024 ಮತ್ತು 2025ನೇ ಸಾಲಿನ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಫೆಲೋಶಿಪ್ ಹಾಗೂ ಪ್ರಶಸ್ತಿಗಳನ್ನು 115 ಪ್ರಸಿದ್ಧ ಕಲಾವಿದರಿಗೆ ಆಗಸ್ಟ್ 13, 2026 ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಪ್ರದಾನ ಮಾಡಿದರು.

ಸಂಗೀತ, ನೃತ್ಯ, ನಾಟಕ, ಜಾನಪದ/ ಬುಡಕಟ್ಟು ಕಲೆ ಮತ್ತು ಕೀಲುಗೊಂಬೆ ಪ್ರದರ್ಶನದ ಒಟ್ಟು 115 ಕಲಾವಿದರನ್ನು ಪುರಸ್ಕರಿಸಲಾಯಿತು. 2024 ಮತ್ತು 2025ರ ಸಾಲಿನ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗಳಲ್ಲಿ ಕರ್ನಾಟಕದಿಂದ ಒಟ್ಟು 12 ಸಾಧಕರು ಪ್ರತಿಷ್ಠಿತ ಗೌರವಗಳಿಗೆ ಪಾತ್ರರಾಗಿದ್ದಾರೆ.

ಅಕಾಡೆಮಿ ಫೆಲೋಶಿಪ್ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಪಡೆದ ಕರ್ನಾಟಕದ ಪ್ರಮುಖ ಕಲಾವಿದರ ವಿವರ ಇಲ್ಲಿದೆ. ಎಲ್ಲಾ ಮಹನೀಯರಿಗೂ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.






ಅಕಾಡೆಮಿ ರತ್ನ ಪ್ರಶಸ್ತಿ–ಎ.ವಿ. **ಆನಂದ್** (ಮೃದಂಗ ವಾದನ): ಆರು ದಶಕಗಳಿಗೂ ಹೆಚ್ಚು ಕಾಲ ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಮೃದಂಗ ವಾದಕರಾಗಿ ದೇಶ–ವಿದೇಶಗಳಲ್ಲಿ ಅತ್ಯುನ್ನತ ಸಾಧನೆ ಮಾಡಿದ್ದಾರೆ.

**ಪ್ರಶಸ್ತಿ ವಿಜೇತರು :**



**ಟಿ.ಎಸ್. ನಾಗಾಭರಣ** (ರಂಗಭೂಮಿ / ನಿರ್ದೇಶನ): ಕನ್ನಡ ಚಿತ್ರರಂಗ ಹಾಗೂ ರಂಗಭೂಮಿಯ ಖ್ಯಾತ ನಿರ್ದೇಶಕರಾಗಿದ್ದು, ದಶಕಗಳಿಂದ ಕಲಾತ್ಮಕ ನಾಟಕ ಹಾಗೂ ಸಿನಿಮಾಗಳ ಮೂಲಕ ದೊಡ್ಡ ಕೊಡುಗೆ ನೀಡಿದ್ದಾರೆ.



**ಡಾ. ಕೆರೆಮನೆ ಶಿವಾನಂದ ಹೆಗಡೆ** (ಯಕ್ಷಗಾನ): ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯ ಮೂಲಕ ಸಾಂಪ್ರದಾಯಿಕ ಯಕ್ಷಗಾನ ಕಲೆಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿದ್ದಾರೆ.



**ವೀಣಾ ಮೂರ್ತಿ ವಿಜಯ್** (ಕೂಚಿಪುಡಿ): ಪ್ರಸಿದ್ಧ ನೃತ್ಯ ಕಲಾವಿದರಾಗಿದ್ದು, ಬೆಂಗಳೂರಿನಲ್ಲಿ ದಶಕಗಳಿಂದ ನೂರಾರು ಯುವ ಪ್ರತಿಭೆಗಳಿಗೆ ಕೂಚಿಪುಡಿ ನೃತ್ಯ ತರಬೇತಿ ನೀಡುತ್ತಿದ್ದಾರೆ.



**ಅನೂರ್ ಆರ್. ಅನಂತ ಕೃಷ್ಣ ಶರ್ಮ** (ಮೃದಂಗ): ಕರ್ನಾಟಕ ವಾದ್ಯ ಸಂಗೀತ ಲೋಕದ ಖ್ಯಾತ ಮೃದಂಗ ಮತ್ತು ಲಯವಾದ್ಯಗಾರರಾಗಿದ್ದು, ಅಪಾರ ಶಿಷ್ಯ ಬಳಗವನ್ನು ಹೊಂದಿದ್ದಾರೆ.



**ಡಾ. ಕೆ.ಆರ್. ವಾಗೀಶ್** (ಕರ್ನಾಟಕ ಮ್ಯೂಸಿಕ್) ಅವರು ಕರ್ನಾಟಕದ ಪ್ರಸಿದ್ಧ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕರು, ಸಂಶೋಧಕರು (Musicologist) ಮತ್ತು ವಾಗ್ಗೇಯಕಾರರಾಗಿದ್ದಾರೆ. ಇವರು ಸಂಗೀತ ಕ್ಷೇತ್ರಕ್ಕೆ ನೀಡಿರುವ ಗಣನೀಯ ಕೊಡುಗೆಗಾಗಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ.



**ಜ್ಯೋತಿ ಗಣಪತಿ ಹೆಗಡೆ** (ರುದ್ರ ವೀಣೆ) : ಧ್ರುಪದ್ ಶೈಲಿಯಲ್ಲಿ ಹಿಂದೂಸ್ತಾನಿ ರುದ್ರ ವೀಣೆ ನುಡಿಸುವ ಭಾರತದ ಮೊದಲ ಮುಂಚೂಣಿ ಮಹಿಳಾ ವಾದಕಿಯಾಗಿದ್ದಾರೆ.



**ವಿದುಷಿ ಡಾ. ಟಿ.ಎಸ್. ಸತ್ಯವತಿ** ಅವರು ಕರ್ನಾಟಕದ ಅತ್ಯಂತ ಗೌರವಾನ್ವಿತ ಮತ್ತು ಪ್ರಸಿದ್ಧ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ, ಪ್ರಖ್ಯಾತ ಸಂಗೀತ ಶಾಸ್ತ್ರಜ್ಞೆ (Musicologist), ಸಂಸ್ಕೃತ ವಿದ್ವಾಂಸರು ಹಾಗೂ ವಾಗ್ಮಿಗಳಾಗಿದ್ದಾರೆ.



**ಡಾ. ಎಸ್.ಸಿ. ಶರ್ಮಾ** (ಜಾನಪದ ಸಂಗೀತ) : ಕರ್ನಾಟಕದ ಸಾಂಪ್ರದಾಯಿಕ ಮತ್ತು ಬುಡಕಟ್ಟು ಜಾನಪದ ಕಲಾ ಪ್ರಕಾರಗಳ ಸಂರಕ್ಷಣೆ ಮತ್ತು ಗಾಯನಕ್ಕಾಗಿ ಶ್ರಮಿಸಿದ್ದಾರೆ.

**ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ ವಿಜೇತರು**



**ಮಹಾಲಕ್ಷ್ಮಿ ಶೆಣೈ** (ಹಿಂದೂಸ್ತಾನಿ ಗಾಯನ): ತಮ್ಮ ಸುಮಧುರ ಕಂಠದ ಮೂಲಕ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ವೇಗವಾಗಿ ಬೆಳೆಯುತ್ತಿರುವ ಯುವ ಗಾಯಕಿ.



**ಶಿವಶ್ರೀ ಸ್ಕಂದಪ್ರಸಾದ್** (ಸುಗಮ ಸಂಗೀತ): ಸಾಂಪ್ರದಾಯಿಕ ಭಕ್ತಿ ಗೀತೆಗಳು ಮತ್ತು ಸುಗಮ ಸಂಗೀತವನ್ನು ಡಿಜಿಟಲ್ ವೇದಿಕೆಗಳ ಮೂಲಕ ಯುವ ಪೀಳಿಗೆಗೆ ತಲುಪಿಸಿದ ಗಾಯಕಿ.



**ಶಿಲ್ಪಾ ನಂಜಪ್ಪ** (ಭರತನಾಟ್ಯ): ಭರತನಾಟ್ಯ ನೃತ್ಯ ಪ್ರಕಾರದಲ್ಲಿ ಅತ್ಯುತ್ತಮ ಪ್ರದರ್ಶನ ನೀಡುತ್ತಿರುವ ಕರ್ನಾಟಕದ ಉದಯೋನ್ಮುಖ ಯುವ ನೃತ್ಯ ಪ್ರತಿಭೆ.

ದೆಹಲಿ ಕರ್ನಾಟಕ ಸಂಘದ

# ಅಭಿಮತ

ಪ್ರಧಾನ ಸಂಪಾದಕರು
ರೇಣುಕಾ ನಿಡಗುಂದಿ
ಸಂಪಾದಕ ಮಂಡಳಿ
ಚಂದ್ರಶೇಖರ ಎನ್.ಪಿ.
ಸಂತೋಷ್ ಕುಮಾರ್ ಉಪಾಧ್ಯಾಯ
ಪ್ರಕಾಶ್ ಶೆಟ್ಟಿ ಉಳೆಪಾಡಿ, ಹರಿಪ್ರಿಯ ಎಸ್.
ಪ್ರಸಾದ್ ನಾಯ್ಕ್, ನಟರಾಜ್ ಸಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ-2026-28

ಅಧ್ಯಕ್ಷರು
ರೇಣುಕುಮಾರ್ ಆರ್.
9868393953
ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಶೋಭಾ ಗೌಡ
8800588150
ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183
ಖಜಾಂಚಿ
ಆಶಾಲತಾ ಎಂ.
9891249149
ಜಂಟಿ ಕಾರ್ಯದರ್ಶಿಗಳು
ಸಂತೋಷ ಜೆ.
9911235783
ಅಶ್ವಿನಿ ಬಿ.ಎಸ್.
9036235665
ಸಮಿತಿ ಸದಸ್ಯರು
ಪೂಜಾ ಪಿ. ರಾವ್
9810882498
ಶಿವಪ್ಪ ಎಂ.
9868159328
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಡಾ. ಎಂ.ಎಸ್. ಶಶಿ ಕುಮಾರ್
9811689327
ನಾರಾಯಣ ಬಿ.
9868393978
ಕೃಷ್ಣಪ್ಪ ಎಂ.
9911156695
ಜಯಶ್ರೀ ಬಸವರಾಜು ಬಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಆರ್. ಹರಿಕೃಷ್ಣ
9971518457
ರಾಜಕುಮಾರ್
9911150475



## ಸಂಪಾದಕೀಯ...

"ಶ್ರಾವಣ ಬಂತು ಕಾಡಿಗೆ ಬಂತು ನಾಡಿಗೆ, ಬಂತು ಬೀಡಿಗೆ" ಎಂದು ಶ್ರಾವಣ ಮಾಸದ ವ್ಯಾಪಕತೆಯನ್ನು ಪ್ರಕೃತಿಯ ಸೌಂದರ್ಯಕ್ಕೆ ಕಾವ್ಯದ ಮೆರುಗು ನೀಡಿದವರು ವರ ಕವಿ ದ.ರಾ. ಬೇಂದ್ರೆ. ಬಿರುಬೇಸಿಗೆಯಲ್ಲಿ ಒಣಗಿ ಕಂಗೆಟ್ಟಿದ್ದ ಕಾಡಿಗೂ ನಾಡಿಗೂ ಶ್ರಾವಣದ ಮಳೆಹನಿಗಳು ಜೀವಚೈತನ್ಯವನ್ನು ತಂದವಲ್ಲದೇ ಬೀಡಿಗೂ ಬಂದಿತು ಶ್ರಾವಣ. ಊರು ಕೇರಿಗಳಿಗೆ ಹಬ್ಬ ಹರಿದಿನಗಳನ್ನು ತಂದಿತು. ಹೊಲ ಗದ್ದೆಗಳಲ್ಲಿ ನಗು ಅರಳಿತು. ಮಳೆಗಾಲದ ರೋಗರುಜಿನಗಳು ಬಾರದಂತೆ ಪಾಲೇ ಕಷಾಯ ಕುಡಿಯುವ ತುಳುನಾಡಿನ ಆಟಿ ಕಳೆಂಜದ ಕಾಲವೂ ಹೌದು. ಆಗಸ್ಟ್ ಎಂದರೆ ಕೇವಲ ಮುಂಗಾರಿನ ಹಸಿರಷ್ಟೇ ಅಲ್ಲ; ಅದು ನಾಡಿನ ಧಮನಿ ಧಮನಿಯಲ್ಲಿ ಸ್ವಾತಂತ್ರ್ಯ, ಸಾಹಿತ್ಯ, ಸಂಸ್ಕೃತಿ ಮತ್ತು ರಾಷ್ಟ್ರೀಯತೆಯ ಕೆಚ್ಚು ಒಂದಾಗಿ ಹರಿಯುವ ಮಕರಂದ ಕಾಲ.

ಆಗಸ್ಟ್‌ನಲ್ಲಿ ಆಚರಿಸಲಾಗುವ ಶ್ರೀ ನಾರಾಯಣ ಗುರುಗಳ ಜಯಂತಿಯು ಸಾಮಾಜಿಕ ಸಮಾನತೆ ಮತ್ತು ಕ್ರಾಂತಿಕಾರಿ ಚಿಂತನೆಗಳ ಸ್ಮರಣೆಗೆ ಪವಿತ್ರ ಸಂದರ್ಭ. "ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಮಾನವನಿಗೆ" (ಒರು ಜಾತಿ, ಒರು ಮತಂ, ಒರು ದೇವನ್ ಮನುಷ್ಯನು) ಎಂಬ ಅವರ ವಿಶ್ವಪ್ರಸಿದ್ಧ ತತ್ವವು ಜಾತೀಯತೆ, ಅಸಮಾನತೆ ಮತ್ತು ಅಂಧಶ್ರದ್ಧೆಯಿಂದ ಬಳಲುತ್ತಿದ್ದ ಸಮಾಜಕ್ಕೆ ಹೊಸ ದಿಕ್ಕು ತೋರಿತು. ಕೇವಲ ಪ್ರವಚನಕ್ಕೆ ಸೀಮಿತವಾಗದೆ, ದೇವಸ್ಥಾನಗಳ ಪ್ರವೇಶದ ಹಕ್ಕಿಲ್ಲದವರಿಗಾಗಿ ತಾವೇ ವಿಗ್ರಹ ಪ್ರತಿಷ್ಠಾಪಿಸಿ, ಶಿಕ್ಷಣವೇ ಶೋಷಣೆಯಿಂದ ಮುಕ್ತಿ ಪಡೆಯುವ ಶ್ರೇಷ್ಠ ಅಸ್ತ್ರ ಎಂದು ಸಾರಿದ ನಾರಾಯಣ ಗುರುಗಳ ದಾರ್ಶನಿಕ ಸಿದ್ಧಾಂತಗಳು ಇಂದಿನ ಸಮಾಜಕ್ಕೂ ಅತ್ಯಂತ ಪ್ರಸ್ತುತ.

ಕನ್ನಡ ಚಲನಚಿತ್ರ ರಂಗದಲ್ಲಿ ತಮ್ಮ ವಿಶಿಷ್ಟ ಶೈಲಿ, ನಟನೆ ಮತ್ತು ಸೌಮ್ಯ ವ್ಯಕ್ತಿತ್ವದಿಂದ 'ಪ್ರಣಯ ರಾಜ' ಎಂದೇ ಮನೆಮಾತಾಗಿದ್ದ ಅಭಿನಯ ಚತುರ ಶ್ರೀನಾಥ್ ಅವರ 'ರಸಗಂಗೆ' ಕಾರ್ಯಕ್ರಮ ಸಿನಿಮಾದ ಗ್ಲಾಮರ್ ಅನ್ನು ಬದಿಗೊತ್ತಿ ಶುದ್ಧ ಸಾಹಿತ್ಯ, ಕನ್ನಡದ ದಿಗ್ಗಜ ನಿರ್ದೇಶಕ ಪುಟ್ಟಣ್ಣನವರೊಂದಿಗಿನ ಅವರ ಒಡನಾಟ, ಜೀವನಾನುಭವ ಮಧುರಗೀತೆಗಳು ದೆಹಲಿ ಕನ್ನಡಿಗರನ್ನು ರಂಜಿಸಿತು.

ವೇದಾಂತಿ ಹೇಳಿದನು ಜಗವೆಲ್ಲ ಶೂನ್ಯ!
ಅನುಭಾವಿ ನುಡಿದನು ಜಗವೆಲ್ಲ ಪೂರ್ಣ !
ಗಾಳಿ ಬೀಸುತಲಿದೆ, ನೀರು ಹರಿಯುತಲಿದೆ
ಹೂವು ಅರಳುತ್ತಲಿದೆ, ಹಕ್ಕಿ ಹಾಡುತ್ತಲಿದೆ
ಈ ಸತ್ಯ ಕಣ್ಣಿಂಗೆ ಕಾಣಿಸದೆ ಶೂನ್ಯ?"

"ಮಾನಸ ಸರೋವರ" ಚಿತ್ರದಲ್ಲಿ ಬಳಸಿರುವ ಗೀತೆಯ ಹಿನ್ನೆಲೆಯಲ್ಲಿ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರ ಜನ್ಮಶತಮಾನೋತ್ಸವದ (1926-2026) ನಾದ ನಾಡಿನ ಈ ಮಣ್ಣಿನಲ್ಲಿ ಗುನುಗುತಿದೆ. ಜಿಎಸ್‌ಎಸ್ ಅವರ ಈ ದಾರ್ಶನಿಕ ಸಾಲುಗಳು ಬದುಕಿನ ಪ್ರತಿ ಕ್ಷಣದ ಸೌಂದರ್ಯವನ್ನು ಆಸ್ವಾದಿಸಲು ಕರೆ ನೀಡುತ್ತವೆ. ಇದರೊಂದಿಗೆ, ಕನ್ನಡಿಗರ ಉದ್ಯೋಗ ಹಕ್ಕು ಮತ್ತು ನಾಡಿನ ಅಸ್ಮಿತೆಗೆ ಐತಿಹಾಸಿಕ ವರದಿಯ ಮೂಲಕ ಶಕ್ತಿ ತುಂಬಿದ ಧೀಮಂತ ನಾಯಕಿ, ಬಹುಭಾಷಾ ವಿದುಷಿ ಡಾ. ಸರೋಜಿನಿ ಮಹಿಷಿ ಅವರ ಜನ್ಮಶತಮಾನೋತ್ಸವವೂ (1927-2027) ಮುಂದಿನ ವರ್ಷಕ್ಕೆ ಹೊಸ್ತಿಲಲ್ಲಿದೆ. ಆಗಸ್ಟ್ 29 ಕರ್ನಾಟಕ ಕಂಡ ಪ್ರಗತಿಶೀಲ ಚಿಂತಕ, ಜನಪರ ಆಡಳಿತ ಶೈಲಿಗೆ ಹೆಸರಾದ ಹಾಗೂ ರಾಜ್ಯದ ರಾಜಕಾರಣದಲ್ಲಿ ಅಚ್ಚಳಿಯದ ಛಾಪು ಮೂಡಿಸಿದ ರಾಮಕೃಷ್ಣ ಹೆಗಡೆ ಅವರ ನೂರರ ಜನ್ಮದಿನದ ಸಂದರ್ಭವೂ ಹೌದು.

1942 ರ ಆಗಸ್ಟ್ 9 ರಂದು ಮಹಾತ್ಮ ಗಾಂಧೀಜಿಯವರು ನೀಡಿದ "ಮಾಡು ಇಲ್ಲವೇ ಮಡಿ" ಎಂಬ ಕ್ರಾಂತಿಕಾರಿ ಕರೆ ಇಡೀ ದೇಶವನ್ನು ಜಾಗೃತಗೊಳಿಸಿ ಕ್ವಿಟ್ ಇಂಡಿಯಾ ಚಳವಳಿಗೆ ನಾಂದಿ ಹಾಡಿತು. ಆ ಅಹಿಂಸಾತ್ಮಕ ಸಮರದ ತಪಸ್ಸಿನ ಫಲವೇ 1947 ರ ಆಗಸ್ಟ್ 15 ರ ಸ್ವಾತಂತ್ರ್ಯೋದಯ. ಜೈಲಿನ ಕೋಣೆಯಲ್ಲೂ ಚರಕದ ನೂಲಿನಲ್ಲಿ ದೇಶದ ಆತ್ಮನಿರ್ಭರತೆಯನ್ನು ಹೊಸೆಯುತ್ತಿದ್ದ ಗಾಂಧೀಜಿಯವರ ಸತ್ಯಾಗ್ರಹದ ಹಾದಿ, ಉಳ್ಳಾಲದ ಅಬ್ಬಕ್ಕದೇವಿ, ಸಂಗೊಳ್ಳಿ ರಾಯಣ್ಣ, ಕಿತ್ತೂರು ಚೆನ್ನಮ್ಮರಂತಹ ಕನ್ನಡದ ಕ್ರಾಂತಿಕಾರಿ ಹೋರಾಟಗಾರರು, ಲಕ್ಷಾಂತರ ವೀರಾತ್ಮರ ಬಲಿದಾನದ ಫಲವಾಗಿ ಲಭಿಸಿದ ಈ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವುದು ನಮ್ಮ ಪರಮ ಕರ್ತವ್ಯ.

ಆಗಸ್ಟ್ 9 ರ 'ವಿಶ್ವ ಆದಿವಾಸಿ ದಿನ'ವು ಕಾಡು, ಮೇಡು, ಜಲ ಮತ್ತು ಪ್ರಕೃತಿಯನ್ನು ದೈವವೆಂದು ಪೂಜಿಸುವ ಮೂಲನಿವಾಸಿಗಳ ಸಾಂಪ್ರದಾಯಿಕ ಜ್ಞಾನ ಮತ್ತು ಹಕ್ಕುಗಳನ್ನು ಗೌರವಿಸುವ ಪವಿತ್ರ ಸಂದರ್ಭವಾಗಿದೆ. ಈ ಎಲ್ಲ ಸಾಂಸ್ಕೃತಿಕ, ಸಾಹಿತ್ಯಿಕ ಸಂಭ್ರಮಗಳ ನಡುವೆ, ರಾಜ್ಯದ ಶಾಸನಸಭೆಯಲ್ಲಿ ಸಾರ್ವಜನಿಕ ಉದ್ಯಾನವನಗಳು ಹಾಗೂ ನಗರಾಭಿವೃದ್ಧಿ ವಿಧೇಯಕಗಳ ಸುತ್ತ ನಡೆದ ಬಿಸಿಯೇರಿದ ರಾಜಕೀಯ ಚರ್ಚೆಗಳು ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಜವಾಬ್ದಾರಿಯುತ ಆಡಳಿತದ ಅಗತ್ಯವನ್ನು ಎತ್ತಿ ತೋರಿಸುತ್ತಿವೆ.

ಗಾಂಧಿ ಮಾರ್ಗದ ಸ್ವಾತಂತ್ರ್ಯದ ಬೆಳಕು ಮತ್ತು ಆದಿವಾಸಿಗಳ ಪ್ರಕೃತಿ ಪ್ರೇಮ-ಇವೆಲ್ಲವೂ ಆಗಸ್ಟ್ ತಿಂಗಳನ್ನು ಸಾರಸ್ವತ ಹಾಗೂ ರಾಷ್ಟ್ರೀಯತೆಯ ದಿವ್ಯ ಸಂಗಮವನ್ನಾಗಿ ಮಾಡಿವೆ. ಪ್ರಕೃತಿಯನ್ನು ಆರಾಧಿಸುತ್ತಾ, ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯಗಳನ್ನು ಉಸಿರಾಡಿಸುತ್ತಾ ಮುನ್ನಡೆಯೋಣ.❑

*ರೇಣುಕಾ ನಿಡಗುಂದಿ*

ಕಾವಲು ಸಮಿತಿ | ಶ್ರೀ ಎನ್.ಎ. ಮಾಧವ । ಶ್ರೀ ಎಂ.ವಿ. ವೆಂಕಟೇಶ್ । ಶ್ರೀಮತಿ ರಾಧಾ ಕೌಜಲಗಿ

## ನಾವು-ನೀವು

**ದೆಹಲಿ ಕನ್ನಡಿಗರ ಭಾವನೆ ಹಾಗೂ ಆಸಕ್ತಿಗೆ ಸ್ಪಂದಿಸುತ್ತಿರುವ ದೆಹಲಿ ಕರ್ನಾಟಕ ಸಂಘ**

ದೆಹಲಿ ಕರ್ನಾಟಕ ಸಂಘವು ಕೇವಲ ಒಂದು ಕಟ್ಟಡ ಅಥವಾ ಸಂಸ್ಥೆಯಾಗಿರದೆ, ದೆಹಲಿಯಲ್ಲಿ ನೆಲೆಸಿರುವ ಸಮಸ್ತ ಕನ್ನಡಿಗರ ಭಾವನೆಗಳ ಸಂಕೇತವಾಗಿದೆ. ಇದು ಕನ್ನಡ ಭಾಷೆಯ ಮೇಲಿನ ಪ್ರೀತಿ, ನಾಡಿನ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಮೇಲಿನ ಅಭಿಮಾನದ ಪ್ರತಿರೂಪ. ನಮ್ಮ ಸಮೃದ್ಧ ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸುವ ಗುರುತರ ಜವಾಬ್ದಾರಿಯನ್ನು ಈ ಸಂಸ್ಥೆ ನಿರಂತರವಾಗಿ ವಹಿಸುತ್ತಾ ಬಂದಿದೆ.

ಸಾಧಕರ ಬದುಕಿನ ಸಾರ್ಥಕತೆಯ ಅನುಭವಗಳನ್ನು ಅವರ ಬಾಯಿಂದಲೇ ಕೇಳುವುದು ಸದಾ ಪ್ರೇರಣಾದಾಯಕ. ಇತ್ತೀಚೆಗೆ ಕನ್ನಡ ಚಿತ್ರರಂಗದ ಖ್ಯಾತ ನಟ, 'ಪ್ರಣಯ ರಾಜ' ಶ್ರೀನಾಥ್ ಅವರೊಂದಿಗೆ ನಡೆದ ಸಂವಾದ ನನ್ನ ಆಲೋಚನೆಗಳನ್ನು ಮತ್ತಷ್ಟು ಪ್ರಬುದ್ಧಗೊಳಿಸಿತು. ಅಷ್ಟೊಂದು ಎತ್ತರಕ್ಕೆ ಬೆಳೆದ ಮಹಾನ್ ಸಾಧಕರ ಸರಳತೆ, ಜನರೊಂದಿಗೆ ಸ್ಪಂದಿಸುವ ರೀತಿ ಮತ್ತು ಈ ಇಳಿ ವಯಸ್ಸಿನಲ್ಲೂ ಅವರಲ್ಲಿರುವ ಹುಮ್ಮಸ್ಸು ಬೆರಗುಗೊಳಿಸುವಂತದ್ದು. ಪ್ರಸಿದ್ಧ ಹಾಗು ಮಹಾನ್ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರೊಂದಿಗಿನ ಒಡನಾಟ ಹಾಗೂ ಅವರ ಕಾರ್ಯವೈಖರಿಯ ಬಗ್ಗೆ ಶ್ರೀನಾಥ್ ಅವರು ಹಂಚಿಕೊಂಡ ನೆನಪುಗಳು ಘಟನೆಗಳೆಲ್ಲವೂ ಕಣ್ಮುಂದೆಯೇ ನಡೆಯುತ್ತಿವೆಯೇನೋ ಎಂಬಂತೆ ಭಾಸವಾಗುತ್ತಿತ್ತು.

ಇಂತಹ ಅನೇಕ ಸಾಧಕರು ನಮ್ಮ ವೇದಿಕೆಗೆ ಆಗಮಿಸಿ ದೆಹಲಿ ಕನ್ನಡಿಗರಿಗೆ ಪ್ರೇರಣೆಯ ದೀಪವಾಗಬೇಕೆಂಬುದು ನಮ್ಮ ಆಶಯ. ಈ ಆಶಯಕ್ಕನುಗುಣವಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರು ದೆಹಲಿ ಕರ್ನಾಟಕ ಸಂಘಕ್ಕೆ ಆಗಮಿಸಿ ನಮ್ಮ ಗೌರವ ಸ್ವೀಕರಿಸಿದ್ದು ಒಂದು ಹೆಗ್ಗಳಿಕೆ.

ನಾವು ಪಡೆಯುವ ತರಬೇತಿಯು ನಮ್ಮ ಭವಿಷ್ಯ ರೂಪಿಸಲು ನೆರವಾಗಬೇಕು ಎಂಬ ಉದ್ದೇಶದಿಂದ, ಸರ್ಕಾರದಿಂದ ಮಾನ್ಯತೆ ಪಡೆದ ಪ್ರಮಾಣಪತ್ರ ನೀಡುವ ಮೌಲ್ಯಯುತ ತರಬೇತಿ ಕಾರ್ಯಕ್ರಮಗಳನ್ನು ಸಂಘವು ಆಯೋಜಿಸುತ್ತಿದೆ.

ಮುಂದಿನ ದಿನಗಳಲ್ಲಿ ಸಾಲು ಸಾಲು ಹಬ್ಬಗಳ ಸಂಭ್ರಮ ಆರಂಭವಾಗಲಿದೆ. ದೆಹಲಿಯ ವಿವಿಧ ಸಂಘ-ಸಂಸ್ಥೆಗಳು ಆಯೋಜಿಸುವ ಗಣೇಶೋತ್ಸವ, ನಾಡಹಬ್ಬ ದಸರಾ ಹಾಗೂ ಕನ್ನಡ ರಾಜ್ಯೋತ್ಸವಗಳ ಸಾಂಸ್ಕೃತಿಕ ವೈಭವಕ್ಕೆ ದೆಹಲಿ ಕರ್ನಾಟಕ ಸಂಘವು ಶಕ್ತಿ ತುಂಬಲಿದೆ.

ದೆಹಲಿಯಲ್ಲಿ ಕನ್ನಡ ನಾಡಿನ ವಿವಿಧ ಭಾಗಗಳ ಕನ್ನಡಿಗರು ಒಂದಾಗಿ ಸೇರುವ ತಾಣವಾದ ದೆಹಲಿ ಕರ್ನಾಟಕ ಸಂಘ ಎಲ್ಲಾ ಭಾಗದ ಕಲೆ ಮತ್ತು ಸಂಸ್ಕೃತಿಯನ್ನು ಆಯೋಜಿಸುವಲ್ಲಿ ಯಶಸ್ವಿ ಪ್ರಯತ್ನ ಮಾಡುತ್ತಿರುವ ಜಗತ್ತಿನ ಏಕಮಾತ್ರ ಕನ್ನಡ ಸಂಸ್ಥೆಯಾಗಿ ದಾಖಲೆ ಸೃಷ್ಟಿಸಿದೆ. ಮಾತ್ರ ಸಂಸ್ಥೆಯಾಗಿ ಸ್ಥಳೀಯ ಸಂಸ್ಥೆಗಳ ವೈವಿಧ್ಯಮಯ ಹಾಗೂ ಗುಣಮಟ್ಟದ ಕಾರ್ಯಕ್ರಮಗಳಿಗೆ ಸಂಘವು ಯಾವುದೇ ಷರತ್ತಿಲ್ಲದೆ ಸಂಪೂರ್ಣ ಸಹಯೋಗ ಮತ್ತು ಸಹಕಾರವನ್ನು ನೀಡುತ್ತಾ ಬಂದಿದೆ.

ಸ್ಥಳೀಯ ಕನ್ನಡಿಗರ ವಿಚಾರಗಳು, ಆಶಯಗಳು ಮತ್ತು ಸಲಹೆಗಳನ್ನು ಆಲಿಸಲು ಹಾಗೂ ಸ್ವೀಕರಿಸಲು ನಾವು ಸದಾ ಸಿದ್ಧರಿದ್ದೇವೆ.❑

**ರೇಣುಕುಮಾರ್ ಆರ್.**
ಅಧ್ಯಕ್ಷರು

## ಮುನ್ನೋಟ

**ದೆಹಲಿ ಕರ್ನಾಟಕ ಸಂಘ ಶ್ರಾವಣದ ಸಂಭ್ರಮದಲ್ಲಿ ಕನ್ನಡದ ಕಂಪು**

ಆಷಾಢ ಕಳೆದು ಶ್ರಾವಣ ಮಾಸಕ್ಕೆ ಕಾಲಿಟ್ಟಿದ್ದೇವೆ. ಹಬ್ಬ-ಹರಿದಿನಗಳನ್ನು ಸ್ವಾಗತಿಸುವ ಈ ಶುಭಮಾಸದಲ್ಲಿ ದೆಹಲಿಯ ಹವಾಮಾನವೂ ತನ್ನದೇ ಆದ ವೈವಿಧ್ಯವನ್ನು ತೋರುತ್ತಿದೆ. ಆಗಾಗ ಬಿರುಸಿನ ಮಳೆ, ಕೆಲವೊಮ್ಮೆ ತೀವ್ರ ಸೆಕೆ-ಮಳೆ ಮತ್ತು ಬಿಸಿಲಿನ ಮಿಶ್ರ ವಾತಾವರಣವನ್ನು ನಾವು ಅನುಭವಿಸುತ್ತಿದ್ದೇವೆ. ಇದೇ ಸಂದರ್ಭದಲ್ಲಿ ದೇಶದ ಹಲವೆಡೆ ಪ್ರವಾಹದಿಂದಾಗಿ ಜನರು ಎದುರಿಸುತ್ತಿರುವ ಕಷ್ಟ-ನಷ್ಟಗಳ ಸುದ್ದಿಗಳು ನಮ್ಮ ಮನಸ್ಸನ್ನು ಕಳವಳಗೊಳಿಸುತ್ತಿವೆ. ದೂರದಲ್ಲಿದ್ದರೂ ಸಾಧ್ಯವಾದಷ್ಟು ಕೈಲಾದ ನೆರವನ್ನು ನೀಡುವ ಮೂಲಕ ನಮ್ಮ ಮಾನವೀಯ ಕರ್ತವ್ಯವನ್ನು ನಿಭಾಯಿಸೋಣ.

ಭಾಷೆ, ಕಲೆ ಮತ್ತು ಸಂಸ್ಕೃತಿಯ ಕಲಿಕೆಗಳು ಪ್ರತಿವಾರಾಂತ್ಯವೂ ನಿರಂತರವಾಗಿ ನಡೆಯುತ್ತಿವೆ. ವಿದ್ಯಾರ್ಥಿಗಳಿಗೆ ಕಲಿಕೆಯ ಮೌಲ್ಯವನ್ನು ಗಟ್ಟಿಗೊಳಿಸುವುದರ ಜೊತೆಗೆ, ಅವರ ಭವಿಷ್ಯಕ್ಕೂ ಅನುಕೂಲವಾಗುವಂತಹ ಗುಣಮಟ್ಟದ ತರಬೇತಿ ನೀಡುವುದು ನಮ್ಮ ಉದ್ದೇಶವಾಗಿ ಅರ್ಹ ಹಾಗೂ ಅನುಭವಿ ತರಬೇತುದಾರರು ವೃತ್ತಿಪರರರಿಂದ ತರಬೇತಿ ನೀಡುತ್ತಿದ್ದು, ತರಗತಿಗಳಿಗೆ ಸೇರುತ್ತಿರುವ ಮಕ್ಕಳ ಸಂಖ್ಯೆಯೂ ಹೆಚ್ಚುತ್ತಿದೆ. ಕನ್ನಡ ಭಾಷೆ ಮತ್ತು ನಮ್ಮ ಸಾಂಸ್ಕೃತಿಕ ಬೇರುಗಳೊಂದಿಗೆ ಹೊಸ ಪೀಳಿಗೆಯನ್ನು ಬೆಸೆಯುತ್ತಿರುವುದು ನಮಗೆ ಸಂತೋಷ ಮತ್ತು ಹೆಮ್ಮೆಯ ಸಂಗತಿ. ನಾವು ಇಟ್ಟಿರುವ ಹೆಜ್ಜೆಗಳು ಇನ್ನೂ ಆರಂಭಿಕ ಹಂತದಲ್ಲಿದ್ದರೂ, ಈಗಾಗಲೇ ದೊರೆತಿರುವ ಸ್ಪಂದನೆ ಮತ್ತು ಸದಸ್ಯರ ಉತ್ಸಾಹ ನಮ್ಮ ಪ್ರಯತ್ನಗಳಿಗೆ ಹೆಚ್ಚಿನ ಬಲ ನೀಡಿದೆ.

ಡಾ. ರಾಜಕುಮಾರ್ ಅವರ ನಂತರದ ಪೀಳಿಗೆಯ ಯಶಸ್ವಿ ನಾಯಕ ನಟರಲ್ಲಿ ಪ್ರಣಯರಾಜ ಶ್ರೀನಾಥ್ ಅವರೂ ಒಬ್ಬರು. ಎಂಭತ್ತರ ಹರೆಯದಲ್ಲಿಯೂ ತಮ್ಮ ಕಲಾ ಬದುಕಿನ ನೆನಪುಗಳನ್ನು ಹೊತ್ತು ನಮ್ಮ ವೇದಿಕೆಯಲ್ಲಿ ಸತತ ನಾಲ್ಕು ಗಂಟೆಗಳ ಕಾಲ ಅತ್ಯಂತ ಆತ್ಮೀಯವಾಗಿ ದೆಹಲಿ ಕನ್ನಡಿಗರೊಂದಿಗೆ ಸಂವಾದಿಸಿ, ತಮ್ಮ ಸುದೀರ್ಘ ಚಿತ್ರಪಯಣವನ್ನು ಹಂಚಿಕೊಂಡದ್ದು ಒಂದು ಅಪರೂಪದ ಹಾಗೂ ವಿನೂತನ ಕಾರ್ಯಕ್ರಮವಾಗಿ ಇತಿಹಾಸದಲ್ಲಿ ಉಳಿಯುವಂತಾಗಿದೆ. ಅದು ಕೇವಲ ಮನರಂಜನೆಯ ಕಾರ್ಯಕ್ರಮವಾಗಿರದೆ, ಒಂದು ತಲೆಮಾರಿನ ಕಲಾ ಪಯಣವನ್ನು ಮತ್ತೊಂದು ತಲೆಮಾರಿಗೆ ಪರಿಚಯಿಸಿದ ಸಾರ್ಥಕ ಪ್ರಯತ್ನವೂ ಆಗಿತ್ತು.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಆರು ಕನ್ನಡ ಮಹನೀಯರನ್ನು ಗೌರವಿಸುವ ಮೂಲಕ ಕನ್ನಡ ನಾಡು, ನುಡಿ ಮತ್ತು ಸಾಹಿತ್ಯಕ್ಕೆ ಗೌರವ ಸಲ್ಲಿಸುವ ಅವಕಾಶವೂ ನಮಗೆ ದೊರೆತಿದ್ದು ಕನ್ನಡಮ್ಮನಿಗೆ ಸಲ್ಲಿಸಿದ ಗೌರವವೇ ಸರಿ. ಯಕ್ಷಗಾನ ಪ್ರದರ್ಶನ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಸಹಯೋಗದಲ್ಲಿ ಆಯೋಜಿಸಲಾದ ಕಾರ್ಯಕ್ರಮಗಳು, ಶ್ರೀ ಶ್ರೀನಿವಾಸ ಕಪ್ಪಣ್ಣ ಅವರ 'ಮುತ್ತು ಬಂತು ಕೇರಿಗೆ' ನೃತ್ಯರೂಪಕ-ಇವೆಲ್ಲವೂ ದೆಹಲಿ ಕನ್ನಡಿಗರ ಮನಸೂರೆಗೊಂಡು ಸಂಘದ ಚಟುವಟಿಕೆಗಳು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿವೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಸೆಪ್ಟೆಂಬರ್ ತಿಂಗಳು ಗಣೇಶನ ಆಗಮನದೊಂದಿಗೆ ಮತ್ತಷ್ಟು ಶುಭದಿನಗಳನ್ನು ಹೊತ್ತು ತರಲಿದೆ. ಇದೇ ಸಂದರ್ಭದಲ್ಲಿ ಜನಕಪುರಿ ಕನ್ನಡ ಕೂಟವು ಸುವರ್ಣ ವರ್ಷಕ್ಕೆ ಕಾಲಿಟ್ಟಿದ್ದು, ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವರಿಗೆ ನಮ್ಮ ಹೃತ್ಪೂರ್ವಕ ಶುಭಾಶಯಗಳು.

ಕೊಡವ ಅಕಾಡೆಮಿಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಆಯೋಜಿಸಲಾಗುತ್ತಿದೆ. ಅದೇ ರೀತಿ ಕಲ್ಯಾಣ ಕರ್ನಾಟಕ ವಾರ್ಷಿಕೋತ್ಸವದ ಕಾರ್ಯಕ್ರಮವೂ ಆಯೋಜನೆಯಾಗುತ್ತಿದೆ. ನಾಡಿನ ವಿವಿಧ ಭಾಗಗಳ ಸಂಸ್ಕೃತಿ, ಪರಂಪರೆ ಮತ್ತು ಕಲಾ ವೈಭವವನ್ನು ರಾಷ್ಟ್ರ ರಾಜಧಾನಿಯಲ್ಲಿ ಪರಿಚಯಿಸುವ ಇಂತಹ ಕಾರ್ಯಕ್ರಮಗಳು ನಮ್ಮ ಸಾಂಸ್ಕೃತಿಕ ಒಗ್ಗಟ್ಟನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ.

ಎಲ್ಲರ ಸಹಭಾಗಿತ್ವವೇ ನಮ್ಮ ಶಕ್ತಿ. ದೆಹಲಿ ಕರ್ನಾಟಕ ಸಂಘ ಕೇವಲ ಒಂದು ಕಟ್ಟಡ ಅಥವಾ ಸಂಸ್ಥೆಯ ಹೆಸರಲ್ಲ. ಅದು ದೆಹಲಿಯ ಕನ್ನಡಿಗರ ಭಾವನೆ, ಕನ್ನಡ ಭಾಷೆಯ ಮೇಲಿನ ಪ್ರೀತಿ, ನಮ್ಮ ಕಲೆ-ಸಾಹಿತ್ಯ-ಸಂಸ್ಕೃತಿಕ ಮೇಲಿನ ಅಭಿಮಾನ ಹಾಗೂ ಮುಂದಿನ ಪೀಳಿಗೆಗೆ ನಮ್ಮ ಪರಂಪರೆಯನ್ನು ಕೊಂಡೊಯ್ಯುವ ಜವಾಬ್ದಾರಿಯ ಪ್ರತೀಕ.❑

**ರಾಧಾಕೃಷ್ಣ**
ಪ್ರಧಾನ ಕಾರ್ಯದರ್ಶಿ

# ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಸ್ವೀಕರಿಸಿದ ಸಾಧಕರಿಗೆ ಸನ್ಮಾನ



ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಉನ್ನತ ಪುರಸ್ಕಾರ ಸ್ವೀಕರಿಸಿದ ಸಾಧಕರನ್ನು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಆಗಸ್ಟ್ 13, 2026 ರಂದು ಸನ್ಮಾನಿಸಲಾಯಿತು.

"ಜಗವೆಲ್ಲ ಮೆಚ್ಚುವಂತಹ ಗುರುವಿನ ಶಿಷ್ಯೆ ನಾನು ಎಂದಾಗ ಪಕ್ಕದಲ್ಲಿದ ಗುರು ಎನ್ನುತ್ತಾನೆ–ನೀನು ನನ್ನನ್ನು ಯಾವ ರೀತಿ ಇಟ್ಟಿದ್ದಿಯೋ ಅದನ್ನು ನಾನು ಉಳಿಸಿಕೊಳ್ಳುವುದು ಮುಖ್ಯ". ಅಂದರೆ ಹೆಸರು ದೊಡ್ಡದಾದ ಮೇಲೆ ಅದನ್ನು ಉಳಿಸಿಕೊಳ್ಳುವುದು ಬಹಳ ಕಷ್ಟದ್ದು. ದೆಹಲಿ ಕರ್ನಾಟಕ ಸಂಘ ಎಷ್ಟು ಒಳ್ಳೆಯ ರೀತಿಯಲ್ಲಿ ಅದನ್ನು ನಡೆಸುತ್ತಿದೆ ಅದಕ್ಕಾಗಿ ನೀವೆಲ್ಲರೂ ಅಭಿನಂದನಾರ್ಹರು ಎಂಬ ಮಾತನ್ನು ವಿದುಷಿ ಡಾ. ಟಿ.ಎಸ್. ಸತ್ಯವತಿಯವರು ಮನದುಂಬಿ ನುಡಿದರು.

ನಮ್ಮನ್ನೆಲ್ಲ ಇಲ್ಲಿ ಬರಮಾಡಿಕೊಂಡು ಸನ್ಮಾನ ಮಾಡ್ತಿದ್ದೀರಿ, ನಿಮ್ಮೆಲ್ಲರ ಪ್ರೀತಿ, ಆದರ, ಅಭಿಮಾನ ಎಷ್ಟು ದೊಡ್ಡದು, ನಿಮ್ಮೊಂದಿಗಿಷ್ಟು ಕಾಲ ಕಳೆಯುವ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಅದಕ್ಕಾಗಿ ಧನ್ಯವಾದಗಳು. ಎಂದೆಂದಿಗೂ ಕನ್ನಡವಾಗಿರು. ನಾವು ಕನ್ನಡವನ್ನು ಪ್ರೀತಿಸಬೇಕು, ಅಭಿಮಾನದಿಂದ ಬಳಸಬೇಕು, ಉಳಿಸಬೇಕು. ಇವತ್ತಿನ ಈ ಕ್ಷಣಗಳು ನನ್ನ ಮನಸ್ಸಿನಲ್ಲಿ ಹಸಿರಾಗಿ ಉಳಿಯುವ ಕ್ಷಣಗಳು ನಿಮ್ಮ ಈ ಪ್ರೀತಿಗೆ ಮತ್ತೊಮ್ಮೆ ಪ್ರಣಾಮಗಳು" ಎಂದು ಮಾತನಾಡಿದ ಡಾ. ವಾಗೀಶ್ ಅವರು ರೇಣುಕುಮಾರ್ ನೇತೃತ್ವದ ಹೊಸ ತಂಡಕ್ಕೆ ಅಭಿನಂದನೆಗಳನ್ನು ಕೋರಿದರು.

ಇಂದು ಅಕಾಡೆಮಿ ಫಂಕ್ಷನ್ ಆಯಿತು, ಕನ್ನಡ ಸಂಘದವರು ನೀವು ಇಷ್ಟೊಂದು ಪ್ರೀತಿ ತೋರಿಸ್ತಿದೀರಾ ತವರು ಮನೆಗೆ ಬಂದಂತಾಯ್ತು ನಮಗೆಲ್ಲ ಮಾತೇ ಹೊರಡ್ತಿಲ್ಲ. ಕರ್ನಾಟಕ ಸಂಘ ಇನ್ನೂ ಬೆಳೆಯಲಿ" ಎಂದರು ಸಾಧಕಿ ಪ್ರಸಿದ್ಧ ನೃತ್ಯ ಕಲಾವಿದೆ ವೀಣಾ ಮೂರ್ತಿ.

ನಮ್ಮಂಥ ಸಾಧಕರನ್ನು ಬರಮಾಡಿಕೊಂಡು ಸಾಧನೆಗೆ ಪ್ರೋತ್ಸಾಹ ಕೊಡ್ತಿದೀರಾ. ನಾವು ಪಡೆದ ಪುರಸ್ಕಾರಕ್ಕಿಂತಲೂ ಇದು ದೊಡ್ಡದು ನಿಮ್ಮ ಪ್ರೀತಿ ದೊಡ್ಡದು, ದೇವರು ಇನ್ನಷ್ಟು ಶಕ್ತಿ ಕೊಡಲಿ ಸಾಧನೆಯನ್ನು ಎತ್ತರಕ್ಕೊಯ್ಯಲು. ನಿಮಗೆಲ್ಲ ಧನ್ಯವಾದಗಳು" ಎಂದರು ಮತ್ತೊಬ್ಬ ಸಾಧಕಿ ಜ್ಯೋತಿ ಗಣಪತಿ ಹೆಗಡೆ.

ಯಕ್ಷಗಾನ ಕಲಾವಿದ ಡಾ. ಕೆರೆಮನೆ ಶಿವಾನಂದ ಹೆಗಡೆ ಅವರು ಮಾತನಾಡುತ್ತಾ ದೆಹಲಿ ಕರ್ನಾಟಕ ಸಂಘ ಎಂದರೆ "ಕೆರೆಮನೆ ಸಂಘ" ಎಂಬಂತಾಗಿದೆ. 80ರ ದಶಕಗಳಿಂದಲೂ ದೆಹಲಿ ಕರ್ನಾಟಕ ಸಂಘದೊಂದಿನ ತಮ್ಮ ನಂಟು ಒಡನಾಟವನ್ನು ನೆನೆಯುತ್ತಾ ಆ ಕಾಲದಿಂದ ಯಾರೆಲ್ಲ ಅಧ್ಯಕ್ಷರಾಗಿದ್ದಾರೋ ಅವರೆಲ್ಲರೂ ಕಲಾವಿದರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯ ಜೊತೆಗೆ ದೆಹಲಿ ಕರ್ನಾಟಕ ಸಂಘವು ಕೊಡಮಾಡುವ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನೂ ಪಡೆದಿದ್ದೇನೆ. ಅದು ಬಹಳ ಹೆಮ್ಮೆಯ ಸಂಗತಿ. ಕರ್ನಾಟಕದ ಕಲಾವಿದರಿಗೆ ಪ್ರಶಸ್ತಿ ಬಂತು ನೀವೆಲ್ಲ ಸಂಭ್ರಮ ಪಡುತ್ತಿದ್ದೀರಿ. ಇದು ನಿಜವಾಗಿಯೂ ಒಂದು ಮಾದರಿ ಸಂಘ. ದೆಹಲಿಯಿಂದ ರಾಜಧಾನಿಯ ಕನ್ನಡಿಗರು ಎಂದಾಗ ನಿಂತುಕೊಳ್ಳಲಿಕ್ಕೆ ಒಂದು ಧೈರ್ಯ." ಎಂದು ಭಾವುಕರಾಗಿ ನುಡಿದರು.

ಸಂಘದ ಅಧ್ಯಕ್ಷರಾದ ರೇಣುಕುಮಾರ್ ಮಾತನಾಡುತ್ತಾ ವಿವಿಧ ಕಲಾ ಕ್ಷೇತ್ರಗಳ ಆರು ಮಹಾನ್ ಪ್ರಶಸ್ತಿ ಪುರಸ್ಕೃತರು ಒಟ್ಟಾಗಿ ದೆಹಲಿ ಕರ್ನಾಟಕ ಸಂಘಕ್ಕೆ ಆಗಮಿಸಿರುವುದು, ಸಾಕ್ಷಾತ್ ಕನ್ನಡ ಸರಸ್ವತಿಯೇ ಧರೆಗಿಳಿದು ಬಂದಂತಾಗಿದೆ. ಪ್ರಶಸ್ತಿ ಮತ್ತು ಪುರಸ್ಕಾರಗಳು ಒಬ್ಬ ವ್ಯಕ್ತಿಯ ಅಪಾರ ಸಾಧನೆಗೆ ದೊರೆಯುವ ಅತ್ಯುನ್ನತ ಗುರುತಾಗಿವೆ. ಕನ್ನಡ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯ ಶ್ರೀಮಂತಿಕೆ ಜಗತ್ತಿನ ಇನ್ನಾವ ಪರಿಸರದಲ್ಲೂ ಸಿಗುವುದಿಲ್ಲ ಎಂಬುದು ಈ ಘಟನೆಯಿಂದ ಮತ್ತೊಮ್ಮೆ ಸಾಬೀತಾಗಿದೆ.

ಬಳಿಕ ಎಲ್ಲ ಪ್ರಶಸ್ತಿ ಪುರಸ್ಕೃತ ಸಾಧಕರಿಗೆ ಶಾಲು ಹೊದಿಸಿ, ಸಂಘದ ಸ್ಮರಣಿಕೆ ಮತ್ತು ಹೂಗುಚ್ಛ ನೀಡಿ ಸನ್ಮಾನಿಸಲಾಯಿತು.

ಈ ಮಹಾನ್ ಸಾಧಕರ ನುಡಿಮುತ್ತುಗಳನ್ನು ಆಲಿಸುತ್ತಿದ್ದರೆ ಒಂದು ಸತ್ಯ ಸ್ಪಷ್ಟವಾಗುತ್ತದೆ; ಸಾಧನೆಯ ಎತ್ತರ ಎಷ್ಟೇ ದೊಡ್ಡದಾಗಿದ್ದರೂ, ಅವರ ಜೀವನಶೈಲಿ ಅಷ್ಟೇ ಸರಳ ಹಾಗೂ ನೆಲಮೂಲದ ಚಿಂತನೆಗಳಿಂದ ಕೂಡಿರುತ್ತದೆ. ಅವರ ವಿಚಾರಗಳು ಎಷ್ಟು ವಿಶಾಲವೂ ಪ್ರಬುದ್ಧವೂ ಆಗಿರುತ್ತವೆಯೋ, ಅಷ್ಟೇ ಅವರು ಆಡಂಬರದ ಆಲೋಚನೆಗಳಿಂದ ದೂರವಿರುತ್ತಾರೆ.

ಕೊನೆಯದಾಗಿ ರಂಗಭೂಮಿ ನಿರ್ದೇಶಕ ಟಿ.ಎಸ್. ನಾಗಾಭರಣ ತಾವು 73–74 ರ ಇಸವಿಯಲ್ಲಿ ಬಿ.ವಿ ಕಾರಂತ್ ಅವರ ಜೊತೆ ಬಂದಾಗ ಕರ್ನಾಟಕ ಸಂಘದ ಜಾಗದಲ್ಲಿ ಒಂದು ಶೆಡ್ ಇದ್ದುದನ್ನು ಸ್ಮರಿಸುತ್ತ ಅಂತಹ ದೆಹಲಿ ಕರ್ನಾಟಕ ಸಂಘ ಇಂದು ಇಷ್ಟು ಬೆಳೆದಿದೆ ಎಂದರೆ ಅದರ ಹಿಂದೆ ಇರುವ ಧೀಃ ಶಕ್ತಿಯನ್ನು ನೆನಪಿಡಬೇಕು ಎಂದರು. ಪಕ್ಕದಲ್ಲಿ ಡಾ. ಸರ್. ಎಂ. ವಿಶ್ವೇಶ್ವರಯ್ಯ ಮೆಟ್ರೊ ಸ್ಟೇಷನ್ ಇದೆ. ಹೇಗೆ ಸಂಘ ತನ್ನತನವನ್ನು ಉಳಿಸ್ಕೊಂಡು ಬರ್ತಾ ಇದೆ, ಅದು ಸಮಾಜದ ಸಾಕ್ಷಿಪ್ರಜ್ಞೆ, ದೆಹಲಿ ಕನ್ನಡಿಗರ ಅಸ್ಮಿತೆ. ಒಂದು ಸಮಾಜ ಒಂದು ರಾಷ್ಟ್ರ ನಿರ್ಮಾಣವಾಗಬೇಕಾದರೆ ಭಾಷೆಯ ಜತೆಗಿನ ನಂಟು ಮುಖ್ಯವಾದುದು. ಭಾಷೆಯ ಜೊತೆಗೆ ಬೆಳೆಯಬೇಕು. ನಾವು ಕನಸು ಕಾಣುವುದು ನಮ್ಮ ಭಾಷೆಯಲ್ಲಿ. ಕನ್ನಡದ ಕನಸುಗಳು ನನಸಾಗಬೇಕಾದರೆ ನಮಗೆ ಈ ರೀತಿಯ ಅಡಿಪಾಯ ಬೇಕಾಗುತ್ತದೆ. ಈ ರೀತಿಯ ನೆಲೆಗಟ್ಟುಗಳು ಬೇಕಾಗುತ್ತವೆ. ಅದನ್ನು ಅಂದಿನಿಂದ ಇಂದಿನವರೆಗೂ ಮಾಡಿದಂತಹ ಮನಸ್ಸುಗಳಿಗೆ ನನ್ನ ಶಿರಸಾಷ್ಟಾಂಗ ನಮಸ್ಕಾರ."

ಸಾಂಸ್ಕೃತಿಕವಾಗಿ ಬೆಳೆದಾಗಲೇ ಯಾವುದೇ ಒಂದು ಸಂಸ್ಥೆ ತನ್ನತನವನ್ನು ಕಂಡುಕೊಳ್ಳುತ್ತದೆ. ರಾಜಕೀಯವಾಗಿ ಬೆಳೆಯುವುದಲ್ಲ. ರಾಜಕೀಯದ ಜೊತೆ ಬೆಳೆಸುವುದಕ್ಕೆ ಹೋದರೆ ಅದು ಇನ್ನೇನೋ ಆಗಿಹೋಗುತ್ತದೆ. ದೆಹಲಿ ರಾಜಧಾನಿಯಲ್ಲಿ ಕನ್ನಡ ರಾಜಧಾನಿಯನ್ನು ಕಟ್ಟಬೇಕಾದರೆ ಅದು ಸಾಂಸ್ಕೃತಿಕವಾಗಿಯೇ ಸಾಧ್ಯ." ಎಂಬ ಅರ್ಥಪೂರ್ಣ ಮಾತುಗಳು ಇಡೀ ಕಾರ್ಯಕ್ರಮಕ್ಕೆ ಹೊಸ ಮೆರಗು ನೀಡಿತು. ಲಘು ಉಪಹಾರ ಸಾಧಕರೊಂದಿಗೆ ಮಾತುಕತೆಯಲ್ಲಿ ಸಂಜೆ ಸಂಪನ್ನಗೊಂಡಿತು.❑

**ಅಭಿಮತ ವರದಿ**

## ಸಂಘದ ಮುಂಬರುವ ಕಾರ್ಯಕ್ರಮಗಳು

**14 ರಿಂದ 16 ಸೆಪ್ಟೆಂಬರ್ 2026**

ಗಣೇಶ ಸಾಂಸ್ಕೃತಿಕ ಉತ್ಸವ–ಸ್ಥಳೀಯ ಕಲಾವಿದರಿಂದ ಭಕ್ತಿಗೀತೆಗಳು

**17 ಸೆಪ್ಟೆಂಬರ್ 2026** ಗುರುವಾರ
ಬೆಳಿಗ್ಗೆ : 8.30 ಗಂಟೆಗೆ

ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ಅಂಗವಾಗಿ ರಾಷ್ಟ್ರ ಧ್ವಜಾರೋಹಣ

**20 ಸೆಪ್ಟೆಂಬರ್ 2026** ಭಾನುವಾರ
ಸಂಜೆ : 4.30 ಗಂಟೆಗೆ

'ಕೊಡವ ಸಾಂಸ್ಕೃತಿಕ ಉತ್ಸವ'

**27 ಸೆಪ್ಟೆಂಬರ್ 2026** ಭಾನುವಾರ
ಸಂಜೆ : 4.30 ಗಂಟೆಗೆ

'ಕಲ್ಯಾಣ ಕರ್ನಾಟಕ ಉತ್ಸವ'

**04 ಅಕ್ಟೋಬರ್ 2026** ಭಾನುವಾರ
ಬೆಳಿಗ್ಗೆ : 9.30 ಗಂಟೆಗೆ

ಜನಕಪುರಿ ಕನ್ನಡ ಕೂಟದ 'ಸುವರ್ಣ ಮಹೋತ್ಸವ ಆಚರಣೆ'

# ಡಾ. ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ ಹಾಗೂ "ಕನಕಾಂಗಿ ಕಲ್ಯಾಣ" ಯಕ್ಷಗಾನ




**ಕಾವ್ಯಶಾಸ್ತ್ರವಿನೋದೇನ ಕಾಲೋ ಗಚ್ಛತಿ ಧೀಮತಾಮ್.. ಅಂದರೆ ಕಾವ್ಯಶಾಸ್ತ್ರ** ಕಲೆಯ ಆಸ್ವಾದನೆಯಲ್ಲಿಯೇ ಜ್ಞಾನಿಗಳ ಜೀವನ ಸಾರ್ಥಕವಾಗುತ್ತದೆ ಎಂಬುದು ಈ ಶ್ಲೋಕದ ಅರ್ಥ. ಇಂತಹ ಕಾವ್ಯ ಸಂಗೀತ ಹಾಗೂ ನೃತ್ಯ ಹಾಗೂ ಅಭಿನಯದ ಸಮ್ಮಿಲನವಾದಂತಹ ಯಕ್ಷಗಾನವನ್ನು ಆಸ್ವಾದಿಸಲು ಬಂದ ಸರ್ವರನ್ನೂ ಆದರಪೂರ್ವಕ ಸ್ವಾಗತಿಸುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ರಾಧಾಕೃಷ್ಣ ಅವರು ಮುಖ್ಯ ಅತಿಥಿಗಳಾದ ಡಾ. ತೇಜಸ್ವಿ ಎಸ್. ನಾಯ್ಕ್ ಐಎಎಸ್ ಅಧಿಕಾರಿ ಹಾಗೂ ಸಂಘವು ಕೊಡಮಾಡುವ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ಸ್ವೀಕರಿಸಲು ಆಗಮಿಸಿರುವ ಡಾ. ಕೆರೆಮನೆ ಶಿವಾನಂದ ಹೆಗಡೆ, ಬಂಟ್ಸ್ ಕಲ್ಚರಲ್ ಅಸೋಶಿಯೇಷನ್‌ನ ಅಧ್ಯಕ್ಷರಾದ ಸುರೇಶ್ ಶೆಟ್ಟಿ, ನಂದೀಕೇಶ್ವರ ಪ್ರಸಾದಿತ ಯಕ್ಷಗಾನ ಮಂಡಳಿಯ ಯಜಮಾನರಾದ ರಂಜಿತ್ ಶೆಟ್ಟಿ, ಐಎಎಸ್ ಅಧಿಕಾರಿ ವಿನಾಯಕ್ ಭಟ್ ಹಾಗೂ ಸಂಘದ ಮಾಜಿ ಅಧ್ಯಕ್ಷ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾದ ಡಾ. ವೆಂಕಟಾಚಲ ಜಿ. ಹೆಗಡೆ ಅವರನ್ನು ವೇದಿಕೆಗೆ ಕರೆತಂದರು.

ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರು ಮತ್ತು ಪ್ರಸ್ತುತ ಕಾರ್ಯಕಾರಿ ಸಮಿತಿಯ ಸದಸ್ಯರಾದ ಡಾ. ವೆಂಕಟಾಚಲ ಹೆಗಡೆಯವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಡಾ. ಕೆರೆಮನೆ ಶಿವಾನಂದ ಹೆಗಡೆಯವರ ಪರಿಚಯವನ್ನು ಮಾಡಿಕೊಡುವುದರ ಜೊತೆಗೆ ಅವರೊಂದಿಗೆ ತಮಗಿದ್ದ ಸುಮಾರು ನಾಲ್ಕು ದಶಕಗಳ ಒಡನಾಟವನ್ನು ನೆನಪಿಸಿಕೊಂಡರು. ಅವರು ನಿರ್ದೇಶಕರಾಗಿರುವ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯ ಒಂಬತ್ತು ದಶಕಗಳಿಗೂ ಮೀರಿದ ಯಕ್ಷಗಾನದಲ್ಲಿನ, ಅದರಲ್ಲೂ ಬಡಗುತಿಟ್ಟು ಯಕ್ಷಗಾನ ಪ್ರಪಂಚಕ್ಕೆ ನೀಡಿದ ಕೊಡುಗೆಯನ್ನು ಡಾ. ಹೆಗಡೆಯವರು ಬಿಡಿಬಿಡಿಯಾಗಿ ತೆರೆದಿಟ್ಟರು. 1934ರಲ್ಲಿ ಶಿವಾನಂದ ಹೆಗಡೆಯವರ ಅಜ್ಜ ಕೆರೆಮನೆ ಶಿವರಾಮ ಹೆಗಡೆಯವರು ಪ್ರಾರಂಭಿಸಿದ ಈ ಯಕ್ಷಗಾನ ಮಂಡಳಿಯ ಖ್ಯಾತಿ ಈಗಲೂ ಇದೇ ರೀತಿಯಲ್ಲಿ ಇದ್ದದ್ದನ್ನು ಸ್ಮರಿಸಿಕೊಂಡರು. ನಂತರದಲ್ಲಿ ಅವರ ತಂದೆ ಶಂಭು ಹೆಗಡೆಯವರು ಈ ಯಕ್ಷಗಾನ ಮಂಡಳಿಗೆ ಮತ್ತು ಕಲೆಗೆ ವಿಶಿಷ್ಟವಾದ ಬಡಗುತಿಟ್ಟಿನ ನಾಟ್ಯ ಮತ್ತು ಕಥಾನಕ ಶೈಲಿಯನ್ನು ರೂಪಿಸಿದ್ದನ್ನು ನೆನಪಿಸಿಕೊಂಡರು. ಈ ಮಂಡಳಿಯ ಗಧಾಪರ್ವ, ಕರ್ಣಪರ್ವ, ಶ್ರೀರಾಮ ಪಟ್ಟಾಭಿಷೇಕ, ಭೀಷ್ಮ ವಿಜಯ ಮುಂತಾದ ಪ್ರಸಂಗಗಳು ಬಡಗುತಿಟ್ಟಿನ ಹಿರಿಮೆಯನ್ನು ಮತ್ತು ಪ್ರಸಿದ್ಧಿಯನ್ನು ಇನ್ನೂ ಹೆಚ್ಚಿಸಿದ್ದನ್ನು ಅವರು ತಿಳಿಸಿದರು.

ತಮ್ಮ ತಂದೆ ಮತ್ತು ಅಜ್ಜಂದಿರ ಬಳಿ ಯಕ್ಷಗಾನ ಎಲ್ಲ ಪರಿಗಳನ್ನು ತಮ್ಮದಾಗಿಸಿಕೊಂಡ ಶಿವಾನಂದ ಹೆಗಡೆಯವರು 1980ರ ದಶಕದಲ್ಲಿ ತಮ್ಮ ತಂದೆಯವರಂತೆ ದೆಹಲಿಯಲ್ಲಿ ವಿದೂಷಿ ಡಾ. ಮಾಯಾ ರಾವ್‌ರವರಲ್ಲಿ ವಿವಿಧ ನಾಟ್ಯಶಾಸ್ತ್ರದಲ್ಲಿ ಪರಿಣಿತಿ ಪಡೆದ ಬಗೆಯನ್ನು ಡಾ. ಹೆಗಡೆಯವರು ವಿವರಿಸಿದರು. ಡಾ. ಶಿವಾನಂದ ಹೆಗಡೆಯವರಿಗೆ ತಮ್ಮ ತಂದೆ ಮತ್ತು ಅಜ್ಜನವರಿಗೆ ಸಂದ ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿಯ ಪ್ರಶಸ್ತಿ ಬಂದಿರುವುದು ಅವರ ಯಕ್ಷಗಾನದ ಅಪಾರ ಕೊಡುಗೆಗೆ ಸಾಕ್ಷಿ ಎಂದು ಡಾ. ವೆಂಕಟಾಚಲ ಹೆಗಡೆ ಬಣ್ಣಿಸಿ ಶಿವಾನಂದ ಹೆಗಡೆಯವರಿಗೆ ಶುಭ ಕೋರಿದರು ಮತ್ತು ದೆಹಲಿ ಕರ್ನಾಟಕ ಸಂಘದ ಕಡಲ ತೀರದ ಭಾರ್ಗವ ಡಾ. ಶಿವರಾಮ ಕಾರಂತ ಪ್ರಶಸ್ತಿಗೆ ಭಾಜನರಾಗಿದ್ದಕ್ಕೆ ಅಭಿನಂದನೆಗಳನ್ನು ಕೋರಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಜಂಟಿ ಕಾರ್ಯದರ್ಶಿಗಳಾದ ಡಾ. ತೇಜಸ್ವಿ ಎಸ್. ನಾಯ್ಕ್ ಐಎಎಸ್ ಅವರು ಮಾತನಾಡುತ್ತಾ ಈಗಾಗಲೇ ಡಾ. ವೆಂಕಟಾಚಲ ಹೆಗಡೆ ಅವರು ಯಕ್ಷಗಾನ ಹಾಗೂ ಅದರ ವೈವಿಧ್ಯಮಯ ಆಯಾಮಗಳ ಕುರಿತು ಬಹಳ ವಿಸ್ತಾರವಾಗಿ ಮಾತನಾಡಿರುವುದರಿಂದ ತಾವು ತಮ್ಮ ವೈಯಕ್ತಿಕ ಅನುಭವಗಳಿಗೆ ಮಾತ್ರ ಸೀಮಿತವಾಗಿ ಮಾತನಾಡುವುದಾಗಿ ಹೇಳಿದರು.

ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಅವರು ಯಕ್ಷಗಾನ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದ್ದನ್ನು ಸ್ಮರಿಸಿದ ಅವರು, ತಮ್ಮ ಊರಿನವರು ದೆಹಲಿಗೆ ಬಂದು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡುತ್ತಿರುವ ಸಂದರ್ಭದಲ್ಲಿ ಅವಕಾಶ ಸಿಕ್ಕಾಗಲೆಲ್ಲ ಭಾಗವಹಿಸುವುದು ಸಂತೋಷದ ಸಂಗತಿ ಎಂದರು. ಹಿಂದಿನ ಕಾರ್ಯಕ್ರಮದಲ್ಲಿ ಹೊನ್ನಾವರದ ಜಿ.ಎಸ್. ಹೆಗಡೆ ಮತ್ತು ಅವರ ಪುತ್ರ ಪ್ರಸ್ತುತಪಡಿಸಿದ ಗಾಯನ ಕಾರ್ಯಕ್ರಮವನ್ನೂ ಅವರು ನೆನಪಿಸಿಕೊಂಡರು.

ತಮ್ಮ ತರಬೇತಿ ದಿನಗಳ ಅನುಭವವನ್ನು ಹಂಚಿಕೊಂಡ ಅವರು, ಮಸೂರಿಯ ಫೌಂಡೇಶನ್ ಕೋರ್ಸ್‌ನಲ್ಲಿ ನಡೆಯುತ್ತಿದ್ದ 'ಇಂಡಿಯಾ ಡೇ' ಕಾರ್ಯಕ್ರಮದಲ್ಲಿ ದೇಶದ ವಿವಿಧ ರಾಜ್ಯಗಳ ಅಧಿಕಾರಿಗಳು ತಮ್ಮ ತಮ್ಮ ರಾಜ್ಯಗಳ ಸಂಸ್ಕೃತಿಯನ್ನು ಪ್ರದರ್ಶಿಸುತ್ತಿದ್ದರು. ಆಗ ನಮಗೆ ಯಕ್ಷಗಾನ ಮಾಡುವ ಹಂಬಲ. ಕರ್ನಾಟಕದ ಸಾಂಸ್ಕೃತಿಕ ವೈಶಿಷ್ಟ್ಯವನ್ನು ರಾಷ್ಟ್ರಮಟ್ಟದಲ್ಲಿ ಪರಿಚಯಿಸುವುದರಲ್ಲಿ ಯಕ್ಷಗಾನಕ್ಕೆ ವಿಶೇಷ ಸ್ಥಾನವಿದೆ. ಕೇರಳಕ್ಕೆ ಕಥಕ್ಕಳಿ, ಆಂಧ್ರಪ್ರದೇಶಕ್ಕೆ ಕೂಚಿಪುಡಿ, ಒಡಿಶಾಕ್ಕೆ ಒಡಿಸ್ಸಿ, ತಮಿಳುನಾಡಿಗೆ ಭರತನಾಟ್ಯ, ಮಹಾರಾಷ್ಟ್ರಕ್ಕೆ ಲಾವಣಿ ಮುಂತಾದ ಕಲಾಪ್ರಕಾರಗಳು ಸಾಂಸ್ಕೃತಿಕ ಅಸ್ಮಿತೆಯಾಗಿ ಗುರುತಿಸಲ್ಪಟ್ಟಿರುವಂತೆ, ಕರ್ನಾಟಕವನ್ನು ಪ್ರತಿನಿಧಿಸುವ ಪ್ರಮುಖ ಕಲಾಪ್ರಕಾರವಾಗಿ ಯಕ್ಷಗಾನ ಎದ್ದು ಕಾಣುತ್ತದೆ ಎಂದು ಅವರು ಹೇಳಿದರು.

ಮಸೂರಿಯಲ್ಲಿ ತಮ್ಮ ಆರಂಭಿಕ ದಿನಗಳಲ್ಲಿ ಲಭ್ಯವಿದ್ದ ಸೀಮಿತ ಸಂಪನ್ಮೂಲಗಳನ್ನು ಬಳಸಿಕೊಂಡು ಪಟಪೂಜೆ ಕುಣಿತ ಮತ್ತು ಡೊಳ್ಳು ಕುಣಿತವನ್ನು ಸಂಯೋಜಿಸಿ ಕರ್ನಾಟಕದ ಸಂಸ್ಕೃತಿಯನ್ನು ಪರಿಚಯಿಸುವ ಪ್ರಯತ್ನ ಮಾಡಿದ್ದಾಗಿ ಅವರು ಸ್ಮರಿಸಿದರು. ತಾವು ಸ್ವತಃ ಶಿರಸಿಯ ಬೇಡರ ವೇಷ ಧರಿಸಿದ್ದ ಅನುಭವವನ್ನೂ ಹಂಚಿಕೊಂಡರು. ನಂತರದ ವರ್ಷಗಳಲ್ಲಿ ಮಸೂರಿಯ 'ಇಂಡಿಯಾ ಡೇ' ಕಾರ್ಯಕ್ರಮಗಳಲ್ಲಿ ಯಕ್ಷಗಾನಕ್ಕೂ ಅವಕಾಶ

ದೊರೆತು, ನಿರಂತರವಾಗಿ ಯಕ್ಷಗಾನ ಹಾಗೂ ಡೊಳ್ಳು ಕುಣಿತದಂತಹ ಕರ್ನಾಟಕದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುವುದು ಸಂತಸದ ಸಂಗತಿ ಎಂದರು.

ಇದೇ ಸಂದರ್ಭದಲ್ಲಿ ಕೆರೆಮನೆ ಶಿವಾನಂದ ಹೆಗಡೆ ಅವರನ್ನು ಮೊದಲ ಬಾರಿಗೆ ಭೋಪಾಲ್‌ನಲ್ಲಿ, ಕೋವಿಡ್‌ಗೂ ಮುನ್ನ ನಡೆದ ಕಾರ್ಯಕ್ರಮವೊಂದರಲ್ಲಿ ಭೇಟಿಯಾಗಿದ್ದನ್ನು ಅವರು ಸ್ಮರಿಸಿದರು. ಕೆರೆಮನೆ ಶಿವಾನಂದ ಹೆಗಡೆ ಅವರಿಗೆ ದೊರೆತಿರುವ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯಂತಹ ಉನ್ನತ ಪ್ರಶಸ್ತಿಯು ಹೆಗಡೆ ಕುಟುಂಬದ ಮೂವರಿಗೂ ಪ್ರಸಿದ್ಧ ಕಲಾವಿದರಿಗೆ ಲಭಿಸಿದ್ದು ಹೆಮ್ಮೆಯ ಸಂಗತಿ. ಯಕ್ಷಗಾನ ಕಲೆಯ ಪ್ರಸಾರ ಮತ್ತು ಸಂರಕ್ಷಣೆಗೆ ಅವರ ಕೊಡುಗೆ ಮಹತ್ವದ್ದಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕರ್ನಾಟಕದ ಸಾಂಸ್ಕೃತಿಕ ವೈಭವವನ್ನು ದೇಶದ ವಿವಿಧ ಭಾಗಗಳಲ್ಲಿ ಪರಿಚಯಿಸುವಲ್ಲಿ ಯಕ್ಷಗಾನ ಪ್ರಮುಖ ಪಾತ್ರ ವಹಿಸುತ್ತಿದ್ದು, ಇಂತಹ ಕಾರ್ಯಕ್ರಮಗಳು ಕನ್ನಡಿಗರ ಸಾಂಸ್ಕೃತಿಕ ಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

**"ಗುಣಾಃ ಸರ್ವತ್ರ ಪೂಜ್ಯಂತೆ"** ಲೋಕದಲ್ಲಿ ಒಳ್ಳೆಯ ಗುಣ ಸದಾಚಾರಗಳಿಗೆ ಎಲ್ಲೆಡೆ ಗೌರವ ಸಿಗುತ್ತದೆ ಎಂಬುದು ಈ ಶ್ಲೋಕದ ಅರ್ಥ. ತಮ್ಮ ಕಲಾ ಸಾಧನೆಯ ಮೂಲಕ ಎಲ್ಲೆಡೆ ಗೌರವವನ್ನು ಪಡೆದುಕೊಂಡಂತಹ ತಮ್ಮ ಕಲಾಸಾಧನೆಯ ಮೂಲಕ ಸಾರ್ಥಕ ಬದುಕನ್ನು ನಡೆಸುತ್ತಿರುವ ಯಕ್ಷಗಾನದ ಮಹಾನ್ ಕಲಾವಿದ, ಬಡಗುತಿಟ್ಟಿನ ಹೆಮ್ಮೆಯ ಪ್ರತಿನಿಧಿ, ಕೆರೆಮನೆ ಪರಂಪರೆಯ ಕೀರ್ತಿಯನ್ನು ವಿಶ್ವದಾದ್ಯಂತ ಪಸರಿಸಿರುವ ಶ್ರೀಯುತ ಶಿವಾನಂದ ಹೆಗಡೆ ಹಾಗೂ ಶಿವರಾಮ ಕಾರಂತ ಈ ಎರಡೂ ಪರಂಪರೆಯ ಸಂಗಮವೇ ಇಂದಿನ ಪ್ರಶಸ್ತಿ. ದೆಹಲಿ ಕರ್ನಾಟಕ ಸಂಘದ ಅತ್ಯುನ್ನತ ಡಾ. ಶಿವರಾಮ ಕಾರಂತ್ ಪ್ರಶಸ್ತಿಯನ್ನು ಕೆರೆಮನೆ ಶಿವಾನಂದ ಹೆಗಡೆ ಅವರಿಗೆ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿದ ಡಾ. ಕೆರೆಮನೆ ಶಿವಾನಂದ ಹೆಗಡೆ ಅವರು ಮಾತನಾಡುತ್ತಾ ಈ ಒಂದು ಪ್ರಶಸ್ತಿ ಕಳೆದ ವರ್ಷವೇ ಬರಬೇಕಾಗಿತ್ತು. ಇದನ್ನು ಸ್ವೀಕರಿಸಲು ಈಗ ಅವಕಾಶ ಸಿಕ್ಕಿದೆ ಎಂದರು. ನೀವು ಕೊಡಮಾಡುತ್ತಿರುವ ಈ ಪ್ರಶಸ್ತಿ ಬಗ್ಗೆ ನನಗೆ ಹೇಳಲಿಕ್ಕೆ ನನ್ನ ಭಾವನೆಗಳೇ ಬಿಡ್ತಾ ಇಲ್ಲ, ಡಾ. ಶಿವರಾಮ ಕಾರಂತ ಅವರ ಪ್ರಶಸ್ತಿಯನ್ನು ಸ್ವೀಕರಿಸುವುದು ಅಂದ್ರೆ ಅದು ಒಂದು ಜನ್ಮಾಂತರದ ಒಂದು ಯೋಗ ಎಂದು ನಾನು ಭಾವಿಸುತ್ತೇನೆ ಎಂದರು. ದೆಹಲಿ ಕರ್ನಾಟಕ ಸಂಘದೊಂದಿಗಿನ ಸಂಬಂಧ ಕೂಡಾ ಒಂದು ಯೋಗಾಯೋಗ ಎಂದು ನಾನು ಭಾವಿಸುತ್ತೇನೆ. ಸುಮಾರು 80ನೇ ದಶಕದಿಂದ ನಾನು ದೆಹಲಿ ಕರ್ನಾಟಕ ಸಂಘಕ್ಕೆ ಬರುತ್ತಾ ಇದ್ದೇನೆ. ಇಂತಹ ಒಂದು ಆತ್ಮೀಯವಾದ ಸಂಘದಲ್ಲಿ ನೀವು ನನಗೆ ಶಾಲು ಹೊದಿಸಿದ್ರಿ, ಮೈಸೂರು ಪೇಟ ತೊಡಿಸಿದ್ರಿ ಕೈಯಲ್ಲಿ ಹಿಡಿಯಲಿಕ್ಕೆ ಆಗದಷ್ಟು ವಸ್ತುಗಳನ್ನು ಪ್ರೀತಿಯನ್ನು ತುಂಬಿದ್ರಿ ಈ ಒಂದು ವಿಶಿಷ್ಟವಾದ ಅತ್ಯಂತ ಮಾರ್ಮಿಕವಾದ ಹೃದಯ ತುಂಬಿದ ಸನ್ಮಾನವನ್ನು ನೀಡಿದ್ದೀರಿ, ನಾನು ಏನು ಹೇಳಲಿ ಎಂದು ನನಗೆ ಅರ್ಥ ಆಗುತ್ತಿಲ್ಲ. ಇದು ನನಗೆ ಬಂದ ಸನ್ಮಾನ ಎಂದು ನಾನು ಖಂಡಿತ ಭಾವಿಸುವುದಿಲ್ಲ, ಇದು ನಮ್ಮ ಯಕ್ಷಗಾನಕ್ಕೆ ಸಂದ ಸನ್ಮಾನ, ಆ ಕಲಾ ಸರಸ್ವತಿಗೆ ತೆಂಕು-ಬಡಗು ಇರುವಂತಹ ಯಕ್ಷಗಾನ ಎನ್ನುವಂತಹ ಮಹಾ ಕಲೆಗೆ, ಪರಂಪರೆಗೆ ಈ ಸನ್ಮಾನ ಸಿಕ್ಕಿದೆ ಎಂದು ಭಾವಿಸಿಕೊಂಡು ಅಷ್ಟು ಭವ್ಯವಾದಂಥಹ ಒಂದು ಇತಿಹಾಸಕ್ಕೆ, ಪರಂಪರೆಗೆ ಸಂದ ಸನ್ಮಾನ ಅಂತ ತಿಳ್ಕೊಂಡು ವಿನಮ್ರವಾಗಿ ಕೈಲಿ ಹಿಡಿದುಕೊಂಡಿದ್ದೇನೆ ಎಂದರು.

ಡಾ. ಶಿವರಾಮ ಕಾರಂತರ ಬಗ್ಗೆ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ಬಹಳ ಅಗತ್ಯ. ಯಾಕೆಂದರೆ ಕಾರಂತರು ಯಕ್ಷಗಾನಕ್ಕೆ ನೀಡಿದ ಕೊಡುಗೆಯನ್ನು ಯಕ್ಷಗಾನ ಇರುವವರೆಗೂ ನಾವು ನೆನಪಿಸಿಕೊಳ್ಳಬೇಕು. ಯಕ್ಷಗಾನದ ಕುರಿತು ಬರೆದ ಮೊದಲ ಪುಸ್ತಕ ಶಿವರಾಮ ಕಾರಂತರದ್ದು. ಅದಕ್ಕೆ ಫಿನ್‌ಲ್ಯಾಂಡಿನ ಅಂತಾರಾಷ್ಟ್ರೀಯ ಪ್ರಶಸ್ತಿ ಕೂಡ ಸಂದಿದೆ. ಅವರು ಯಕ್ಷಗಾನ ರಂಗಭೂಮಿಯಲ್ಲಿ ಮಾಡಿದ ಸುಧಾರಣೆಗಳು, ಬದಲಾವಣೆಗಳು ಯಕ್ಷಗಾನದಂತಹ ಒಂದು ಕಲೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಎತ್ತರಿಸುವಲ್ಲಿ ಬಹು ದೊಡ್ಡ ಕೊಡುಗೆ ಆಗಿದೆ. ಯಕ್ಷಗಾನ ಎನ್ನುವ ಪುಸ್ತಕ ಯಕ್ಷಗಾನದವರಿಗೆ ಭಗವದ್ಗೀತೆ ಇದ್ದಂತೆ. ಅದನ್ನು ಪ್ರತಿಯೊಬ್ಬರೂ ಓದಲೇಬೇಕಾದ್ದು. ಯಕ್ಷಗಾನ ಕಲಾವಿದರು ಮನೆಯಲ್ಲಿಟ್ಟುಕೊಳ್ಳಬೇಕಾದ ಪುಸ್ತಕ. ಶಿವರಾಮ ಕಾರಂತರ ಬಗ್ಗೆ ಮಾತನಾಡುವುದೆಂದರೆ ಸಮುದ್ರದ ಮುಂದೆ ಮಾತನಾಡಿದ ಹಾಗೆ.

ಪೂಜ್ಯ ಪೇಜಾವರ ಶ್ರೀಗಳು ಹೇಳಿದರಂತೆ-ನಾನು ಶಿವರಾಮ ಕಾರಂತರ ಕುರಿತು ಒಂದು ಪುಸ್ತಕ ಇತ್ತೀಚೆಗೆ ಓದುತ್ತಾ ಇದ್ದೆ, ಎತ್ತರದಲ್ಲಿ ಹಿಮಾಲಯಕ್ಕೆ, ವಿಸ್ತಾರದಲ್ಲಿ ಸಮುದ್ರಕ್ಕೆ ಹೋಲಿಸಬಹುದಾಂತಹ ಬಹು ದೊಡ್ಡ ವ್ಯಕ್ತಿತ್ವ ಕಾರಂತರದ್ದು ಎಂದರು. ಕಾರಂತರು ಯಕ್ಷಗಾನಕ್ಕೆ ಮಾಡಿದ ಕೆಲಸಗಳನ್ನೇ ಮೂರು ನಾಲ್ಕು ದಿವಸ ಸೆಮಿನಾರ್‌ನಲ್ಲಿ ಮಾತಾಡುವಷ್ಟಿದೆ." ಎಂದು ಅಭಿಪ್ರಾಯಪಟ್ಟರು ಶಿವಾನಂದ ಕೆರೆಮನೆ.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಶ್ರೀ ರೇಣುಕುಮಾರ್ ಅವರು ಮಾತನಾಡುತ್ತಾ ಸತತವಾಗಿ ಮಹನೀಯರುಗಳ ಬಾಯಲ್ಲಿ ಕನ್ನಡ ನಾಡು ನುಡಿ, ಸಂಸ್ಕೃತಿ, ಕಲೆ ದೆಹಲಿ ಕರ್ನಾಟಕ ಸಂಘದ ಬೆಳವಣಿಗೆ ಇವೆಲ್ಲದರ ಬಗ್ಗೆ ಕೇಳಿದ ಮೇಲೆ ಹೇಳಲಿಕ್ಕೆ ನನ್ನ ಬಳಿ ಏನಿದೆ? ಹಾಗಾಗಿ ಇವತ್ತು ನೀವುಗಳೆಲ್ಲರೂ ನನ್ನ ಮಾತುಗಳನ್ನು ಕಿತ್ತುಕೊಂಡಿದ್ದೀರಿ. ವೇದಿಕೆಯಲ್ಲಿ ಉಪಸ್ಥಿತರಿರುವ ಗಣ್ಯರಿಗೆ ಅಭಿನಂದಿಸುತ್ತಾ, ನಿಮ್ಮಗಳ ಇರುವಿಕೆಯೇ ನಮಗೆ ಅಭಿಮಾನ, ನೀವು ಬರುತ್ತಾ ಇದ್ದರೆ ಮಾತ್ರ ನಮ್ಮ ಸಂಘದ ಗೌರವ ಹೆಚ್ಚುತ್ತದೆ. ಯಾಕೆಂದರೆ ನೆನ್ನೆಯಿಂದ ನಾನು ನೋಡ್ತಾ ಇದ್ದೇನೆ, ನನ್ನ ಕಾಲಘಟ್ಟದಲ್ಲಿ ಹೀಗೆ ಬೆಳಗ್ಗಿನಿಂದ ಸಂಜೆವರೆಗೆ ಸಂಘದಲ್ಲಿ ನಾನು ಕಾಲ ಕಳೆದಿಲ್ಲ, ಆದರೆ ನೆನ್ನೆ ಮತ್ತು ಇವತ್ತು ಪೂರ್ತಿ ಸಂಘದಲ್ಲಿದ್ದೇನೆ. ಕರ್ನಾಟಕ ಸಂಘದ ಒಂದೊಂದು ಅಡಿ ಜಾಗವೂ ಸಹ ಕನ್ನಡದ ಕಾರ್ಯದಲ್ಲಿ ನಿರತವಾಗಿದೆ. ಹಾಗಾಗಿ ದೆಹಲಿ ಕರ್ನಾಟಕ ಸಂಘದ ಇರುವಿಕೆಯ ಸಾರ್ಥಕತೆಯನ್ನು ನಾವು ಕಂಡಿದ್ದೀವಿ ಅಂತ ಹೇಳುತ್ತಿದ್ದೇನೆ. ಅದಕ್ಕಾಗಿ ಶ್ರಮಿಸಿದ ಹಿರಿಯರಿಗೆ ನಮಸ್ಕಾರ ಮಾಡುತ್ತಾ ಅದಕ್ಕೆ ಸಹಕರಿಸಿದ ನಿಮ್ಮೆಲ್ಲರಿಗೂ ಮನಃಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.




ಡಾ. ಕೆರೆಮನೆ ಶಿವಾನಂದ ಹೆಗಡೆಯವರಿಗೆ ದೆಹಲಿ ಕರ್ನಾಟಕ ಸಂಘದಿಂದ ಕೊಡಮಾಡುವ 2025ನೇ ಸಾಲಿನ ಡಾ. ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು.

ಸಂಘ ಕಳೆದ 76 ವರ್ಷಗಳಿಂದ ಸಾಹಿತ್ಯ, ಕಲೆ, ಸಾಂಸ್ಕೃತಿಕವಾಗಿ ಎಲ್ಲರನ್ನೂ ಒಳಗೊಳ್ಳುತ್ತಾ ಬಂದಿದೆ. ಈ ವೇದಿಕೆಯಲ್ಲಿ ಅನೇಕ ಕಲಾವಿದರು, ವಿದ್ವಾಂಸರು ಸನ್ಮಾನ ಸ್ವೀಕರಿಸಿದ್ದಾರೆ. ನಾಡಿನ ಸಾಧಕರನ್ನು ಗುರುತಿಸಿ ಅವರನ್ನು ಗೌರವಿಸುವುದಕ್ಕಾಗಿಯೇ ನಮ್ಮ ಹಿರಿಯರು ಇಂತಹ ಪ್ರಶಸ್ತಿಗಳನ್ನು ಹುಟ್ಟುಹಾಕಿದ್ದಾರೆ. ವಾರ್ಷಿಕವಾಗಿ ಸರಿ ಸುಮಾರು ನಾಲ್ಕು ಪ್ರಶಸ್ತಿಗಳನ್ನು ದೆಹಲಿ ಕರ್ನಾಟಕ ಸಂಘ ನೀಡುತ್ತ ಬಂದಿದೆ. ಈ ಸಂಘದ ಅಸ್ತಿತ್ವಕ್ಕೆ ರೂವಾರಿಯಾಗಿರುವ ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಕೊಡ್ತಾ ಇದ್ದೀವಿ. ಮುಂದಿನ ವರ್ಷ ಅವರ ಶತಮಾನೋತ್ಸವದ ವರ್ಷ. ಅವರ ಹೆಸರಿನಲ್ಲಿ ಬಹಳ ವಿಜೃಂಭಣೆಯಿಂದ ಕಾರ್ಯಕ್ರಮ ಮಾಡುತ್ತೇವೆ. ಅವರಿಗೆ ಸರಿಯಾದ ಗೌರವ ದೆಹಲಿಯ ನಾಡಿನಲ್ಲಿ ಅವರೇ ಕೊಟ್ಟಂತಹ ಈ ಜಾಗದಲ್ಲಿ ಆಗಬೇಕು ಎಂಬುದು ನಮ್ಮೆಲ್ಲರ ಮಹದಾಸೆ. ತಾವೆಲ್ಲರೂ ಬರುತ್ತೀರಿ. ದೆಹಲಿ ಕರ್ನಾಟಕ ಸಂಘ ಮತ್ತು ನಾಟಕದ ನಂಟು ಬಹಳ ಹಳೆಯದು. ದೆಹಲಿಯಲ್ಲಿ ಎನ್‌ಎಸ್‌ಡಿ (National School of Drama) ಆದ ಕಾಲಘಟ್ಟದಿಂದಲೂ ಜಿವಿಆರ್ ಇಂದ ಬಿ. ಜಯಶ್ರೀ ವರೆಗೂ ಕಲಾವಿದರೊಂದಿಗೆ ಸಂಘದ ಒಡನಾಟವಿದೆ. ನೀವು ಹೇಗೆ 80ರದಶಕವನ್ನು ಸ್ಮರಿಸಿಕೊಡಿದ್ದೀರೋ ಅದನ್ನು ಸಂಘದ ಮಾಜಿ ಅಧ್ಯಕ್ಷರು ಹೇಳುತ್ತಾ ಇದ್ದರು. ನಮ್ಮ ಸಂಘದಲ್ಲಿ ನಡೆದ ಒಂದು ಪರಿಸರ ಸಂರಕ್ಷಣಾ ಕಾರ್ಯಕ್ರಮಕ್ಕೆ ಕಡಲ ತೀರದ ಭಾರ್ಗವ, ಶಿವರಾಮ ಕಾರಂತರು–ಯಾರ ಹೆಸರಲ್ಲಿ ಇವತ್ತು ಪ್ರಶಸ್ತಿ ಕೊಡುತ್ತೇವೆಯೋ ಅವರೇ ಬಂದು ನಮ್ಮ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ ಎಂದರೆ ನಾವೆಂತ ಧನ್ಯರು. ನಾವು ಯಾವ ಸಾಧನೆಯನ್ನೂ ಮಾಡದೆ ಎಲ್ಲಾ ಸಾಧಕರನ್ನು ನೋಡುವ ಸೌಭಾಗ್ಯ ನಮಗೆ ಸಿಕ್ಕಿದೆ. ಇಂದು ಡಾ. ಶಿವರಾಮ ಕಾರಂತ ಪ್ರಶಸ್ತಿ ಕೆರೆಮನೆ ಕುಟುಂಬಕ್ಕೆ ಸಂದಿದ್ದು ಅರ್ಥಪೂರ್ಣ. ಇದೇ ರೀತಿ ರಾಷ್ಟ್ರಕವಿ ಕುವೆಂಪು ಹೆಸರಿನಲ್ಲಿಯೂ ಸಹ ಒಂದು ಪ್ರಶಸ್ತಿ ನೀಡುತ್ತಾ ಇದ್ದೇವೆ. ಇದು ನಿಜಕ್ಕೂ ಅಭಿಮಾನದ ಸಂಗತಿ. ಈ ಸಂಘವನ್ನು ಕಟ್ಟಿದವರು ಎಷ್ಟು ಕಷ್ಟಪಟ್ಟಿರಬಹುದು ಲೆಕ್ಕ ಹಾಕಿಕೊಳ್ಳಿ. ದೆಹಲಿಯಲ್ಲಿ ಬೆರಳೆಣಿಕೆಯಷ್ಟು ಕನ್ನಡಿಗರಿದ್ದಾಗ ಎಲ್ಲ ಕನ್ನಡಿಗರನ್ನು ಒಂದುಗೂಡಿಸಿ ಕನ್ನಡವನ್ನು ಉಳಿಸಿ ಬೆಳೆಸುವಂತಹ ಕಾರ್ಯ ಮಾಡಿದ್ದಾರೆ. ಬಹಳಷ್ಟು ಮಹನೀಯರು ತನು–ಮನ–ಧನಗಳನ್ನು ಇಲ್ಲಿ ದಾನ ಮಾಡಿ ಸಂಘವನ್ನು ಕಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಇದು ಇನ್ನಷ್ಟು ಬೆಳೆಯಲು ತೇಜಸ್ವಿ ನಾಯ್ಕ್, ವಿನಾಯಕ್ ಭಟ್ ಅಂತಹ ಯುವಪೀಳಿಗೆ ಇದೆ. ಕರ್ನಾಟಕದ ಎಲ್ಲಾ ಕಲಾವಿದರನ್ನು ಕರೆಸುವ, ಕನ್ನಡ ಕಟ್ಟುವ ಕೆಲಸ ಮಾಡೋಣ." ಎಂಬ ಆಶಯದ ಮಾತುಗಳನ್ನಾಡುತ್ತ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಅಂತರರಾಷ್ಟ್ರೀಯ ಖ್ಯಾತಿಯ ಮಹಾನ್ ಕಲಾವಿದ ಜಿ.ಆರ್. ಈರಣ್ಣ ಅವರನ್ನು ಪರಿಚಯಿಸುತ್ತಾ ಮುಂದಿನ ದಿನಗಳಲ್ಲಿ ಚಿತ್ರಕಲೆಗೂ ಒಂದು ಪ್ರಶಸ್ತಿಯನ್ನು ಸ್ಥಾಪಿಸಬೇಕು" ಎನ್ನುತ್ತಾ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಎಲ್ಲರನ್ನೂ ಅಭಿನಂದಿಸಿದರು.

ಉಪಾಧ್ಯಕ್ಷೆ ಶ್ರೀಮತಿ ಶೋಭಾ ಗೌಡ ಸ್ವಾಗತಿಸಿದರು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಪೂಜಾ ಪಿ. ರಾವ್ ಅವರು ಕಾರ್ಯಕ್ರಮ ನಿರ್ವಹಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ ವಂದನಾರ್ಪಣೆ ಸಲ್ಲಿಸಿದರು. ತದನಂತರ ಶ್ರೀ ನಂದಿಕೇಶ್ವರ ಪ್ರಸಾದಿತ ಯಕ್ಷಗಾನ ಮಂಡಳಿ, ಶ್ರೀ ಕ್ಷೇತ್ರ ಮೆಕ್ಕೆಕಟ್ಟು ಇವರಿಂದ 'ಕನಕಾಂಗಿ ಕಲ್ಯಾಣ' ಬಡಗುತಿಟ್ಟು ಯಕ್ಷಗಾನ ಪ್ರದರ್ಶನಗೊಂಡಿತು. ❑

# ಕೃತಕ ಬುದ್ಧಿಮತ್ತೆಯನ್ನು ನೆನಪಿಸಿದ ಯಕ್ಷಗಾನ ಪ್ರಸಂಗ!




"ಅಭಿನಯತ್ರಯಂ ಗೀತಾತೋಖ್ಯೇ ಚೇತಿ ಪಂಚಾಂಗಂ ನಾಟ್ಯಂ" ಎಂಬುದು ನಾಟ್ಯಶಾಸ್ತ್ರದ ವ್ಯಾಖ್ಯಾನಕಾರ ಅಭಿನವ ಗುಪ್ತನ ಹೇಳಿಕೆ. ಅಂದರೆ ಈ ಪಂಚ ಅಂಗಗಳಲ್ಲಿ ಎಲ್ಲವೂ ಇದ್ದರೆ ಅದು ನಾಟ್ಯ ಅಥವಾ ನಾಟಕ ಎಂದು ಕರೆಯಿಸಿಕೊಳ್ಳಬಲ್ಲುದು. ಇದರಲ್ಲಿ ಒಂದು ಕೊರತೆಯಾದರೂ ಅದು ಅಪೂರ್ಣವಾಗುತ್ತದೆ. ಈ ಅರ್ಥದಲ್ಲಿ ನಮ್ಮ ಕರ್ನಾಟಕದ ಅದ್ಭುತ ಕಲೆಯೆನಿಸಿಕೊಂಡಿರುವ ಯಕ್ಷಗಾನವೊಂದೇ ಸರ್ವಾಂಗ ಸಮನ್ವಿತ ನಾಟಕವಾಗಿದೆ. ಸಾಹಿತ್ಯ, ಸಂಗೀತ, ನೃತ್ಯ, ದೈಹಿಕಾಭಿನಯ ಮತ್ತು ವೇಷಭೂಷಣಗಳನ್ನು ಆದ್ಯಂತವಾಗಿ ಬಳಸಿಕೊಳ್ಳುವ ಕಲೆಯಾದ ಯಕ್ಷಗಾನವು ಎಲ್ಲೇ ಪ್ರದರ್ಶನವಾದರೂ ಅಲ್ಲಿ ಪ್ರೇಕ್ಷಕರಿಗೆ ರಸಾಸ್ವಾದನೆ ಗ್ಯಾರಂಟಿ.

ಇಂಥ ಒಂದು ರಸಾಸ್ವಾದನೆಗೆ ದೆಹಲಿಯ ಕನ್ನಡ ಬಂಧುಗಳು ಸಾಕ್ಷಿಯಾಗಿದ್ದು ಅಗಷ್ಟ 2, ರವಿವಾರದಂದು. ಬಡಗುತಿಟ್ಟಿನ ಹೊಸ ಮೇಳವಾಗಿ ಪ್ರಸಿದ್ಧಿಪಡೆಯುತ್ತಿರುವ ಶ್ರೀ ನಂದಿಕೇಶ್ವರ ಪ್ರಸಾದಿತ ಯಕ್ಷಗಾನ ಮಂಡಳಿ ಶ್ರೀ ಕ್ಷೇತ್ರ ಮೆಕ್ಕೆಕಟ್ಟು ಇವರು ಮಹಾಭಾರತದಲ್ಲಿ ಬರುವ ಕನಕಾಂಗಿ ಕಲ್ಯಾಣವೆಂಬ ಕಥೆಯನ್ನು ರಸವತ್ತಾಗಿ ಆಡಿ ತೋರಿಸಿದರು.



ಆನಂದ ಅಂಕೋಲ ಅವರ ಭಾಗವತಿಕೆ, ಚಂದ್ರಶೇಖರ ಭಟ್ಟರ ಮದ್ದಲೆ ಹಾಗೂ ಶಿವಾನಂದ ಗುಲ್ವಾಡಿಯವರ ಚಂಡೆಗೆ ಮುಮ್ಮೇಳ ಅದ್ಭುತವಾಗಿ ಪ್ರದರ್ಶನ ನೀಡಿತು. ಬಲರಾಮನ ಮಗಳು ಕನಕಾಂಗಿಯನ್ನು ದುರ್ಯೋಧನನ ಮಗನಿಗೆ ಕೊಟ್ಟು ಮದುವೆ ಮಾಡುವ ಯೋಜನೆಯನ್ನು ಘಟೋತ್ಕಚನ ಚಮತ್ಕಾರ ಶಕ್ತಿಯ ನೆರವಿನಿಂದ ತಪ್ಪಿಸಿ ತನ್ನ ತಂಗಿಯ ಮಗ ಅಭಿಮನ್ಯುವಿಗೆ ಮದುವೆ ಮಾಡಿಸುವಲ್ಲಿ ಕೃಷ್ಣ ಸಫಲನಾಗುವುದೇ ಈ ಪ್ರಸಂಗದ ಸಾರಾಂಶ.

ತನ್ನ ಮಗನಿಗೆ ಮದುವೆ ಮಾಡಿಸಲು ದಿಬ್ಬಣ ಸಹಿತನಾಗಿ ಬರುತ್ತಿರುವ ದುರ್ಯೋಧನ, ಆತನ ಮಗ, ಬೆತ್ತಕ್ಕಿ ಹುಡುಗಿ ಇತ್ಯಾದಿಗಳ ಪ್ರತಿರೂಪವನ್ನು ಘಟೋತ್ಕಚನು ಸೃಷ್ಟಿಸಿ ಬಲರಾಮನ ಬಳಿಗೆ ಕಳಿಸುವ ದೃಶ್ಯವು ಈಗಿನ ಎ.ಐ. ತಂತ್ರಜ್ಞಾನವನ್ನು ನೆನಪಿಸಿತು. ಬಲರಾಮನ ದೂತನ ಪಾತ್ರದಲ್ಲಿ ಖ್ಯಾತ ಹಾಸ್ಯಗಾರ ಪಾತ್ರಧಾರಿ ಹಳ್ಳಾಡಿ ಜಯರಾಮ ಶೆಟ್ಟಿಯವರು ಕಾಲೋಚಿತ ಹಾಸ್ಯ ಸಂಭಾಷಣೆಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಕೃಷ್ಣನ ಪಾತ್ರಧಾರಿ ಆಲೂರು ನಾಗರಾಜ ಮತ್ತು ಬಲರಾಮನ ಪಾತ್ರಧಾರಿ ನರಸಿಂಹ ಗಾಂವಕರ್ ಅವರ ಕುಣಿತ, ಅಭಿಮನ್ಯು, ಘಟೋತ್ಕಚ ಪಾತ್ರಧಾರಿಗಳ ಆರ್ಭಟದ ಹೆಜ್ಜೆಗಳು ಕಣ್ಸೆಳೆದವು. ಆದರೆ ಕೆಲವು ಕಡೆಗಳಲ್ಲಿ ಕೃಷ್ಣ–ಬಲರಾಮರು ತಮ್ಮದೇ ದೂತನ ಮಾತಿಗೆ ತಲೆ ಹಾಕುತ್ತ, ಆತ ಮುಂದೆ ಕರೆದಾಗ ಬಂದು ನಿಲ್ಲುತ್ತಿದ್ದುದು ಕಲಾವಿದರು ಪಾತ್ರದೊಳಗೆ ಸಂಪೂರ್ಣವಾಗಿ ಇಳಿದಿಲ್ಲ, ಹಳ್ಳಾಡಿಯವರ ಅನುಭವದ ಮುಂದೆ ತಲೆಬಾಗಿವೆ ಎಂಬಂತಿತ್ತು. ಅದೇನೇ ಇದ್ದರೂ ಕಾಲಮಿತಿಯೊಳಗೆ, ಪ್ರಸಂಗಕ್ಕೆ ಚ್ಯುತಿ ಬಾರದಂತೆ ಪ್ರದರ್ಶನ ನೀಡಿ ಜನರ ಮನಗೆದ್ದ ಪ್ರತಿಯೊಬ್ಬ ಕಲಾವಿದರಿಗೂ, ಮೊದಲ ಬಾರಿಗೆ ಯಕ್ಷಗಾನದಲ್ಲಿ ಪಾತ್ರ ಮಾಡಿದ ಕು. ಹರ್ಷಿತಾ ಕುಶಾಲಪ್ಪ ಅವರಿಗೂ, ಮೇಳದ ಯಜಮಾನರಾದ ರಂಜಿತ್ ಕುಮಾರ್ ಶೆಟ್ಟಿಯವರಿಗೆ ಭಳಿರೇ ಎನ್ನಲೇಬೇಕು.❑

***ಸಂತೋಷ್ ಕುಮಾರ್ ಉಪಾಧ್ಯಾಯ***

# “ಆಕಾಶ ದೀಪವು ನೀನು”–ಕಾವ್ಯಮಯ ಸಂಜೆ

*“ಮಧುರ ಗೀತೆಗಳು, ಅಪರೂಪದ ಮಾತುಕತೆ! ನಾಡಿನ ಚಿತ್ರರಂಗದ ಮೆಲುದನಿಯ ನಟ, **‘ಪ್ರಣಯರಾಜ’ ಶ್ರೀನಾಥ್** ಅವರ ಜೊತೆ ಅಧ್ಯಕ್ಷರಾದ **ರೇಣುಕುಮಾರ್** ಅವರು ದಿನಾಂಕ 09.08.2026 ರಂದು ನಡೆಸಿಕೊಟ್ಟ ಅಭೂತಪೂರ್ವ ‘ಸಂವಾದ ಸಂಗೀತ’ದ ವಿಶಿಷ್ಟ ರಸಸಂಜೆ **‘ಆಕಾಶ ದೀಪವು ನೀನು’**, ಶ್ರೀನಾಥ್ ಅವರ ವೃತ್ತಿ ಬದುಕಿನ ಅಪರೂಪದ ಘಟನೆಗಳ ನೆನಪುಗಳು ಅವರದೇ ಮಾತುಗಳಲ್ಲಿ.*




ಖ್ಯಾತ ಗಾಯಕ ರಾಮಚಂದ್ರ ಹಡಪದ್ ಅವರ ಗಣಪತಿ ವಂದನೆಯ ಮೂಲಕ ಕಾರ್ಯಕ್ರಮ ಆರಂಭಿಸಿತು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಅವರು ಕಾರ್ಯಕ್ರಮದ ಕೇಂದ್ರ ಬಿಂದು ಪ್ರಣಯರಾಜ ಶ್ರೀನಾಥ್ ಅವರನ್ನು ವೇದಿಕೆಗೆ ಕರೆತಂದರು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಅತಿಥಿಗಳನ್ನು ಸ್ವಾಗತಿಸುತ್ತಾ ಈ ಕಾರ್ಯಕ್ರಮದ ಪ್ರಾಯೋಜಕರಾದ ಕರ್ನಾಟಕ ಬ್ಯಾಂಕ್ 1924 ರಲ್ಲಿ ಹಾಗೂ ದೆಹಲಿ ಕರ್ನಾಟಕ ಸಂಘ 1948 ರಲ್ಲಿ ಸ್ಥಾಪನೆಗೊಂಡಾಗ ರಾಜ್ಯಕ್ಕೆ ಕರ್ನಾಟಕವೆಂಬ ಹೆಸರಿದ್ದಿಲ್ಲ. ಕರ್ನಾಟಕ ಏಕೀಕರಣವಾಗಿದ್ದು 1956ರಲ್ಲಿ. ಏಕೀಕರಣಕ್ಕೂ ಮೊದಲೇ ಈ ಎರಡೂ ಸಂಸ್ಥೆಗಳು ಕರ್ನಾಟಕದ ಹೆಸರನ್ನು ತಮ್ಮದಾಗಿಸಿಕೊಂಡಿದ್ದವು. ಕನ್ನಡಿಗರಿಗೆ ನಮ್ಮದೆಂಬ ಬ್ಯಾಂಕ್ ಈಗ ಉಳಿದಿದ್ದರೆ ಅದು ಕರ್ನಾಟಕ ಬ್ಯಾಂಕ್ ಒಂದೇ ಎಂದ ಅವರು ರಾಮಚಂದ್ರ ಹಡಪದ್ ಹಾಗೂ ಶ್ರೀನಾಥ್ ಅವರೊಂದಿಗಿನ ತಮ್ಮ ಹಳೆಯ ನಂಟನ್ನು ಮೆಲುಕು ಹಾಕುತ್ತ ಎಲ್ಲರಿಗೂ ಸ್ವಾಗತ ಕೋರಿದರು.

ಶ್ರೀಮತಿ ಗೀತಾ ಶ್ರೀನಾಥ್ ದಂಪತಿ, ಬಹ್ರೇನ್ ಕನ್ನಡ ಸಂಘದ ಮಾಜಿ ಉಪಾಧ್ಯಕ್ಷರಾದ ಶ್ರೀ ಎನ್. ಆರ್.ಐ. ರಾಜಕುಮಾರ್, ಕರ್ನಾಟಕ ಬ್ಯಾಂಕ್ ಡಿ.ಜಿ.ಎಂ. ಶ್ರೀ ಬಸವರಾಜ್ ದೇಸಳ್ಳಿ, ಶ್ರೀಮತಿ ತ್ರಿವೇಣಿ ದೇವ್ ಅವರು ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಶ್ರೀ ರೇಣುಕುಮಾರ್ ಅವರು ಈ ರಂಗೇರಿದ ಕಾರ್ಯಕ್ರಮವನ್ನು ಶ್ರೀನಾಥ್ ಅವರೊಂದಿಗೆ ಸಂವಾದಿಸುತ್ತಾ ಮಾತುಕತೆಯ ನಡು ನಡುವೆ ರಾಮಚಂದ್ರ ಹಡಪದ್ ಮತ್ತು ಹರ್ಷ ರಂಜಿನಿ ಹಾಡಿದ ಮಧುರಗೀತೆಗಳನ್ನು ಪೋಣಿಸುತ್ತಾ ಸಂವಾದದ ಮಾಲೆಯನ್ನು ಹೆಣೆಯುತ್ತಾ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

**ರೇಣುಕುಮಾರ್ : ದೆಹಲಿ ಕನ್ನಡಿಗರ ಪ್ರೀತಿ ಹೇಗಿತ್ತು/ ಪ್ರೀತಿ ಕಂಡು ಹೇಗೆನಿಸ್ತು?**

**ಶ್ರೀನಾಥ್** : ಕರ್ನಾಟಕ ಎಂದಾಗ ಇಡೀ ಕರ್ನಾಟಕವೇ ಇಲ್ಲಿದೆ ಅನಿಸ್ತಿದೆ. ಅಷ್ಟು ಪ್ರೀತಿ ವಿಶ್ವಾಸ ಸ್ನೇಹ ನೀವೆಲ್ಲ ತೋರಿಸ್ತಿದೀರಿ. ಮನಸ್ಸಿಗೆ ಬಹಳ ಸಂತೋಷವಾಗಿದೆ.

**ಪ್ರಶ್ನೆ : ನಗುವು ಸಹಜದ ಧರ್ಮ ಅಂತಾರೆ. ಆದರೆ ಎಲ್ಲರೂ ನಗುವುದಿಲ್ಲ. ಇಂದು ಎಲ್ಲರೂ ನಗುತ್ತಿದ್ದಾರೆ. ಈ ನಗುವಿನ ಕಾರಣವೇನು?**

**ಶ್ರೀನಾಥ್** : ಎಲ್ಲರು ಹೃದಯದಿಂದ ನಗುತ್ತಿದ್ದಾರೆ. ನಗು ಮನುಷ್ಯ ಧರ್ಮ. ನಗಬೇಕು, ನಗಿಸಬೇಕು, ಎಲ್ಲರೂ ನಗುತ್ತಿರಬೇಕು. ಇದು ಜೀವನದ ಬಹುದೊಡ್ಡ ತತ್ವ. ಈ ತತ್ವವನ್ನು ಪಾಲಿಸಿದ ಯಾರೂ ಯಾವತ್ತೂ ಕಣ್ಣೀರು ಹಾಕೊಲ್ಲ.

ಶ್ರೀನಾಥ್ ಅವರ ಜನಪ್ರಿಯ ಚಿತ್ರ ಶುಭಮಂಗಳ ಚಿತ್ರದ ಗೀತೆ ಸ್ನೇಹದ ಕಡಲಲ್ಲಿ ಹಾಡಿಗೆ ರಾಮಚಂದ್ರ ಹಡಪದ್ ಜೀವ ತುಂಬಿದರು.

ಶುಭಮಂಗಳ ಹಾಡಿನ ಚಿತ್ರೀಕರಣದ ಸಮಯದಲ್ಲಿ ಖ್ಯಾತ ನಿರ್ದೇಶಕ ಪುಟ್ಟಣ್ಣ ಅವರು ಒಮ್ಮೆ ಕೇಳ್ತಾರೆ, ನೀನು ನನಗೆ ಏನೇನು ಹೇಳಿದ್ದೀಯಾ ನೆನಪಿಸ್ಕೋ? ತಕ್ಷಣ ಒಮ್ಮೆಗೆ ಹೊಳೆಯುವುದಿಲ್ಲ. ನಿಮ್ಮ ನಿರ್ದೇಶನದಲ್ಲಿ ನಟಿಸಬೇಕು’ ಎಂದಿದ್ದೆ ಎಂದು ಉತ್ತರಿಸ್ತಾರೆ. ಇದಲ್ಲ, ‘ಮತ್ತೇನು ಬೇರೆ ಹೇಳಿದ್ದೆ ನೆನಪಿಸ್ಕೋ?’ ಕೇಳ್ತಾರೆ ಪುಟ್ಟಣ್ಣ. ಇವರು ಸ್ಕೂಲಿಗೆ ಹೋಗುವ ದಿನಚರಿ ವಿವರಿಸ್ತಾರೆ. ಹೀಗೆ ಪುಟ್ಟಣ್ಣ ಶ್ರೀನಾಥ್ ಅವರ ಬಾಲ್ಯದ ಬದುಕನ್ನು ಕೇಳಿ ತಿಳಿದು ನೆನಪಿಟ್ಟುಕೊಂಡು’ ಸ್ನೇಹದ ಕಡಲಲ್ಲಿ ಹಾಡನ್ನು ಬರೆಸಿದ್ದರು ಮತ್ತು’ ಪ್ರೀತಿಯ ತೀರವ ಸೇರುವುದೊಂದೆ ಬಾಳಿನ ಗುರಿಯಾಗಿರಬೇಕು’ ಎಂದು ಕಲಿಸಿದ ಗುರುಗಳು. ಇದೇ ಜೀವದ ಮಂತ್ರ. ನನ್ನ ಜೀವನಕ್ಕೆ ಜೋಷ್ ತುಂಬಿದ ನನ್ನ ಗುರುಗಳನ್ನ ನಾನು ಯಾವತ್ತು ಮರೆಯಲ್ಲ. ಪ್ರೀತಿಯ ತೀರವ ಸೇರುವುದೊಂದೆ ನಿಮ್ಮ ಜೀವದ ಮಂತ್ರವಾಗಿರಬೇಕು. ಆಗ ನೀವು ಸಂತೋಷವಾಗಿರ್ತೀರಿ.

**ಪ್ರ : ಕವಿಗಳ ಸಾಹಿತ್ಯವನ್ನು ಸಿನಿಮಾ ಸಾಹಿತಿಗಳು ಸರಳಗೊಳಿಸಿ ಸಾಮಾನ್ಯ ಜನರಿಗೆ ಮುಟ್ಟಿಸಿದರು. ನೀವೇನು ಹೇಳ್ತೀರಿ?**

**ಶ್ರೀನಾಥ್** : ಚಿ. ಉದಯಶಂಕರ್ ಸಾಹಿತ್ಯ ಓದದೇನೆ ಅಷ್ಟು ಚೆನ್ನಾಗಿ ಹಾಡು ಬರೆದಿರುವವರು. ಒಂದು ಪದದ ಬಗ್ಗೆ ಅನುಮಾನದಿಂದ ನೋಡಿದರೆ ಹತ್ತು ಪದ ಕೊಡ್ತಿದ್ದರು. ಆಡುಭಾಷೆಯಲ್ಲಿ ಅಂದ್ರೆ ನಾವು ಮನೆಯಲ್ಲಿ ಮಾತಾಡುವ ಭಾಷೆಯಲ್ಲಿಯೇ ಹಾಡು ಬರಿತಿದ್ರು, ಅದು ಜನರಿಗೆ ಇಷ್ಟ ಆಗುತಿತ್ತು. ಅದಕ್ಕೆ ಪುಟ್ಟಣ್ಣ ಅವರು ಉದಯಶಂಕರ್ ಅವರ ಕೈಲಿ ಆ ಹಾಡು ಬರೆಸಿದ್ದು.

**ಪ್ರ : ನಾರಾಯಣ ಸ್ವಾಮಿ ಶ್ರೀನಾಥ್ ಯಾವಾಗ ಆದ್ರು?**

**ಶ್ರೀನಾಥ್** : ನನ್ನ ಜೀವನದಲ್ಲಿ ಒಂದೇ ಒಂದು ಆಸೆ ಇತ್ತು. ಆದ್ರೆ ಸಿನೇಮಾ ಆರ್ಟಿಸ್ಟೇ ಆಗ್ಬೇಕು ಅಂತ. ಒಂದಿನ ಬಸವನಗುಡಿ ಇಂದ ಸ್ಕೂಲಿಗೆ ಹೋಗೊ ಸಮಯದಲ್ಲಿ ಗಾಂಧಿ ಬಜಾರ್ ಸರ್ಕಲ್ ಹತ್ತಿರ ಗೋಡೆ ಮೇಲೆ ಏನೋ ಅಂಟಿಸ್ತಿದ್ದರು. ಆಗ ನನಗೆ 7 ವರ್ಷ. ಹತ್ತು ನಿಮಿಷ ನಿಂತು ನೋಡ್ತಿದ್ದೆ.




ಪ್ರಣಯರಾಜ ಶ್ರೀನಾಥ್ ಹಾಗೂ ಅವರ ಧರ್ಮಪತ್ನಿ ಅವರನ್ನು ದೆಹಲಿಯ ಏರ್‌ಪೋರ್ಟ್‌ನಲ್ಲಿ ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಸ್ವಾಗತಿಸುತ್ತಿರುವುದು



ಆಮೇಲೆ–'ರೀ ಏನ್ರೀ ಅದು ಅಂಟಿಸ್ತಿದೀರಿ' ಅಂದಿದ್ದಕ್ಕೆ ಆತ ಪೋಸ್ಟರ್ ಅಂಟಿಸಿ ಬಂದು–'ಇದು ಸಿನಿಮಾ ಪೋಸ್ಟರ್' ಅಂದಾಗ ನಾನು 'ಅವರ್ಯಾರು' ಅಂದೆ? ಅವರು ಸಿನಿಮಾ ಹೀರೊ ಅಂದ. 'ನಂದೂ ಒಂದಿನ ಆತರ ಬರುತ್ತೆ ರೀ' ಅಂದಿದಕ್ಕೆ 'ಆತ ಬಂದವನೆ ಕಪಾಳಕ್ಕೆ ಹೊಡೆದು ಶಾಲೆಗೆ ಹೋಗು' ಎಂದು ಬೈದುಬಿಟ್ಟ. ನಮ್ಮ ಮನೆತನ ಲಾಯರ್ ಮನೆತನ. ಆದರೆ ನಾನು ಲಾಯರ್ ಆಗ್ಬೇಕು ಅಥವಾ ಇಂಜಿನಿಯರ್ ಅಥವಾ ಡಾಕ್ಟರ್ ಆಗ್ಬೇಕು ಅನ್ನೋಳ್ಳಿಲ್ಲ. ಸಿನಿಮಾ ನಟ ಆಗೊದೊಂದೇ ನನ್ನ ಗುರಿ ಆಗಿತ್ತು.

ಲಗ್ನಪತ್ರಿಕೆ ಸಿನಿಮಾದಲ್ಲಿ ಮನ್ಮಥನ ಪಾತ್ರ ಸಿಕ್ಕಿತ್ತು. ನನ್ನ ಸ್ನೇಹಿತರೂ ಶೂಟಿಂಗ್ ನೋಡಿದ್ದರು. ಅವರಿಗೆ ತೋರಿಸೋಣ ಎಂದು ಸಿನಿಮಾ ನೋಡಲು ಕರೆದುಕೊಂಡು ಹೋಗಿ ನೋಡಿದಾಗ ನನ್ನ ದೃಶ್ಯ ಬರಲೇ ಇಲ್ಲ. ಸ್ನೇಹಿತರು–"ಎಲ್ಲಿದ್ದಿಯೋ ನೀನು ಕಾಣ್ಲೇ ಇಲ್ಲ" ಅಂತ ಕಿಚಾಯಿಸ್ತಾರೆ. ಇನ್ನೊಂದು ಶೋ ನೋಡಿದಾಗಲೂ ನನ್ನ ಪಾತ್ರ ಕಾಣಲೇ ಇಲ್ಲ. ಆಗ ನೇರ ನಿರ್ದೇಶಕರನ್ನೇ ಕೇಳಿದೆ. ನನ್ನ ದೃಶ್ಯ ಬರ್ಲೇ ಇಲ್ಲ, ಎಲ್ಲಿದೆ ? ಅವರು ಸಿನಿಮಾ ಪೂರ್ತಿ ನೋಡು ಅಂತ ಹೇಳಿದ್ರು.

ಮುಂದಿನ ಪ್ರದರ್ಶನದ ಟಿಕೆಟ್ ಖರೀದಿಸಿ ಪುನಾ ನೋಡಿದಾಗ ಹೆಸರು ತೋರಿಸುವ ಮೊದಲು ಈಶ್ವರ ತನ್ನ ಮೂರನೇ ಕಣ್ಣು ತೆರೆದ ತಕ್ಷಣ ಮನ್ಮಥ ಭೂದಿ ಆಗುತ್ತಾನೆ. ಅಲ್ಲಿಗೆ ನನ್ನ ದೃಶ್ಯ ಮುಗಿಯುತ್ತದೆ. "ಅಯ್ಯೋ ಇಲ್ಲಿದ್ದೀನ" ಅಂದ್ಕೊಂಡೆ.

ಒಮ್ಮೆ ಮಹಾಭಾರತದ ವಿಜಯ ಉತ್ಸವ ಎನ್ನುವ ವಿರಾಟ ಪರ್ವ ಸನ್ನಿವೇಶದ ಒಂದು ನಾಟಕದಲ್ಲಿ ಉತ್ತರ ಕುಮಾರನ ಪಾತ್ರ ಮಾಡ್ತಿದ್ದೆ. ಆಗ ಗವರ್ನರ್ ಆಗಿದ್ದ ವಿ.ವಿ. ಗಿರಿ ಅವರು ಪೌರಾಣಿಕ ನಾಟಕ ನೋಡಬೇಕು ಎಂದು ಎಂ.ಎಸ್. ರಾಮಯ್ಯ ಅವರ ಬಳಿ ಕೇಳಿದಾಗ ಅವರು ನಮ್ಮ ನಾಟಕ ಸೂಚಿಸಿ ನೋಡಲು ಕರೆದುಕೊಂಡು ಬರ್ತಾರೆ. ನಾಟಕದ ದಿನದಂದು ಇಂಜಿನಿಯರಿಂಗ್ ಓದುತ್ತಿದ್ದ ನಮ್ಮಣ್ಣ ಕಾಲೇಜ್ ಟೂರ್ ಹೋಗಿದ್ದ. ಪ್ರದರ್ಶನದ ದಿನವೇ ಆತ ಬೆಂಗಳೂರಿಗೆ ತಲುಪಬೇಕಿದ್ದ ರೈಲು ಮಿಸ್ ಆಯ್ತು. ನಮ್ಮಣ್ಣ ಕೀಚಕನ ಪಾತ್ರ ಮಾಡ್ತಿದ್ದ. ಇನ್ನೇನು ನಾಟಕ ನಿಲ್ಲಿಸುವ ಆತಂಕವುಂಟಾದಾಗ, ಸರ್ ನಾನು ಮಾಡ್ತೀನಿ, ನಾನು ನಮ್ಮಣ್ಣ ಒಟ್ಟಿಗೆ ಪ್ರಾಕ್ಟೀಸ್ ಮಾಡ್ತಿದ್ವಿ, ನನಗೆಲ್ಲ ಡೈಲಾಗ್ಸ್ ಬರುತ್ತೆ" ಎಂದು ಹೇಳಿ ಕೀಚಕನ ಪಾತ್ರ ಮಾಡಿ ಚಪ್ಪಾಳೆ ಗಿಟ್ಟಿಸಿದೆ. ಅಂದು ಎರಡು ಪಾತ್ರ ಮಾಡಿದ ನನಗೆ ಎಂ.ಎಸ್. ರಾಮಯ್ಯ ಅವರು 500 ರೂಪಾಯಿಯ ದೊಡ್ಡ ನೋಟು ಕೊಟ್ಟರು.

ಪೇಪರ್ ಅಲ್ಲಿ ಈ ಸುದ್ದಿ ನೋಡಿದ ಎಸ್.ಕೆ. ಎಚಾರಿ ಅವರು ಯಾರು ಈ ಹುಡುಗ ಎಂದು ನಮ್ಮ ತಂದೆ ಸ್ನೇಹಿತರಾದ ಭಟ್ ಅವರನ್ನ ಕೇಳಿದ್ದರು. ಅವರು ನನ್ನ ಸ್ನೇಹಿತನ ಮಗ ಎಂದು ಪರಿಚಯಿಸಿದರು. ಹೀಗೆ 1968ರಲ್ಲಿ ನಾಯಕನಾಗಿ ಆಯ್ಕೆ ಆದೆ. ನಾನೇ ಮನಸ್ಸಿನಲ್ಲಿ ಹೆಸರು ಬದಲಾಯಿಸಿಕೊಳ್ಳಬೇಕು ಅಂತ ಹೆಸರು ಆಯ್ಕೆ ಮಾಡಿಕೊಂಡಿದ್ದೆ. ಆದರೆ ಹೇಳಿರಲಿಲ್ಲ. ಮೈಸೂರಿನ ಪ್ರೀಮಿಯರ್ ಸ್ಟುಡಿಯೋದಲ್ಲಿ ಶೂಟಿಂಗ್ ಆಗ್ತಿತ್ತು. ನಿರ್ದೇಶಕರಾದ ಎಸ್.ಕೆ. ಎಚಾರಿ ಅವರು ಜೋರಾಗಿ 'ಶ್ರೀನಾಥ್' ಅಂತ ಕರೆದರು. ನಾನು ಯಾರನ್ನೋ ಕರೀತಿರಬೇಕು ಅನ್ಕೊಂಡೆ. ಮತ್ತೆ "ಹೇ ಶ್ರೀನಾಥ್, ಶ್ರೀನಾಥ್" ಅಂತ ಕರೆದು ನಿನ್ನನ್ನೆ ಎಂದಾಗ ಹತ್ತಿರ ಹೋದೆ. ಇನ್ಮೇಲೆ ನಿನ್ನ ಹೆಸರು "ಶ್ರೀನಾಥ್" ಅಂತ ಹೇಳಿದರು. ನಾನು ಅಂದುಕೊಂಡಿದ್ದ ಹೆಸರು ಹೇಳಿದರೆ ನಾಯಕನನ್ನೆ ಬದಲಿಸುವರೇನೋ ಎಂದುಕೊಂಡು ನಾನು ಏನೂ ಹೇಳಲಿಲ್ಲ.. ಅಮೇಲೆ ಒಂದು ದಿನ–"ಸರ್ ನಾನು ಗೌತಮ್ ಅಂತ ಹೆಸರು ಇಟ್ಕೊಳ್ಳೋಣ ಅಂದ್ಕೊಂಡಿದ್ದೆ ಅಂದೆ". ಏಯ್ ! ಬುದ್ಧನ ತರ ಆಗ್ತೀಯಾ, ಯಾಕಾಗ್ತಿ ಈ ಶ್ರೀನಾಥ್ ಹೆಸರು ಚೆನ್ನಾಗಿದೆ, ಲಕ್ಷ್ಮೀ ಭಾಗ್ಯ ಆಗುತ್ತೆ" ಅಂದ್ರು. ಹೀಗೆ ನಾನು ಶ್ರೀನಾಥ್ ಆದೆ.

**ಪ್ರ : ಸಿನಿಮಾ ಹೆಸರಿಡುವಾಗೇನಾದ್ರು ನಿಮ್ಮ ಪಾತ್ರ ಇರುತಿತ್ತೆ?**

**ಶ್ರೀನಾಥ್** : ಆಗ ಸಾಮಾನ್ಯವಾಗಿ ಮಾತಾಪಿತೃಗಳು ಗುಣ ನೋಡಿ ಹೆಣ್ಣು ತರುತಿದ್ದರು. ನಾನು ಅಪ್ಪನಿಗೆ ಗುಣ ನೋಡಿ ಹೆಣ್ಣು ತಂದಿದ್ದೀನಿ. ಮದುವೆ ಮಾಡಿ ಎಂದು ಕೇಳಿದ್ದೆ. ಆಗಲೇ ಅಂದಿನ ಕಾಲದಲ್ಲಿ ನಾನು ಲವ್ ಮಾಡಿಬಿಟ್ಟಿದ್ದೆ.

ಗುಣ ನೋಡಿ ಹೆಣ್ಣು ಕೊಡು ಚಿತ್ರದ "ನೀ ಇರಲು ಜೊತೆಯಲ್ಲಿ" ಬಳಿಕ ಹುಡುಗಾಟದ ಹುಡುಗಿ ಚಿತ್ರದ "ಬೆಳ್ಳಿಯ ತೆರೆಯ ಮೋಡದ ಮರೆಯ" ಹಾಡಿಗೆ ಪ್ರೇಕ್ಷಕರು ತಲೆದೂಗಿದರು.

**ಪ್ರ : ನಿಮ್ಮ ಮತ್ತು ಮಂಜುಳ ಜೋಡಿ, ಅತ್ಯಂತ ಜನಪ್ರಿಯ ಜೋಡಿ. ನಿಮ್ಮ ಅವರ ಒಡನಾಟ ಹೇಗಿತ್ತು?**

**ಶ್ರೀನಾಥ್** : ವಿರಾಟ ಪರ್ವ ನಾಟಕ ಮಾಡುವ ಸಂದರ್ಭದಲ್ಲಿ ಉತ್ತರ ಕುವಾರಾನ ಪಾರ್ಟ ಮಾಡ್ತಿದ್ದೆನಲ್ಲ. ತಂಗಿ ಉತ್ತರೆ ಪಾತ್ರದಲ್ಲಿ ಮಂಜುಳ ಇದ್ದರು. ಅಣ್ಣ ಅಣ್ಣ ಎಂದು ಕರೆಯುತ್ತಿದ್ದ ಮಂಜುಳ ಆಗ ಬಹಳ ಪುಟ್ಟ ಹುಡುಗಿ. 35 ಚಿತ್ರಗಳಲ್ಲಿ ಒಟ್ಟಿಗೆ ನಟಿಸುವಾಗಲೂ ಅಣ್ಣನೇ ಆಗಿದ್ದೆ. ಸಾಕಷ್ಟು ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ಕ್ಲೋಸ್‌ಅಪ್ ಸನ್ನಿವೇಶಗಳಲ್ಲಿ "ಅಣ್ಣ ಪ್ರೊಡ್ಯೂಸರ್ ದುಡ್ಡುಕೊಟ್ಟಿಲ್ಲ ನಾವು ನಟಿಸೋದಾ" ಎಂದು ಹೇಳುತಿದ್ದರು. ನಾನು "ನಟಿಸಮ್ಮ ನಾನು ಇಸ್ಕೊಡ್ತೀನಿ" ಅಂತಿದ್ದೆ. ಹಳ್ಳಿ ಭಾಷೆಯ ಕನ್ನಡವನ್ನು ಅರಳು ಹುರ್ದಂಗೆ ಮಾತನಾಡುತಿದ್ದ ಅದ್ಭುತ ನಟಿ. ಆ ತರ ಮಾತಾಡುವ ಬೇರೆ ನಟಿಯನ್ನು ನೋಡಲಿಲ್ಲ. ಸಾಯುವ ಸಮಯದಲ್ಲೂ ಅಣ್ಣ ನಾನು ಹುಷಾರಾಗ್ತೀನ? ಎಂದು ಕೇಳಿದಾಗ ನಾಳಿದ್ದು ಬಂದು ಹೇಳ್ತೀನಿ ಅಂದಿದ್ದೆ; ಆ ನಾಳಿದ್ದು ಈ ಅಣ್ಣನಿಗೆ ಬರಲೇ ಇಲ್ಲಾ. ಈ ಸಮಾರಂಭದಲ್ಲಿ ಇರಬೇಕಿತ್ತು ಆಕೆ. ಮಾತಾಡಬೇಕಾದ್ದು ನೂರೆಂಟು ಇತ್ತು. ಎಲ್ಲೆ ಇರಲಿ ಆಕೆಯ ಆತ್ಮ ಚೆನ್ನಾಗಿರಲಿ.

**ಪ್ರ: ವಿಕಿಪೀಡಿಯಾ ಮಾಹಿತಿ ವಯಸ್ಸಿನ ಲೆಕ್ಕ ತಪ್ಪು ಕೊಟ್ಟಿದೆ. ನಿಮ್ಮ ವಯಸ್ಸು?**

ನನಗೆ mathematic ಬರಲ್ಲ. ಅದಕ್ಕೆ ಪುಟ್ಟಣ್ಣ ಕಣಗಾಲ್ 'ನಾಲ್ಕು ಒಂದ್ಲ ನಾಲ್ಕು ನಾಲ್ಲ ಎರಡ್ಲ ಎಂಟು' ಅಂತ ಬರೆಸಿದ್ರು. ನೀವು ಏನು ಬೇಕಾದ್ರೂ ಕೇಳಿ ಲೆಕ್ಕ ಮಾತ್ರ ಬರಲ್ಲ. ಅದಕ್ಕೇ ಕ್ಲಾಸಿಗೆ ಚಕ್ಕರ್ ಹೊಡೀತಾ ಇದ್ದೆ, ಪಾಪ ನಮ್ಮಪ್ಪ ಬಹಳ ಆಸೆಯಿಂದ ನ್ಯಾಷನಲ್ ಕಾಲೇಜ್ ಸೇರಿಸಿದ್ರು. ಗಣಿತ ಆಗಲ್ಲ ಎಂದು ಬೇರೆ ಬೇರೆ ಕಾಲೇಜ್ ಬದಲಿಸಿದರೂ ಒಲವು ನಾಟಕ ಸಿನೇಮದಲ್ಲಿಯೇ ಇತ್ತು. ಆಗ ತಂದೆಯ ಕೋರ್ಟ್ ಕೆಂಪೇಗೌಡ ಹತ್ರನೇ ಇತ್ತು. ಅಲ್ಲಿ ಹದಿನೆಂಟು ಚಿತ್ರಮಂದಿರಗಳಿದ್ದವು. ಸಿನೇಮಗಳು ನಡಿತಾನೇ ಇರ್ತಿದ್ವು. ಬೆಳಿಗ್ಗೆ ಮಾರ್ನಿಂಗ್ ಶೋ ನೋಡೋದು ಒಂದು ಕ್ಲಾಸ್ ಅಟೆಂಡ್ ಮಾಡಿ ಮ್ಯಾಟಿನಿ ನೋಡೋದು ಮನೆಗೆ ಬರೋದು. ಒಂದಿನ ಅಪ್ಪ ಬೇಗ ಬಂದು ಕಾಯ್ತಾ ಇದ್ದಾರೆ. 'ಏನಪ್ಪ ಇಷ್ಟು ಬೇಗ?' ಅಂತಾರೆ. ಅಪ್ಪ, ಸ್ಪೆಷಲ್ ಕ್ಲಾಸಿತಪ್ಪ. ಅಪ್ಪ–'ಹೌದೇನಪ್ಪ, ಭಾಳ ಖುಷಿಯಾಯ್ತು ನಂಗೆ. ಬಹಳ ಸಂತೋಷವಾಗಿದೀನಪ್ಪ. ಅಂದ್ರು. ಯಾಕಪ್ಪ ಅಂದೆ, "ನಿನಗೆ ಕೆಮಿಸ್ಟ್ರಿಯಲ್ಲಿ 68% ಬಾಟನಿಲಿ 73%,





ಜುವಾಲಜಿಲಿ ನೋಡ್ತೀನಿ 81% ತಗೊಂಡ್ಬಿಟ್ಟಿದ್ದೀಯಾ." ಅಂತಾರೆ. ಆಗ ನಂಗೆ ಗೊಂದಲ ಆಯ್ತು, ಯಾವಾಗ ಪರೀಕ್ಷೆ ಆತು? ಮಾರ್ಕ್ಸ್ ಯಾರ ಕೊಟ್ರು? ಯಾರೋ ಫ್ರೆಂಡ್ಸ್ ಎಲ್ಲ ಬರೆದು ಏನೋ ಆಗಿರಬಹುದು" ಅಂತ ತಲೆ ಕೆರೆದುಕೊಂಡೆ. ಇನ್ನೂ ಇಂಪ್ರೂವ್ ಆಗತ್ತಾ? ಅಂದ್ರು. ಆಗತ್ತಪ್ಪ ನಿಮ್ಮ ಸಂತೋಷಕ್ಕೆ ನೂರಕ್ಕೆ ನೂರು ತಗೋತೀನಿ" ಅಂದೆ. ಅಪ್ಪ ಕೋರ್ಟಿಂದ ಬರುವಾಗ ಕಾಲೇಜಿಗೆ ಹೋಗಿ ಬಂದಿದ್ರು. ಅಲ್ಲಿ ನೋಟೀಸ್ ಬೋರ್ಡ್ ಮೇಲೆ ನನ್ನ ಅಟೆಂಡೆನ್ಸ್ ನೋಡ್ಕೊಂಡು ಬಂದಿದ್ರು. ಅವು ಮಾರ್ಕ್ಸ್ ಅಲ್ಲ ಅಟೆಂಡೆನ್ಸ್. ಕೊನೆಗೆ ಅಪ್ಪ ಯಾಕೋ ಹಿಂಗ್ ಮಾಡ್ತೀಯಾ? ಅಂದಾಗ ನಂಗೆ ಸಿನೇಮ ಮಾಡ್ಬೇಕು ಅಂದೆ.

**ಪ್ರ : ಆರತಿ ನಮ್ಮ ಮೆಚ್ಚಿನ ನಾಯಕಿ. ಆರತಿ ಅವರು ಮೈಸೂರು ಕನ್ನಡ ಮಾತನಾಡುತ್ತಿದ್ದ ನಟಿ. ತಮ್ಮ ಕಾಲಕ್ಕಿಂತ 5 ವರ್ಷವಾದರೂ ಮುಂದಿದ್ದಂತ ನಟಿ. ಅವರ ಬಗ್ಗೆ ಮಾತಾಡಿ ?**

ನನ್ನ ಜೊತೆ 51 ನಾಯಕಿಯರು ನಟಿಸಿದ್ದಾರೆ. ಆರತಿ ಬಹಳ ಓದಿ ಕೊಂಡಂತಹ ನಟಿ. ಸದಾ ಕನ್ನಡವಾಗಲಿ, ಇಂಗ್ಲೀಷ್ ಆಗಲಿ ಏನಾದರೊಂದು ಓದುತ್ತಾ ಇರ್ತಿದ್ರು. ಓದಷ್ಟೇ ಅಲ್ಲ ತಮ್ಮ ಸುತ್ತಲಿನ ಪ್ರಪಂಚದಲ್ಲಿ, ಸರಕಾರದಲ್ಲಿ ಏನ್ ನಡೀತಾ ಇದೆ ಅದನ್ನೂ ಗಮನಿಸ್ತಿದ್ರು. ಆಕೆ ಒಳ್ಳೆಯ ನಟಿ. ನನ್ನ ಗುರು ಪತ್ನಿಯೂ ಆದ್ದರಿಂದ ಅವರ ಬಗ್ಗೆ ಅಪಾರ ಗೌರವವಿದೆ.

ಧರ್ಮಸೆರೆ ಸಿನಿಮಾ ಚಿತ್ರೀಕರಣದ ಸಮಯದಲ್ಲಿ ಮೈಸೂರಿನ ಹೋಟೆಲಿನಲ್ಲಿ ಊಟ ಮಾಡಿ ಫುಡ್ ಪಾಯಿಸನ್ ಆಗಿ ಹುಷಾರಿಲ್ಲದೆ ಮಲಗಿದ್ದೆ ನಾನು. 50 ಸಲ ವಾಂತಿ ಭೇದಿಯಿಂದ ನಿತ್ರಾಣನಾಗಿ ಎದ್ದು ನಿಲ್ಲಲೂ ಆಗದಂತಾಗಿತ್ತು. ಮ್ಯಾನೇಜರ್ ಶಮಿ ಡಾಕ್ಟರ್ ಕರೆಸಿ ಡ್ರಾಪ್ಸ್ ಹಾಕಿಸಿ ನೋಡಿಕೊಂಡ್ರೂ ಸರಿಯಾಗಲಿಲ್ಲ. ನನ್ನ ಪತ್ನಿ ಗರ್ಭಿಣಿ ಇದ್ರು. ಗುರು ಪುಟ್ಟಣ್ಣಜೀ ಬೇರೆ ಸಿನಿಮಾಗೆ ಡೇಟ್ ಕೊಟ್ಟು ನಾಟಕ ಹಾಡ್ತಿದಾನೆ ಅಂತ ತಿಳಿದರು. ಅನಾರೋಗ್ಯದಲ್ಲಿನ ನಾನು ಕಾರ್ ಮಾಡಿಕೊಂಡು ಬೆಂಗಳೂರಿಗೆ ಹೊರಟು ಹೋದೆ.

ಆಗ ಪುಟ್ಟಣ್ಣ ಅವರು ವೀರಸ್ವಾಮಿಗೆ ಕರೆ ಮಾಡಿ ಶ್ರೀನಾಥ್ ಮೋಸ ಮಾಡಿದ್ದಾನೆ ಮನೆಗೆ ಹೋಗಿ ನೋಡಿಬನ್ನಿ ಅಂತಾರೆ. ವೀರಸ್ವಾಮಿ ಮನೆಗೆ ಬಂದು ನೋಡಿ–ಸುಳ್ಳು ಗಿಳ್ಳು ಏನಿಲ್ಲ. ಅವನಿಗೆ ನಿಜವಾಗಿಯೂ ಹುಷಾರಿಲ್ಲ." ಎಂದು ಪುಟ್ಟಣ್ಣನವರಿಗೆ ಸಮಾಧಾನ ಹೇಳ್ತಾರೆ. ಮತ್ತೆ ಶೂಟಿಂಗ್ ಆರಂಭವಾಯ್ತು. ಆದರೆ ಈ ಘಟನೆಯ ನಂತರ ಆರತಿ, ಪುಟ್ಟಣ್ಣ ಇಬ್ಬರೂ ಮಾತಾಡ್ತಿದ್ದಿಲ್ಲ. ಆದರೆ ಮನಸ್ಸಿಗೆ ಎಷ್ಟೇ ಬೇಸರವಾಗಿರಲಿ ನಟಿಸುವಾಗ ಕ್ಯಾಮೆರಾ ಆನ್ ಅಂದಾಗ ಎಲ್ಲ ಮರೆತು ತನ್ಮಯತೆಯಿಂದ ನಟಿಸುತ್ತಿದ್ದೆವು. ಆರತಿ ಅದ್ಭುತವಾಗಿ ನಟಿಸಿದ್ರು. ಮತ್ತೆ ಎಲ್ಲ ಸರಿಯಾಯ್ತು.

ಧರಣಿ ಮಂಡಲ ಮಧ್ಯದೊಳಗೆ ಚಿತ್ರದ ಹಾಡು "ಗೆಳತಿ ಓ ಗೆಳತಿ" ರಾಮಚಂದ್ರ ಭಾವತುಂಬಿ ಹಾಡಿದರು.

**ಪ್ರ: ಗುರುಗಳೊಂದಿಗಿನ ತಮ್ಮ ಅನಂತ ಕಾಣಿಕೆ. ಮೈಲುಗಲ್ಲಿನ ಸಿನಿಮಾ ಮಾನಸ ಸರೋವರ ಹಾಗೂ ತಮ್ಮ ವಿಭಿನ್ನ ಪಾತ್ರದ ಬಗ್ಗೆಹೇಳಿ?**

**ಶ್ರೀನಾಥ್** : ಅದು ಮಾನಸ ಸರೋವರ ಹೇಗಾಯ್ತು? ಹೇಗೆ ಆ ಸಿನೇಮ ಮೂಡಿತು ಅಂತ ಹೇಳಲೇಬೇಕು. ಹತ್ತಾರು ಕಡೆ ಹೇಳಿದೀನಿ, ನೂರಲ್ಲ, ಇನ್ನೂರು ಬಾರಿಯೂ ಹೇಳಬಲ್ಲೆ. ಧರ್ಮಸೆರೆ ನಂತರ ಸ್ವಲ್ಪ ಮನಸ್ತಾಪದಿಂದಾಗಿ ಮಾತು ನಿಂತುಹೋಗಿತ್ತು. ಪುಟ್ಟಣ್ಣ ಅಷ್ಟಕ್ಕಷ್ಟೇ ಮಾತಾನಾಡುತ್ತಿದ್ದರು. ಎಲ್ಲೋ ಒಂದು ಕೊಂಡಿ ಮಿಸ್ ಆಗಿದೆ ಅನಿಸ್ತಿತ್ತು. ಅದು 1981 ಸಮಯ. ನಾಡಿನ ಒಬ್ಬ ಪ್ರಖ್ಯಾತ ನಿರ್ದೇಶಕ (ನನ್ನ ದೃಷ್ಟಿಯಲ್ಲಿ ಅವರು ಪ್ರಪಂಚದ ಅತ್ಯಂತ ಶ್ರೇಷ್ಠ ನಿರ್ದೇಶಕರು) ಹನ್ನೊಂದು ತಿಂಗಳು ಕೆಲಸವಿಲ್ಲದೇ ತೊಂದರೆಯಲ್ಲಿದ್ದ ಕಾಲ. ಒಬ್ಬ ಪ್ರೊಡ್ಯೂಸರ್ ಕಥೆ ಕೊಡಿ ಸಿನೇಮಾ ಮಾಡಿ ಅಂತ ಬಂದ. ಪುಟ್ಟಣ್ಣ ವುಡ್‌ಲ್ಯಾಂಡ್ಸ್ ಹೋಟೆಲ್‌ನಲ್ಲಿ ಹತ್ತು ದಿನ ಕೂತು ಕಥೆ ಬರೆದು ಪ್ರೊಡ್ಯೂಸರ್‌ಗೆ ಕಥೆ ಹೇಳಿದಾಗ– 'ಚೆನ್ನಾಗಿದೆ ಚೆನ್ನಾಗಿಲ್ಲ' ಏನೊಂದೂ ಹೇಳದೆ ನಾಳೆ ಬರ್ತೀನಿ ಅಂತ ಹೇಳಿ, ಹೊಟೇಲ್ಲಿನವರಿಗೆ ಪುಟ್ಟಣ್ಣ ಅವರಿಂದ ಬಿಲ್ ತಗೋ "ಅಂತ ಪ್ರೊಡ್ಯೂಸರ್ ಬಿಲ್ ಕೊಡದೆ ಹೋಗಿದ್ದ. ರೂಂ ಖಾಲಿ ಮಾಡಬೇಕು ದುಡ್ಡಿಲ್ಲ, ಆಗ ಪುಟ್ಟಣ್ಣ ನನ್ನ ನೆನಪಿಸಿಕೊಂಡು ಫೋನ್ ಮಾಡಿ ಕರೆದರು. ನಾನು ಹೋಟೆಲ್‌ಗೆ ಹೋದಾಗ–ಮನೆಗೆ ಕರ್ಕೊಂಡು ಹೋಗ್ತೀಯೇನೊ" ಅಂತ ಕೇಳಿ ಕಥೆ ಹೇಳಿದಾಗ ಹೋಟೆಲಿನವರಿಗೆ ಸಿಕ್ಕಾಪಟ್ಟೆ ಬೈದು ದುಡ್ಡು ಕೊಟ್ಟು ಪುಟ್ಟಣ್ಣ ಅವರನ್ನು ಮನೆಗೆ ಬಿಟ್ಟು ಬಂದೆ.

ಅಷ್ಟೊತ್ತಿಗೆ ಶಿಕಾರಿ ಅಂತ ಸಿನೇಮಾ ತೆಗೆದು ದುಡ್ಡೆಲ್ಲ ಕಳಕೊಂಡಿದ್ದೆ. ಅದು ಜ್ಞಾಪಕ ಇದ್ದ ಪುಟ್ಟಣ್ಣ 'ನಿನಗೆ ಲಾಸ್ ಆಗಿ ಹೋಗಿದೆ ಇಲ್ಲಾಂದ್ರೆ ಪಿಕ್ಚರ್ ಮಾಡ್ತಿದ್ದೆ, ಪರವಾಗಿಲ್ಲ ಬಿಡು ಕಣಪ್ಪ' ಅಂದ್ರು. ನನಗೆ ಅಳು ತಡೆಯೋಕೆ ಆಗ್ಲಿಲ್ಲ. ರಾಘವೇಂದ್ರ ಸ್ವಾಮಿ ಹತ್ರ ಕೇಳಿಕೊಂಡೆ ಈ ಪರಿಸ್ಥಿತಿ ಬಗ್ಗೆ ಮರುಗಿದೆ. ಮರುದಿನ ಉತ್ತರ ಕರ್ನಾಟಕದಿಂದ ವರ್ಗೀಸ್ ಅಂತ ಒಬ್ಬರು, ಕಮಲಾಕರ್ ಅಂತ ಒಬ್ಬರು ಬಂದು ಸಿನಿಮಾ ಮಾಡುವ ಪ್ರಸ್ತಾಪ ಮಾಡಿದರು. ಪುಟ್ಟಣ್ಣ ಅವರ ಜೊತೆ ಸಿನಿಮಾ ಮಾಡಬೇಕೆಂಬ ಆಸೆ ವ್ಯಕ್ತಪಡಿಸಿದಾಗ ನನಗೆ ಸಂತೋಷ ಆಯ್ತು. ಹೋಗಿ ಪುಟ್ಟಣ್ಣ ಹತ್ರ ಅವರು ಯಾವ ಕಂಡೀಷನ್ ಹಾಕಿದ್ರೂ ಒಪ್ಕೊಳ್ಳಿ. ನಾನು ದುಡ್ಡು ಹಾಕ್ತೀನಿ, ಆದರೆ ಮೂರನೇ ಪಾರ್ಟ್‌ನರ್ ಯಾರು ಅಂತ ಹೇಳಬೇಡಿ ಅಂತ ಹೇಳಿದೆ. ಪುಟ್ಟಣ್ಣ ಅವರಿಗೆ ದುಡ್ಡಿನ ಅವಶ್ಯಕತೆ ಇದ್ದಂತ ಸಂದರ್ಭದಲ್ಲಿ 50 ಸಾವಿರ ಕಂತೆ ಕೊಟ್ಟರು. ಪುಟ್ಟಣ್ಣ ಹದಿನೈದು ದಿನ ಬಿಟ್ಟುಬರಲು ಹೇಳಿದರು. ನಂತರ ನಿರ್ಮಾಪಕರ ಹತ್ತಿರ 'ಆ ಮೂರನೆ ಪಾರ್ಟ್‌ನರ್ ಯಾರು ಹೇಳಿ ಅವರು ನನಗೆ ಇಷ್ಟ ಆಗದೆ ಹೋದರೆ ಚಿತ್ರ ಅರ್ಧಕ್ಕೆ ನಿಂತು ನಷ್ಟ ಆಗುತ್ತದೆ' ಅನ್ನುತ್ತಾರೆ. ಶ್ರೀನಾಥ್ ಎಂದು ತಿಳಿದ ಅವರು ಸೀದಾ ಮನೆಗೆ ಬಂದ್ರು. ನನ್ನನ್ನೇ ತುಸು ಹೊತ್ತು ನೋಡಿದ ಪುಟ್ಟಣ್ಣ ಭಾವುಕರಾಗಿ– "ಯಾಕೋ ನನಗೆ ಹೇಳಲಿಲ್ಲಾ" ಅಂತ ಕೇಳಿದ್ರು. ಪುಟ್ಟಣ್ಣಾ ನೀವು ಸಿನೇಮಾ ಮಾಡಿ, ನಾನು ಅಂತ ಗೊತ್ತಾಗಿದ್ರೆ ನನ್ನೇ ಹೀರೋ ಮಾಡಬೇಕಂತ ನಿಮ್ಮ ಮನಸ್ಸಲ್ಲಿ ಬರುತ್ತೆ, ನೀವು ಸಿನೇಮಾ ಮಾಡಬೇಕು ಅಷ್ಟೇ. ಐದು ನಿಮಿಷ ನನ್ನ ಮುಖನೇ ನೋಡ್ತಾ ಕೂತ ಪುಟ್ಟಣ್ಣ ; "ನ ಭೂತೋ ನ ಭವಿಷ್ಯತಿ"–ಕರ್ನಾಟಕ ಇದುವರೆಗೆ ನೋಡಿರದ ಇನ್ನೊಬ್ಬ ಶ್ರೀನಾಥ್‌ನನ್ನು ತೋರಿಸ್ತೀನಿ. ಇದುವರೆಗೂ ಜನ ನೋಡಿರಬಾರದು ಆ ಶ್ರೀನಾಥನನ್ನು ಜನ ನೋಡ್ತಾರೆ" ಅಂದ್ರು. ಇದು ಮಾನಸ ಸರೋವರ.

'ನೀನೇ ಸಾಕಿದ ಗಿಣಿ' ಹಾಡಿನ ಸಂದರ್ಭದಲ್ಲಿ ಪುಟ್ಟಣ್ಣ ಮನೆಗೆ ಫೋನ್ ಮಾಡಿ ಶ್ರೀನಾಥ್ ಬಂದ್ರೆ ಎಷ್ಟೊತ್ತಾಗಿದ್ರೂ ನನ್ನ ಹತ್ರ ಬರಕ್ಕೇಳು ಅಂತ ನನ್ನ ಶ್ರೀಮತಿ ಗೀತಾ ಹತ್ರ ಹೇಳಿರ್ತಾರೆ. ನಾನು ಅದೇ ರೀತಿ 11:30 ಗೆ ಅವರತ್ರ ಹೋದೆ. ವಿಜಯಭಾಸ್ಕರ್ ಅಲ್ಲೇ ಇದ್ರು. ಯಾರೂ ಮನೆಗೆ ಹೋಗಿರಲಿಲ್ಲ. ವಿಜಯ ಭಾಸ್ಕರ್ ಅವರಿಗೆ ಬಾರಿಸಿ ಅಂತಾರೆ. ಅವರು ಸಂಗೀತ



ಕೊಡ್ತಾರೆ ಪುಟ್ಟಣ್ಣ ಹಾಡ್ತಾರೆ. ಹೇಗಿದೆ ಅಂತಾರೆ. "ಹಾಡು ಹೇಗಿದ್ಯೋ?" ಅಂತಾರೆ. ನಾನು ಏನು ಮಾತಾಡಲ್ಲ. ಮತ್ತೆ ಕೇಳಿದ್ರು, ವಿಜಯ ಭಾಸ್ಕರ್ ಅವರನ್ನು ನಾಳೆ ಸಿಗಲು ಕಳಿಸಿ ಅದೇ ಪ್ರಶ್ನೆ ಕೇಳಿದ್ರು. ನಾನು "ಬೇಡ ಪುಟ್ಟಣ್ಣಾ ಈ ಹಾಡು", "ಬೇಕು"– ಅಂದರು. 'ಬೇಡ ಪುಟ್ಟಣ್ಣಾ' ಅಂದೆ. ಯಾಕೆ ಬೇಡ ಅಂತ ಒಂದ್ ಕಾರಣ ಹೇಳು ಅಂದ್ರು. ಈ ಹಾಡು ಕೇಳಿದವರು ನೀವು ಯಾರನ್ನೋ ಮನಸ್ಸಲ್ಲಿಟ್ಟುಕೊಂಡು ಈ ಹಾಡು ಬರೆದಿದ್ದೀರಿ ಅನ್ಕೋತಾರೆ. ಅದು ನನಗೆ ಇಷ್ಟವಿಲ್ಲ. ಅಂದೆ. ಆಗ ಪುಟ್ಟಣ್ಣ, ಹತ್ತು ವರ್ಷವಾದ ಮೇಲೆ ನಾನಿಲ್ಲದಿರಬಹುದು, ನೀನಿಲ್ಲದಿರಬಹುದು, ಆದರೆ ಈ ಹಾಡು ನೂರು ವರ್ಷಗಳಾದರೂ ಇರತ್ತೆ ಕಣೋ. ಅದಕ್ಕೆ ಈ ಹಾಡು ಬೇಕು ಅಂದ್ರು. ಅಂತಹ ನಿರ್ದೇಶಕ, ಅಂತಹ ಗುರುಗಳನ್ನು ಪಡೆದದ್ದು ನನ್ನ ಪುಣ್ಯ. ನಿಮ್ಮಂತಹ ಶಿಷ್ಯನನ್ನು ಪಡೆದದ್ದೂ ಅವರ ಪುಣ್ಯ. ಸಾಧನೆಯ ಗುಟ್ಟು ಸಾಧಕರ ಮಾತಿನಲ್ಲೆ ತಿಳಿಯಲು ಸಾಧ್ಯ. ಗುರು ಶಿಷ್ಯರ ಸಂಬಂಧ ಹೇಗಿರಬೇಕು, ಗೌರವ ಎಷ್ಟಿರಬೇಕು. ಇದನ್ನು ಇವತ್ತಿನಿಂದ ಪಾಲಿಸೋಣ. ಶ್ರೀನಾಥರಿಗೆ ಎರಡನೇ ವ್ಯಕ್ತಿತ್ವವನ್ನು ತಂದುಕೊಟ್ಟ ಮಾನಸ ಸರೋವರ ಹಾಡನ್ನು ಕೇಳೋಣ.

**ಶ್ರೀನಾಥ್ :** ಹಾಡು ಬರೆಯಲು ಬೇಕಾದಷ್ಟು ಜನ ಇದ್ರು. ಆದರೆ ಶುಭಮಂಗಳದ ಲೆಕ್ಕದ ಹಾಡಿಗೆ ಒಬ್ಬ ಲೆಕ್ಕ ಬಲ್ಲವರಿಂದ ಹಾಡು ಬರೆಸೋಣ ಅಂತ ಪುಟ್ಟಣ್ಣ ಯೋಚಿಸ್ತಾರೆ. ಆಗ ಕವಿ ಎಂ.ಎನ್. ವ್ಯಾಸರಾವ್ ಯೂಕೋ ಬ್ಯಾಂಕಲ್ಲಿ ಕೆಲಸ ಮಾಡ್ತಾ ಇದ್ರು. ಸೀದಾ ಅಲ್ಲಿಗೇ ಹೋಗಿ ನಿಮ್ಮತ್ರ ಒಂದು ಲೆಕ್ಕದ ಬಗ್ಗೆ ಮಾತಾಡೋದಿದೆ ರಜಾ ಹಾಕಿ ಬರ್ತೀರಾ ಹೊರಗೆ ಅಂತ ಕರೀತಾರೆ. ಪಾಪ ವ್ಯಾಸರಾವ್ ಏನೋ ಬ್ಯಾಂಕಲ್ಲಿ ಏನೋ ಆಗೋಗಿದೆ ಅಂತ ಆತಂಕಗೊಂಡು ಪುಟ್ಟಣ್ಣನವರ ಜೊತೆ ಬರ್ತಾರೆ. ಪುಟ್ಟಣ್ಣ ದೃಶ್ಯ ವಿವರಿಸಿ, ದೃಶ್ಯಕ್ಕೆ ಹೊಂದುವಂತ ಹಾಡು ಬರೆದು ಕೊಡಿ ಅಂತಾರೆ. ಮೂರು ಗಂಟೆಯಲ್ಲಿ ವ್ಯಾಸರಾವ್ ಹಾಡು ಬರೆದುಕೊಡ್ತಾರೆ.. 'ನಾಲ್ಕೊಂದ್ಲೆ ನಾಲ್ಕು ಲೆಕ್ಕದ ನಂಟಿನ ಹಾಡು. ಪುಟ್ಟಣ್ಣನವರ ವಿಶೇಷತೆ ಎಂದರೆ ಕೆಲವೊಮ್ಮೆ ನಟರನ್ನೇ ಸಾಂಗು ಹೇಗಿರಬೇಕು? ಹೇಗೆ ಶೂಟಿಂಗ್ ಇರಬೇಕು? ಅಂತೆಲ್ಲ ಕೇಳಿ ಸಲಹೆ ಪಡೆಯುತ್ತಿದ್ದರು. ಒಬ್ಬ ಕಲಾವಿದನನ್ನ ಹೇಗೆ ಬಳಸ್ಕೋಬೇಕು ಅಂತ ಅವ್ರಿಗೆ ಗೊತ್ತಿತ್ತು.

190 ಸಿನಿಮಾಗಳಲ್ಲಿ ನಾನು ನಾಯಕನಾಗಿ ನಟಿಸಿದ್ದೇನೆ. 618 ಹಾಡುಗಳು ಅದರಲ್ಲಿ ಬಾಲು 480 ಹಾಡುಗಳನ್ನು ಹಾಡಿದ್ದಾರೆ. ನನಗೆ ಈ ಟೈಟಲ್ ಬರಲು ಕಾರಣ ಬಾಲು ಅವರ ಧ್ವನಿ. ಶರೀರ ನಂದು ಶಾರೀರ ಬಾಲು ಅವರದು. ಪ್ರೀತಿ, ನೋವು ನಲಿವು ಎಲ್ಲ ಭಾವಗಳಿಗೂ ನಾನು ಭಾವ ತುಂಬಿದರೆ ಅವರು ಜೀವ ತುಂಬಿದರು. ಬಹುಶಃ ಬಾಲು ಮತ್ತು ಜಾನಕಮ್ಮ ಸಿಕ್ಕಿದ್ದಕ್ಕೆ ನಾವು ಇಲ್ಲಿರೋದು. ಅವರಿಲ್ಲದಿದ್ದರೆ ಚಿತ್ರರಂಗ ಬಡವಾಗಿರ್ತಿತ್ತು.

ಎಲ್ಲರೂ "ಪಾವನ ಗಂಗೆ" ಚಿತ್ರದ–ಆಕಾಶ ದೀಪವು ನೀನು ಹಾಡಿಗೆ ದನಿಗೂಡಿಸಿದರು.

ನಂತರ ಸಾಹಿತ್ಯ ಚಿತ್ರರಂಗ ಸಾರಸ್ವತ ಲೋಕದಲ್ಲಿ ಆರು ದಶಮಾನಗಳ ಕಾಲ ಕನ್ನಡದ ಸೇವೆ ಮಾಡಿರುವ ಶ್ರೀನಾಥ್ ಹಾಗೂ ಅವರ ಪತ್ನಿ ಗೀತಾ ಅವರನ್ನು ಸನ್ಮಾನಿಸಲಾಯಿತು. ದೆಹಲಿ ಕರ್ನಾಟಕ ಸಂಘವಲ್ಲದೇ ದೆಹಲಿಯಲ್ಲಿರುವ ಇತರ ಸಂಘ ಸಂಸ್ಥೆಗಳೂ ತಮ್ಮ ಮೆಚ್ಚಿನ ನಟ ಶ್ರೀನಾಥ್ ಅವರನ್ನು ಹೂಗುಚ್ಛ ನೀಡಿ ಸನ್ಮಾನಿಸಿದವು.

"ಬೆಸುಗೆ ಬೆಸುಗೆ ಜೀವನವೆಲ್ಲ ಸುಂದರ ಬೆಸುಗೆ" ರಾಮಚಂದ್ರ ಹಾಗೂ ಹರ್ಷ ರಂಜನಿ. ಹೃದಯಂಗಮವಾಗಿ ಹಾಡಿದರು. 1976ರಲ್ಲಿ ಬಂದ ಬೆಸುಗೆ ಮತ್ತೊಂದು ಪ್ರೀತಿ ಪ್ರಧಾನವಾದ ಜನಪ್ರಿಯ ಚಿತ್ರ. ಈ ಮೂಲಕ ಚಿತ್ರರಂಗಕ್ಕೆ ಮತ್ತೊಬ್ಬ ಅನರ್ಘ್ಯ ರತ್ನ "ಗೀತಪ್ರಿಯ" ದೊರೆತರು.

**ಶ್ರೀನಾಥ್ :** ಬೆಸುಗೆ–ಬೆಸುಗೆ ಜೀವನವೆಲ್ಲ ಸುಂದರ ಬೆಸುಗೆ ಹಾಡು ಬರೆದಾದ ಮೇಲೆ ಗೀತಪ್ರಿಯ–"ಬರೆದಿರೋದು ಹೇಗಿದೆ? ಅರ್ಥ ಹೇಳು ನೋಡೋಣ?. ಅಂದ್ರು. ಲವ್ ಸಾಂಗು, ರಾಗದ ಜೊತೆಗೆ ತಾಳದ ಬೆಸುಗೆ, ರಾಗ ತಾಳಕೆ ಭಾವದ ಬೆಸುಗೆ , ಭಾವದ ಜೊತೆ ಗೀತೆಯ ಬೆಸುಗೆ, ಗೀತೆಯ ಜೊತೆ ಸಂಗೀತದ ಬೆಸುಗೆ" ಇನ್ನೇನು ಅರ್ಥವಿದೆ ಅಂದೆ. ಆಗ ಗೀತಪ್ರಿಯ–ರಾಗ ಅಂದ್ರೆ ಹೆಣ್ಣು ತಾಳ ಅಂದ್ರೆ ಗಂಡು. ರಾಗ ತಾಳಕೆ ಭಾವದ ಬೆಸುಗೆ ಅವರಿಬ್ಬರ ಮನಸ್ಥಿತಿ ಅಷ್ಟೇ ಅಲ್ಲ ಅದನ್ನು ಕವನವಾಗಿ ಬರೆದರೆ ಹೇಗಿರಬಹುದು ನಮ್ಮ ನಿಮ್ಮ ಜೀವನ?

ಅದರಲ್ಲಿ ಎರಡು ಲೈನು ನಿನ್ನ ಬಗ್ಗೆನೇ ಬರೆದಿದ್ದೇನೆ ಹೇಳು ನೋಡೋಣ ಅಂದ್ರು. ಗೊತ್ತಾಗ್ತಿಲ್ಲ ಹೇಳಿ ಪ್ಲೀಸ್ ಅಂದೆ. ನೀನು ಹೀರೋ ಆಗಿ ಮಾಡಿದ ಮೊದಲ ಸಿನೇಮ ಯಾವುದು? ಮಧುರ ಮಿಲನ. "ಮಧುರ ಮಿಲನಕೆ ಪ್ರೀತಿಯ ಬೆಸುಗೆ" ಬರೆದಿದೀನೋ ಇಲ್ಲವೋ. ಚಿತ್ರರಂಗದ ಜೊತೆಗೆ ನಿನ್ನ ಪ್ರೀತಿಯ ಬೆಸುಗೆ ಆಗಿದೆ ಅಲ್ವಾ ಅದಕ್ಕೆ ಜನ್ಮ ಜನ್ಮಕೂ ಆತ್ಮದ ಬೆಸುಗೆ ಅಂತ ಯಾಕೆ ಬರೆದೆ ? ಈ ಬೆಸುಗೆಗೆ ಕಾರಣರಾದ ಯಾರೆಲ್ಲಇದಾರೋ ಅವರಿಗೆಲ್ಲರಿಗೂ ನೀನು ಪ್ರತಿ ನಿಮಿಷನೂ ಚಿರಋಣಿಯಾಗಿರಬೇಕು. ಯಾವತ್ತೂ ಮರೀಬಾರದು" ಅದಕ್ಕಾಗಿ ಬರೆದದ್ದು. ಇಂತಹ ಅರ್ಥ ಕೊಡುವ ಡೈರೆಕ್ಟರುಗಳಿದ್ದರು. ಅವರು ಎದುರಿಗಿದ್ರೆ ಸಾಕು ಏನು ಬೇಕಾದರೂ ಮಾಡ್ಬಹುದಿತ್ತು ಕಲಾವಿದರು. ಇಂತಹ ಡೈರೆಕ್ಟರುಗಳು ನಿಜಕ್ಕೂ ಬೇಕು.



ಗಾಯಕ ರಾಮಚಂದ್ರ ಹಡಪದ ಶ್ರೀನಾಥ್ ಅವರ ವಯಸ್ಸು 84 ಅಂದಾಗ ಅವರು ಹುಸಿಮುನಿಸು ತೋರುತ್ತ ನಿಂತು ಒಂದೆರಡು ಹೆಜ್ಜೆ ಕುಣಿದು ತೋರಿಸಿದರು. ಶ್ರೀನಾಥ್ ಅವರೊಂದಿಗೆ ಈಗಾಗಲೇ ನಾಲ್ಕು ಶೋ ಮಾಡಿರುವ ಕಲಾವಿದ ರಾಮಚಂದ್ರ ಶ್ರೀನಾಥ್ ಅವರ ಮುಗ್ಧತೆಯನ್ನು ನೆನೆಯುತ್ತಾ ಒಮ್ಮೆ ಜೂಲಿ ಲಕ್ಷ್ಮಿ –ಅವರಿಗೆ ಪ್ರಣಯರಾಜ ಅಂತ ತಪ್ಪಾಗಿ ಹೆಸರಿಟ್ಟಿದ್ದಾರೆ ಅವರಿಗೆ ಪ್ರಣಯಾನೇ ಮಾಡಕ್ ಬರಲ್ಲ ಅಂದಿದ್ದನ್ನು ಹೇಳಿ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸಿದರು. ಜೂಲಿ ಲಕ್ಷ್ಮಿ ಹೇಳಿದ ಮಾತಿನ ಅರ್ಥವೆಂದರೆ ಸ್ವಲ್ಪ ಹೆಸರು ಪ್ರಸಿದ್ಧಿ ಬಂದ ಬಳಿಕ ಸಹನಟರ ವರ್ತನೆಯೇ ಬದಲಾಗಿ ಬಿಟ್ಟಿರುತ್ತದೆ. ಆದರೆ ಶ್ರೀನಾಥ್ ತಮ್ಮ ಸಹ ನಟಿಯರೊಂದಿಗೆ ಆನ್ ಸ್ಕ್ರೀನ್ ಆಫ್ ಸ್ಕ್ರೀನ್ ಎರಡರಲ್ಲೂ ಕೂಡ ಅಷ್ಟೇ ಗೌರವದಿಂದ, ಪ್ರಾಮಾಣಿಕತನದಿಂದ ಇದ್ದಾರೆ. ಸರ್ ನಿಮ್ಮೊಂದಿಗೆ ಕೂತ್ಕೋಳ್ತೀನಿ ಅದೇ ನನ್ನ ಸೌಭಾಗ್ಯ ಎಂದರು ಹಡಪದ್.

ಪ್ರೇಮಾನುಬಂಧದ–ಬೆಳದಿಂಗಳೊಂದು ಹೆಣ್ಣಾಗಿ ಬಂದಂತೆ ಕಂಡೆ, ಕಂಡು ನಿಂತೆ, ನಿಂತು ಸೋತೆ, ಸೋತು ಕವಿಯಾದೆ" ಹಾಡಿದರು.

**ಶ್ರೀನಾಥ್ :** ಈ ಹಾಡು ಮದ್ರಾಸ್‌ನ ಪ್ರಸಾದ್ ಸ್ಟುಡಿಯೋದಲ್ಲಿ ರೆಕಾರ್ಡಿಂಗ್ ಆಗ್ತಿತ್ತು. ಅಲ್ಲಿಂದ ಬಾಲು ಟ್ರಂಕ್ ಕಾಲ್ ಮಾಡಿ ಕಂಠೀರವದಲ್ಲಿದ್ದ ನನಗೆ ನೀನು ಆಕ್ಟ್ ಮಾಡ್ತೀಯಾಂತ ಗೊತ್ತು, ಅದಕ್ಕೆ ಸ್ಪೆಷಲ್ ಎಫೆಕ್ಟ್ ಕೊಟ್ಟು ಹಾಡಿದ್ದೀನಿ" ಅಂತ ಹಾಡಿ ತೋರಿಸ್ದ. ನಾನು ಕೊಟ್ಟಿದ್ದು 25% ಇರಬಹುದೇನೊ ಆದರೆ ಬಾಲು ಅಷ್ಟು ಭಾವಪೂರ್ಣವಾಗಿ ಹಾಡಿದ್ದಾರೆ.

ನಂತರ ಪುಟಾಣಿ ಏಜೆಂಟ್ 123 ಚಿತ್ರದ ಏನೋ ಸಂತೋಷ ಏನೋ ಉಲ್ಲಾಸ ಏನೋ ವಿಶೇಷ ಈ ದಿನ, ಎಂದು ಮುಗಿಯದಾ ಈ ಪ್ರೇಮಬಂಧನ, ನಂತರ ಶುಭಮಂಗಳದ 'ಸೂರ್ಯಂಗು ಚಂದ್ರಂಗು ಬಂದಾರೆ ಮುನಿಸು' ಹಾಡಿದ ಹಡಪದ ಅವರು ನಮ್ಮ ತಲೆಮಾರು ಒಳ್ಳೆ ಸಂಗೀತ, ಒಳ್ಳೆ ಆಹಾರ, ಒಳ್ಳೆ ಪರಿಸರದಲ್ಲಿ ಬೆಳೆದಿದ್ದೀವಿ, ಈಗಿನ ತಲೆಮಾರಿಗೆ, ನಮ್ಮ ಮಕ್ಕಳಿಗೆ ಈ ಅಭಿರುಚಿ ಇಲ್ಲ. ಐದು ನಿಮಿಷದ ಹಾಡು ನಮ್ಮನ್ನು ಎಲ್ಲೋ ಕರೆದುಕೊಂಡು ಹೋಗ್ತದೆ. ಎಷ್ಟು ಸುಖ ಇದೆ ಸಂಗೀತದಲ್ಲಿ, ಇಂತಹದ್ದೊಂದು ಕಾರ್ಯಕ್ರಮ ಆಯೋಜಿಸಿದ ರೇಣುಕುಮಾರ್ ಅವರಿಗೆ ನಿಜಕ್ಕೂ ಧನ್ಯವಾದ ಹೇಳಬೇಕು" ಎಂದರು.

**ಶ್ರೀನಾಥ್ :** 'ಧರ್ಮಸೆರೆ' ಚಿತ್ರದ ಈ ಸಂಭಾಷಣೆ ನಮ್ಮ ಈ ಪ್ರೇಮ ಸಂಭಾಷಣೆಯ ಸಮಯದಲ್ಲೂ ಪುಟ್ಟಣ್ಣ, ಆರತಿ ನನ್ನ ಹತ್ರ ಮಾತಾಡ್ತಿರಲಿಲ್ಲ. ಹಳೇ ಮನಸ್ತಾಪ ಹಾಗೇ ಇತ್ತು. ಆದರೂ ನಾನು ಅವರು ಹೇಳಿದಂತೆ ನಟಿಸ್ತಿದ್ದೆ. ಮಾತಾಡದಿದ್ರೂ ಅವರ ಮುಖದಲ್ಲಿ ಸಂತೋಷವಾಗಿದ್ದು ಗೊತ್ತಾಗ್ತಾ ಇತ್ತು. ಹಾಡು ಪೂರ್ತಿ ಅವರು ನನ್ನ ನೋಡೇ ಇಲ್ಲ. ಈ ಮಾತಿಗೆ ಗಾಯಕ ಹಡಪದ್–ಕನ್ನಡದ ಟಾಪ್ ಚಿತ್ರಗೀತೆಗಳಲ್ಲಿ ಇದು ನಂಬರ್ 1 ನಲ್ಲಿದೆ ಎಂದು ಹೇಳಿದರು.

**ಶ್ರೀನಾಥ್ :** ವೇದಾಂತಿ ಹಾಡಿದನು "ಹಾಡಿದ ಪಿ.ಬಿ. ಶ್ರೀನಿವಾಸ್ ಒಬ್ಬ ಅದ್ಭುತ ಗಾಯಕರು, ರಾಜಣ್ಣ ಅವರ ಹಳೇ ಸಿನೇಮಾಗಳನ್ನು ನೋಡುವಾಗ ನಿಮಗೆ ರಾಜಣ್ಣನ ಮುಖ ನೆನಪಿಗೆ ಬರುತ್ತೋ ಪಿಬಿ ಗಂಟಲು ನೆನಪಿಗೆ ಬರುತ್ತೋ ಗೊತ್ತಾಗಲ್ಲ. ಅವಕಾಶಗಳು ಕಡಿಮೆಯಾದಾಗಲೂ ಅವರು ಸಂತೋಷವಾಗೇ ಇದ್ದರು. ಬಾಲು, ಜೇಸುದಾಸ್ ಇರಬಹುದು ಆದರೆ ಪಿಬಿ ಪಿಬಿ ನೇ" ಎಂದು ಆತ್ಮೀಯವಾಗಿ ನೆನೆದರು.

**ಶ್ರೀನಾಥ್ :** ಮಾನಸ ಸರೋವರ ಮಾಡ್ಲಿಕ್ಕೆ

ಪುಟ್ಟಣ್ಣನವರಿಗೆ ಎಲ್ಲಿಂದ ಸ್ಫೂರ್ತಿ ಬಂತು ಅಂತ ಯೋಚಿಸ್ತಿದ್ದೆ. ಒಂದಿನ ಪುಟ್ಟಣ್ಣನವರನ್ನು ನೋಡಲು ಹೋದೆ. ಏನೋ ಓದ್ತಾ ಇದ್ರು. ಈ ಪೇಜ್ ನೋಡು ಅಂದ್ರು. ಜಿ.ಎಸ್. ಶಿವರುದ್ರಪ್ಪನವರ "ಹಾಡು ಹಳೆಯದಾದರೇನು ಭಾವ ನವನವೀನ" ನಾನು ನಿರ್ದೇಶಕ ಹಳಬನಾದರೂ ಭಾವವನ್ನು ಬದಲಾಯಿಸಿಕೊಂಡು ನಾ ಪಿಕ್ಚರ್ ಮಾಡಿದ್ರೆ ನಾನು ಚೆನ್ನಾಗಿ ಮಾಡಬಹುದು ಅಂತ ಸ್ಫೂರ್ತಿ ಬರ್ತಾ ಇದೆ, ಇದೇ ಕಥೆ ಮಾಡ್ತಾ ಇದೀನಿ. ಅಂದರು. ಮೂರು ದಿವಸ ಬಿಟ್ಟು ಹೋದಾಗ ಅಣ್ಣ, ಈ ಸಿನೆಮಾ ಎಲ್ಲಿ ಮಾಡಬೇಕು ಗೊತ್ತಾ? ಅಂದ್ರು. ಎಲ್ಲಿಯಾದ್ರೂ ಮಾಡಿ ಪಾರ್ಟ್‌ನರ್ ನಾನೇ ಇದೀನಿ, ಎಲ್ಲಿ ಮಾಡಿದ್ರೂ ಚೆನ್ನಾಗಿರತ್ತೆ ಅಂದೆ. ಚೆನ್ನಾಗಿರತ್ತೆ ಅಲ್ಲ ನಾನು ಸಂಗೀತವನ್ನು ಸೇರಿಸಿ ಅದರ ಅರ್ಥ ಬರೋ ರೀತಿಯಲ್ಲಿ ಮಾಡಬೇಕು ಅಂತ, ವೇದಾಂತಿ ಹೇಳಿದನು ಹಾಕಲೇಬೇಕು ಅಂತ ಹಾಕಿದ್ದು. ಸರಿ ರೆಕಾರ್ಡಿಂಗ್ ಎಲ್ಲ ಮುಗೀತು, ಶೂಟಿಂಗ್ ಮುಗೀತು. ನಾನು ಪುಟ್ಟಣ್ಣಾ ಜೀ ವೇದಾಂತಿ ಹಾಡಿದನು ಶೂಟಿಂಗ್ ಆಗಲೇ ಇಲ್ಲವಲ್ಲ? ಅಂತ ಕೇಳಿದೆ. "ಏಯ್ ಬೇಡಾ ಬಿಡೋ ಅಂದ್ರು. ಇಲ್ಲಾ ನೀವು ಆ ಹಾಡು ಬೇಕು ಅಂದಿದ್ರಿ. ಬೇಡ ಬಿಡೋ' ಎಂದು ಎಡಿಟ್ ಮಾಡಿದ್ದನ್ನು ನೋಡೋಣ ಅಂತ ಒಂದೊಂದೇ ಹಾಡನ್ನು ನೋಡ್ತಾ ಇದ್ದಾಗ, ಇನ್ನೇನು ಸೀಟಿಂದ ಏಳ್ಬೇಕು ಡಿಂಗ್ ಡಿಂಗ್ ಡಿಂಗ್" ಮ್ಯೂಸಿಕ್ ಶುರು ಆಯ್ತು. ಪೂರ್ತಿ ಹಾಡು ಮುಗೀತಾ ಇದ್ದಂಗೆ 'ಪ್ರೊಡ್ಯೂಸರ್‌ಗೆ ಖುಶಿಯಾಯ್ತಾ? ಈ ಹಾಡು ಸಿನೇಮಾದಲ್ಲಿದೆಯಾ?' ಅಂತ ಕೇಳಿದ್ರು. ಪ್ರತ್ಯೇಕವಾಗಿ ಶೂಟ್ ಮಾಡ್ದೇ ತೆಗೆದ ಶಾಟ್ಸ್‌ಗಳನ್ನು ಸೇರಿಸಿ ಹಾಡು ಹಾಕಿದೀನಿ ಚೆನ್ನಾಗಿದೆಯಾ? ಅಂದ್ರು. ಕೈಮುಗಿದು ಗುರುವಿಗೆ ಧನ್ಯವಾದ ಹೇಳಿದೆ.

**ಪ್ರ : ಕಾರ್ಯಕ್ರಮದ ಕೊನೆಯ ಹಂತ, ಎಷ್ಟೋ ಪ್ರಶ್ನೆಗಳು ಹಾಗೇ ಉಳಿದವು. ಕೊನೆಗೂ ನಿಮ್ಮ ವಯಸ್ಸು ಗೊತ್ತಾಗ್ಲಿಲ್ಲ. ಪ್ರತಿ ಗಂಡಸಿನ ಯಶಸ್ಸಿನ ಹಿಂದೆ ಒಬ್ಬ ಮಹಿಳೆ ಇರ್ತಾಳೆ ಅಂತಾರೆ. ನೀವು ಪ್ರಣಯರಾಜ, ಮೇಡಂ (ಗೀತಾ) ಅವರನ್ನು ಬಿಟ್ಟು ಯಾರನ್ನಾದರೂ ಲವ್ ಮಾಡಿದ್ದೀರಾ? ನೀವು ಓಡಿ ಹೋಗ್ಬಿಟ್ಟಿದ್ದೀರಂತೆ ಹೌದಾ?**

**ಶ್ರೀನಾಥ್** : ಹೆಂಡ್ತೀನೆ ಹೇಳಿದ ಮೇಲೆ ಆಯ್ತು. 1958 ರಲ್ಲಿ SSLC ಪಾಸು ಮಾಡಿ ನಾನು ಕಾಲೇಜಿಗೆ ಸೇರಿದ ಮೊದಲ ವರ್ಷ ಆಶಾ ಪರೇಖ್ ಅವರ 'ದಿಲ್ ದೇಕೆ ದೇಖೋ" ರಿಲೀಸ್ ಆಯ್ತು. ಹತ್ತು ವಾರ ಇತ್ತು. ಹತ್ತು ವಾರದಲ್ಲಿ 18 ಸಲ ಪಿಕ್ಚರ್ ನೋಡಿದೆ. ಹದಿನೆಂಟನೇ ದಿನ ಇಂಟರ್ವಲ್ ಆದ ತಕ್ಷಣ ಆಶಾ ಪರೇಖ್ ಒಂದು ಕ್ಲೋಸ್ ಅಪ್ ಬರುತ್ತೆ, ಅದರಲ್ಲಿ ಶಮ್ಮೀ ಕಪೂರ್‌ಗೆ 'ಆಜಾ' ಅಂತಾಳೆ. ಅದು ನನ್ನನ್ನೇ ಕರೆದದ್ದು ಅನಿಸಿ, ಸೀದಾ ಮನೆಗೆ ಹೋಗಿ ಅಪ್ಪನ ಕೋಟಿನಿಂದ ಐವತ್ತು ರುಪಾಯಿ ಕದ್ದು ಎರಡು ಜುಬ್ಬಾ ಎರಡು ಪೈಜಾಮ ಇಟ್ಕೊಂಡು ಮುಂಬೈಗೆ ಟ್ರೇನ್ ಹತ್ತಿಬಿಟ್ಟೆ. ಥರ್ಡ್ ಕ್ಲಾಸ್ ಟಿಕೇಟ್ 18 ರುಪಾಯಿ ಇತ್ತು. ತುಂಬಾ ರಶ್ ಇತ್ತು. ಯಾರೋ ಎಲ್ಲಿ ಹೋಗ್ತಾ ಇದೀಯಾ ಅಂದಾಗ, ಸೀನೇಮಾದಲ್ಲಿ ಆಕ್ಟ್ ಮಾಡೋಕೆ ಹೋಗ್ತಾ ಇದೀನಿ, ಆಶಾ ಪರೇಖ್ ಗೊತ್ತಾ? ಅವರೇ ನನ್ನ ಕರೆದಿದ್ದಾರೆ ಹೋಗ್ತಾ ಇದೀನಿ," ಅಂದೆ. ಹೌದಾ, ಆದ್ರೆ ಥರ್ಡ್ ಕ್ಲಾಸಲ್ಲಿ ಹೋಗ್ತಾ ಇದೀಯಲ್ಲೋ? ಬಹಳ ಅರ್ಜೆಂಟಾಗಿ ಬಾ ಅಂದಿದಾರೆ, ಅದ್ಕೆ. ಆಗ ಬಾಂಬೆಗೆ ಹೋಗಲು ಎರಡು ದಿನ. ಹೀಗೆ ಮಾತಾಡ್ಕೊಂಡು ಯಾರೋ ಕೊಡಿಸಿದ ಇಡ್ಲಿವಡೇ ತಿನ್ಕೊಂಡು ದಾದರ್ ತಲುಪ್ದೆ. ಅಲ್ಲಿ ಫ್ಲೈ ಓವರ್ ಮೇಲೆ ಎರಡು




ಗಂಟೆ ನಿಂತ್ಕೊಂಡಿದ್ದೆ. ಬಾಂಬೆದವ್ರು ಯಾರೂ ನನ್ ಮಕ ನೋಡ್ತಿಲ್ಲ. ಹೀರೋ ಆಗಕ್ ಬಂದೀದೀನಿ ಆಶಾ ಪರೇಖ್‌ಗೆ ಇವರ್ಯಾರೂ ತಿರುಗಿ ಕೂಡಾ ನೋಡ್ತಿಲ್ಲ. ಈ ಬಾಂಬೆ ಸರಿಯಿಲ್ಲ ಅಂದ್ಕೊಂಡು ವಾಪಸ್ ಬೆಂಗಳೂರಿಗೆ ಹೋಗಲು ಟ್ರೇನ್ ಟಿಕೆಟ್ ತಗೋಬೇಕು. ಜೇಬಲ್ಲಿ 12 ರುಪಾಯಿ ಇದೆ. ಏನ್ ಮಾಡೋದು ಅಂತ ಪೂನಾಗೆ ಟಿಕೆಟ್ ತಗೊಂಡೆ– ಏಳು ರುಪಾಯಿ. ಜೇಬಲ್ಲಿ ಐದು ರುಪಾಯಿ ಮಾತ್ರ ಉಳಿದಿದೆ. ಬರುವಾಗ ಹೇಗೆ ಹೀರೋ ರೋಪ್ ಹಾಕಿಕೊಂಡು ಬಂದಿದ್ನೋ ಹೋಗುವಾಗ ಅಳ್ತಾನೇ ಇದೀನಿ. ಬಾಂಬೆ ಜನ ಎಂತ ಮೋಸ ಮಾಡಿದಾರೆ ನನ್ನ ಹೀರೋ ಮಾಡ್ತೀನಿ ಅಂತ ಕರೆಸಿಬಿಟ್ಟು ಛಾನ್ಸೂ ಕೊಡದೇ ವಾಪಸ್ ಕಳಿಸಿದಾರೆ ಅಂತ ಕತೆ ಹೇಳ್ಕೊಂಡು ಅಳ್ತಾ ಇದ್ದೆ. ಎಲ್ಲರೂ 'ಅಯ್ಯೋ ಪಾಪ ಅಯ್ಯೋ ಪಾಪ' ಅಂತಿದಾರೆ. ಯಾರಾದರೂ ಮನಸ್ಸು ಮಾಡಿ ಹತ್ತು ರುಪಾಯಿ ಕೊಟ್ಟಿದ್ದರೂ ನಾನು ಬೆಂಗಳೂರಿಗೆ ಓಡಿಬಿಡ್ತಿದ್ದೆ. ಇನ್ನೊಂದು ಬೇಸರ ಅಂದ್ರೆ ನನ್ನ ಆಕ್ಟಿಂಗಿಗೆ ಇವರ್ಯಾರು ಇಂಪ್ರೆಸ್ ಆಗ್ತಿಲ್ಲವಲ್ಲ ಅಂತ ಯೋಚನೆ. ಪೂನಾ ಬಂತು. ಒಬ್ಬ ಮಾತ್ರ ಬೇಟಾ..ತೇರೆ ಪಾಸ್ ಪೈಸಾ ನಹೀ ಹೈ ನಾ? ಸಣ್ಣ ಚಾಳಲ್ಲಿ ಅವನ ಮನೆ ಇತ್ತು. ನನ್ನ ಜೊತೆ ಬಾ, ಇರು. ನಾಳೆ ವ್ಯಾಪಾರ ಮಾಡಿ ದುಡ್ಡು ಬಂದ್ರೆ ನಿನ್ನ ಟಿಕೇಟ್ ಕೊಡ್ಸಿ ಕಳಿಸ್ತೀನಿ ಅಂದ. ಪಾಪ ಆ ಮನುಷ್ಯ ಬೀದಿಬದಿಯಲ್ಲಿ ಟೇಬಲ್ ಹಾಕಿ ಕುಳಿತು ಪೆನ್ನುಗಳಿಗೆ ಇಂಕ್ ಹಾಕುವವ. ಇಡೀ ದಿನಕ್ಕೆ ಐದು ರುಪಾಯಿ ಮಾತ್ರ ಬಂತು. ಕೊನೆಗೆ ನಾನು ಬೆಳಗಾಂವರೆಗೆ ಹೋಗ್ತೀನಿ ಅಲ್ಲಿ ನಮ್ಮ ನೆಂಟರಿದ್ದಾರೆ, ಹೋಗ್ತೀನಿ ಅಂದು ಅಲ್ಲಿಂದ ಹೊರಟೆ. ಮನೆಯಲ್ಲಿ ಮೊದಲೇ ಪತ್ರ ಬರೆದಿಟ್ಟು ಬಂದಿದ್ದೆ.."ಮೈ ಜಿಂದಗೀ ಸೇ ಖೇಲ್ನೇ ಜಾ ರಹಾ ಹೂಂ, ಮರ್ತಾ ನಹೀ" ಅಂತಾ ಬರೆದಿಟ್ಟಿದ್ದೆ. ಈಗಲೂ ಆ ಪತ್ರ ಇಟ್ಟುಕೊಂಡಿದ್ದರು ಅಪ್ಪ. ಕೊನೆಗೆ ಅಪ್ಪ ಪಾಲಿಟೆಕ್ನಿಕ್‌ನಲ್ಲಿ ಸಿನೇಮಾಟೋಗ್ರಾಫಿ ಕೋರ್ಸ್ ಇದೆ ಅಂತ ಸೇರಿಸಿದ್ರು.

ಇದು 1958ರ ಘಟನೆ ಆದ್ರೆ 1988 ರಲ್ಲಿ ಬಂಗಾರಪ್ಪನವರ ಮಗ ಕುಮಾರ್ ಬಂಗಾರಪ್ಪ "ಶರವೇಗದ ಸರದಾರ" ಸಿನೇಮಾ ಮಾಡುವಾಗ ಈ ಪಾತ್ರವನ್ನು ನೀನೇ ಮಾಡಬೇಕು ಮಾಮ ಅಂತ ಹೇಳ್ತಾನೆ. ಅಪ್ಪನ ಪಾತ್ರ, ನಂಗೇನು ಹೆಂಡ್ತಿ ಗಿಂಡ್ತಿ ಇಲ್ವೇನು?' ಹೀರೋಯಿನ್ ಯಾರು ಅಂದಾಗ, ಹಿರೋಯಿನ್ ಆಶಾ ಪರೇಖ್ ಅಂದ. ಕುಮಾರ ಈ ಪಿಕ್ಚರ್ ನಾನೇ ಮಾಡ್ತೀನಿ, ನೀನು ಯಾರನ್ನಾದ್ರೂ ಕರ್ಕೊಂಡ್ ಬಂದ್ರೆ ಎಗರಿಸಿ ಒದ್ ಬಿಡ್ತೀನಿ, ನೀ ಏನ್ ದುಡ್ಡು ಕೊಡೋದ್ ಬೇಡ್ ಹೋಗ್ ನಾ ಹಾಗೇ ಮಾಡ್ತೀನಿ," ಅಂದೆ. ಮೈಸೂರಿನ ಲಲಿತ್ ಮಹಲಿನಲ್ಲಿ ಶೂಟಿಂಗ್ ಇತ್ತು. ಒಂಭತ್ತು ಗಂಟೆಗೆ ಶೂಟಿಂಗ್ ಇರಬೇಕಿತ್ತು. ನಾ ಬೆಳಿಗ್ಗೆ ಆರೂ ಕಾಲಿಗೇ ಹೋಗಿ ಕೂತು ಕಾಯ್ತಿದ್ದೆ. ಯಾರೂ ಬಂದಿರಲಿಲ್ಲ. 'ಆಶಾ ಪರೇಖ್ ಎಲ್ಲೋ?' ಅವರು ಮೇಕಪ್ ಮಾಡ್ಕೋತಾ ಇದಾರೆ, ಬರ್ತಾರೆ. ಅವನು–"ಸರ್, ಬರ್ತಾರೆ ನೀವು ತಿಂಡಿ ತಿನ್ಕೊಂಡ್ ಬನ್ನಿ." ಏಯ್ ತಿಂಡಿ ಯಾರಿಗ್ ಬೇಕೋ!" ನಂತರ ಆಶಾ ಪರೇಖ್ ಬಂದ್ರು. ಹೃದಯ ಹಾಗೇ ನಿಂತೋಯ್ತು ಅವರನ್ನ ನೋಡ್ತಾ.." ಆಶಾಜೀಗೆ ಕೇಳಿದೆ, 'ಆಶಾಜಿ ನೀವೆಷ್ಟು ದಿನ ಇರ್ತೀರಿ?' ನಾಲ್ಕು ದಿನ. ನಾಲ್ಕು ದಿನನೂ ನಂಜೊತೆ ಇರ್ತೀರಿ. ಬೆಳಿಗ್ಗೆ ಒಂಭತ್ತರಿಂದ ಸಂಜೆ ಐದರವರೆಗೆ. ಆಶಾಜಿ ನಾನು ಒಂಭತ್ತರಿಂದ ಸಂಜೆ



ಆರರವರೆಗೂ ನಿಮ್ಮನ್ನೇ ನೋಡ್ತಾ ಇರ್ತೀನಿ, ತಪ್ಪು ತಿಳ್ಕೋಬೇಡಿ ಅಂದೆ. ಯಾಕೆ ಅಂದ್ರು ಹೀಗೇ "ಹುಚ್ಚು" ಅಂದೆ. 58ನೇ ಇಸ್ವಿಯಲ್ಲಿ ನಾನೇ ಆಸೆಪಟ್ಟು ಆಕ್ಟ ಮಾಡಲು ಹೋದೋನು 88ರ ಇಸ್ವಿಯಲ್ಲಿ ಅವರೇ ಕನ್ನಡಕ್ಕೆ ಬಂದು ನನ್ನ ಹೆಂಡ್ತಿ ಪಾತ್ರ ಮಾಡಿದ್ರು. ಹೀಗೆ ಮೂವತ್ತು ವರ್ಷಗಳ ಆಶಾ ಪರೇಖ್ ಜೊತೆ ನಟಿಸುವ ಕನಸು ನನಸಾಯ್ತು.

ಮೂರು ಗಂಟೆಗಳ ಕಾರ್ಯಕ್ರಮದಲ್ಲಿ ನಾವು ಶ್ರೀನಾಥ್ ಅವರಂಥ ಶ್ರೇಷ್ಠ ಸಾಧಕರ ಬಗ್ಗೆ ಅವರ ಬದುಕಿನ ಬಗ್ಗೆ ಮಾತನಾಡಿದೆವು. ಅವರದು ಎರಡು ಶತಮಾನಗಳಿಗೆ ಸೇತುವೆಯಾಗಿ ಇರುವಂತಹ ವ್ಯಕ್ತಿತ್ವ. ನಮ್ಮ ಸಿನೇಮಾ ತಾರೆಯರು, ಸಾಧಕರು ಜೀವನದಲ್ಲಿ ತುಂಬಾ ಸಂತೋಷವಾಗಿರ್ತಾರೆ ಯಾಕೆಂದರೆ ಅವರು ಜೀವನದ ಚಿಕ್ಕ ಚಿಕ್ಕ ಸಂತೋಷಗಳನ್ನು ಪಾಕೆಟ್ ಮಾಡಿ ಇಟ್ಕೊಂಡಿರ್ತಾರೆ. ಆದ್ದರಿಂದ ಸದಾ ಹಸನ್ಮುಖಿಯಾಗಿರ್ತಾರೆ. ಶ್ರೀನಾಥ್ ಅವರ ಮಗ ದೊಡ್ಡ ಕಲಾವಿದ, ಅವರ ಅಣ್ಣ ಕರ್ನಾಟಕ ಕಂಡಂತಹ ಮೇರು ನಟ. ಅವರ ಜೊತೆ 80 ವರ್ಷ ಕರ್ನಾಟಕದ ಚಿತ್ರ ಇಡೀ ಭಾರತದ ಚಿತ್ರರಂಗದ ಅಂಬೆಗಾಲಿನಿಂದ ಹಿಡಿದು ಇವತ್ತಿನವರೆಗಿನ ಬೆಳವಣಿಗೆಯನ್ನು ಕಂಡ ವ್ಯಕ್ತಿತ್ವ. ಕೇಳಲು ಬಹಳಷ್ಟಿತ್ತು. ಇವೆಲ್ಲ ನನ್ನ ಹೃದಯಕ್ಕೆ ಹತ್ತಿರವಾದಂತ ಹಾಡುಗಳು. ಇವೆಲ್ಲವೂ ನಿಮ್ಮ ಮನಸ್ಸಿಗೆ ಮುದ ನೀಡುವಂತ ಹಾಡುಗಳು ಹಾಗಾಗಿ ಹಾಡಿಗೆ ಪ್ರಾಮುಖ್ಯತೆ ಕೊಟ್ಟು ಅವರ ಭಾಷೆ ಮತ್ತು ಭಾವನೆಗಳ ಪರಿಚಯ ಮಾಡೋದಕ್ಕೋಸ್ಕರ ಈ ಕಾರ್ಯಕ್ರಮ ನಡೆದಿದೆ ಎಂದು ರೇಣುಕುಮಾರ್ ನುಡಿದರು.

**ಶ್ರೀನಾಥ್ :** ಪುಟ್ಟಣ್ಣ ಅವರು ಹೇಳುವಂತೆ ಇದೇ ಬಾಂಧವ್ಯ ಬೇರೆಯವರನ್ನ ಗೌರವಿಸುವ ಭಾವನೆ ನಮ್ಮನ್ನ ಎತ್ತರಕ್ಕೆ ತಗೊಂಡು ಹೋಗ್ತಾ ಇರುತ್ತೆ. ನಾವು ಮೇಲೆ ಹೋದಷ್ಟು ಎಷ್ಟು ಶಾಂತರಾಗ್ತೀವಿ. ಅದು ನಮಗೆ ಎಷ್ಟು ಪ್ರೀತಿ ಕೊಡುತ್ತೆ. ಪುಟ್ಟಣ್ಣನವರ ಒಂದು ಪ್ರಮುಖವಾದಂತ ಅಂಶ ಅಂದರೆ ಅವರ ಕಥಾ ಹಂದರ ಸ್ಟ್ರಾಂಗ್ ಆಗಿರುತ್ತೆ ನಿರ್ದೇಶನ ಎರಡು ಮಾತಿಲ್ಲ. ಎಲ್ಲದಕ್ಕಿಂತ ಮುಖ್ಯವಾಗಿ ಅವರು ಸಂಗೀತ ಮತ್ತು ಹಾಡಿಗೆ ನೀಡುವ ಪ್ರಾಮುಖ್ಯತೆ ಉತ್ಕೃಷ್ಟ ಮಟ್ಟದ್ದು. ನಾನು ಜೀವನದಲ್ಲಿ ಕಿಂಚಿತ್ತಾದರೂ ಸಾಧನೆ ಮಾಡಿದ್ರೆ ಅದಕ್ಕೆ ನಿಮ್ಮೆಲ್ಲರ ಪ್ರೀತಿವಿಶ್ವಾಸ ಹರಕೆಯೇ ನನ್ನ ಕಾಪಾಡಿರೋದು.

ಇದೇ ದೊಡ್ಡ ಗುಣ ಇದೇ ಸಾಧಕರ ಸಾಧನೆಯ ಮಾತು ಎಂದು ರೇಣುಕುಮಾರ್ ಪ್ರಶಂಸಿಸಿದರು.

**ಶ್ರೀನಾಥ್ :** ನೀವು ಆ ಪ್ರೀತಿ ವಿಶ್ವಾಸ ಕೊಡದೆ ಹೋಗಿದ್ದಿದ್ರೆ ನಾನು ಮನುಷ್ಯನಾಗ್ತಿರ್ಲಿಲ್ಲ. ನನಗೆ ಸಿಕ್ಕ ಪ್ರತಿಯೊಬ್ಬ ಕನ್ನಡಿಗನು ನನ್ನ ಮಾತಾಡಿಸುವಾಗ ನಿನ್ನ ಭೂಮಿ ನೀ ಜ್ಞಾಪಕ ಇಟ್ಕೊಪ್ಪ ನೀನು ನಿಂತಿರೋ ಜಾಗ ಜ್ಞಾಪಕ ಇಟ್ಕೊಪ್ಪ, ನಿಂತು ಮರೀಬೇಡ ಎಂದು ಪ್ರತಿಯೊಬ್ಬ ಸ್ನೇಹಿತರು ಅವರವರ ಜೀವನದಲ್ಲಿ ಅನುಭವಿಸಿದ್ದನ್ನ ಹೇಳಿದ್ದು ನೆನಪಿದೆ. ಇದರಿಂದ ನನಗೆ ಯಶಸ್ಸು ಅನ್ನೋದು ತಲೆ ತಿಂದಿಲ್ಲ. ಬಹುಶಃ ಈ 60 ವರ್ಷದಲ್ಲಿ ನಾನು ಏನಾದ್ರೂ ಮಾಡಿದ್ದೇನೆ ಅಂದ್ರೆ ಕೇವಲ 35%. ಅಕಸ್ಮಾತ್ ಅದು 70 ಆಗಿದ್ರೆ ಹೇಗಿರಬಹುದಾಗಿತ್ತು ಅನ್ಸಿಲ್ಲ ಯಾಕೆಂದರೆ ಲೆಕ್ಕ ಮನುಷ್ಯನ ಜೀವನದಲ್ಲಿ ಇರಲ್ಲ ಅವನು ಹೇಗೆ ನಡ್ಕೊತಾನೆ ಏನು ಕಲಿತುಕೊಂಡಿದ್ದಾನೆ ಜೀವನ ಅವನಿಗೆ ಏನು ಕಲಸಿದೆ ಅನ್ನೋದರ ಮೇಲೆ ಅವನು ಉಳಿತಾನೆ. ನನ್ನ ಜೀವನವನ್ನು ಜ್ಞಾಪಿಸಿಕೊಂಡಂತಹ ನಿಮ್ಮೆಲ್ಲರಿಗೂ ತಲೆಬಾಗಿ ನಾನು ನಮಸ್ಕಾರ ಎಂದರು ಶ್ರೀನಾಥ್.

ಕೊನೆಯದಾಗಿ ಈ ಸಂಜೆಯ ಕೊನೆಯ ಗೀತೆ ಶ್ರೀನಾಥ್ ಅವರ ಅಭಿನಯದ ಮಾನಸ ಸರೋವರ ಚಿತ್ರದ 'ನೀನೇ ಸಾಕಿದಾ ಗಿಣಿ'ಯನ್ನು ಹಾಡಿದರು ರಾಮಚಂದ್ರ ಹಡಪದ್.

ಇಡೀ ಸಂಗೀತ ಕ್ಷೇತ್ರಕ್ಕೆ ಚಾಲೆಂಜ್ ಆಗಿದ್ದಂತಹ "ನೀನೇ ಸಾಕಿದಾ ಗಿಣಿ". ರೆಕಾರ್ಡಿಂಗ್ ಬಗ್ಗೆ ಕಣ್ಣು ತೇವಗೊಳ್ಳುವ ಘಟನೆಯನ್ನು ನೆನಪಿಸಿಕೊಂಡರು ಶ್ರೀನಾಥ್.

**ಶ್ರೀನಾಥ್ :** ಪ್ರಸಾದ್ ಸ್ಟುಡಿಯೋನಲ್ಲಿ ರೆಕಾರ್ಡಿಂಗ್ ಮಾಡುವಾಗ ಬಾಲು ಬಂದ ಎಲ್ಲ ಕಂಪೋಸ್ ಆಗಿತ್ತು. ಕೂತ್ಕೊಂಡ ಹಾಡುಗಳ ಕೇಳ್ಕೊಂಡ ನೋಟ್ಸ್ ಎಲ್ಲ ಬರ್ಕೊಂಡ ಎಲ್ಲ ಆಯ್ತು. ಅವನು ಹಾಡಿನ ರೂಮ್ಗೆ ಹೋದ. ಆರ್ಕೆಸ್ಟ್ರ ಎಲ್ಲ ಇದ್ರು. ಅಲ್ಲಿ ಹೋದ ಪುಟ್ಟಣ್ಣ ಜಿ 'ಅಣ್ಣಾ ಬಾಲುಗೆ ಹೋಗಿ ಈ ಹಾಡು ಹೇಗಿರಬೇಕು ಸ್ವಲ್ಪ ವಿವರಿಸ್ತೀಯಾ? "ಮಾಡ್ತೀನಿ ಪುಟ್ಟಣ್ಣ ಜಿ ಅಂತ ಹೋಗಿ ಬಾಲುಗೆ ಇದು ಈತರ ಈತರ ಹೀಗಿಗಿದೆ ಹೀಗಿಗಿದೆ" ಅಂತ ವಿವರಿಸಿದೆ. ಬಾಲು–ನನಗೆ ಒಂದು ಹೆಲ್ಪ್ ಮಾಡ್ತೀಯಾ ಅಂದ

ಏನಪ್ಪಾ ಅಂದೆ, "ವಿಜಯ ಭಾಸ್ಕರ್ ಹತ್ರ ಹೋಗಿ ನಾನು ರಿಹರ್ಸಲ್ ಗಿಹರ್ಸಲ್ ಮಾಡೊಲ್ಲ ಸೀದಾ ಟೇಕ್ ಹೇಳ್ತೀನಿ" ಹೇಳ್ತೀಯಾ. ಓಹ್ ಹೇಳ್ತೀನಿ ಅಂದೆ. ವಿಜಯ್ ಭಾಸ್ಕರ್ ಒಪ್ಪಿಕೊಂಡ್ರು.

ಸರಿ ಟೇಕ್‌ಗೆ ಅವನಲ್ಲಿ ನಿಂತ್ಕೊಂಡ ನಾನು ಅವನ ಹತ್ರ ನಿಂತಿದ್ದೀನಿ–"ನೀನೇ ಸಾಕಿದ" ಅಂತ ಎತ್ಕೊಂಡ

ಡನ್ ಅಂತು ಎದೆ. ಇಡೀ ಸ್ಟುಡಿಯೋ ಒಂತರ ಹೇಗೆ ನಿಂತಿತ್ತು ಅಂದ್ರೆ ಪ್ರತಿಯೊಬ್ಬರೂ ಸ್ಟ್ಯಾಚ್ಯುಗಳು. ಬಾಲು ಒಂದು ಚರಣ ಹಾಡಿದ ತಕ್ಷಣ ಪುಟ್ಟಣ್ಣಜಿ ಅಳ್ತಾ ಅಳ್ತಾ ಹೊರಟೋಗಿದ್ದಾರೆ. ಆಚೆ ಇವನು ಹಾಡು ಮುಗಿಸಿಬಿಟ್ಟು ಹಾಗೆ ಬಂದು ನಾ ಹೊರಡ್ತೀನಪ್ಪ ಅಂದ. ಹಾ ಒಂದು ನಿಮಿಷ ಇರು ಪುಟ್ಟಣಜಿ ಬರ್ತಾರೆ ಅವರೇ ಎಕ್ಸಿಕ್ಯೂಟಿವ್ ಪ್ರೊಡ್ಯೂಸರ್. ಅವರೇ ನಿನಗೆ ದುಡ್ಡು ಕೊಡೋರು. ಬಾಲು–"ನನಗೆ ದುಡ್ಡು ಗಿಡ್ಡು ಏನ ಬೇಡ, ಇಷ್ಟು ಒಳ್ಳೆ ಹಾಡು ನನ್ನ ಜೀವನದಲ್ಲಿ ಕೊಟ್ಟಿದ್ದಾರೆ ಅವರಿಗೆ ತುಂಬಾ ಥ್ಯಾಂಕ್ಸ್" ಅಂತ ಹೇಳಿ ನೆಲಮುಟ್ಟಿ ನಮಸ್ಕರಿಸಿ ಹೊರಟೋದ.

ನಾನು ಪುಟ್ಟಣ್ಣಜಿ ಹತ್ರ ಹೋಗಿ–"ಪುಟ್ಟಣ್ಣಜಿ ಬಾಲು ಹೊಂಟು ಹೋಗ್ತಾ ಇದ್ದಾನೆ, "ನಿಲ್ಸಪ್ಪ ನಿಲ್ಸಪ್ಪ ಅವನಿಗೆ ಹಣ ಕೊಡಬೇಕು. ಅವನು ನಮಸ್ಕಾರ ಮಾಡಿದ್ದಾನೆ ಏನು ಬೇಡ ಅಂತೆ ಅಂದೆ. ಆ ಹಾಡು ಕೇಳಿದರು ಒಂದೇ ಟೇಕ್‌ನಲ್ಲಿ ಅದೇನು ಹಾಡಿದ್ದಾನೆ. ಏನು ಹಾಡಿದ್ದಾನೆ–ಅಳ್ತಾ ಅಳ್ತಾ ಅಳ್ತಾ ಹಾಡಿದ್ದಾನೆ. ಆ ಹಾಡು ಇವತ್ತು ಜ್ಞಾಪಕ ಬರುತ್ತೆ. ಈ ಹಾಡು ಕೇಳಿದಾಗ ನನಗೂ ಕಣ್ಣಲ್ಲಿ ನೀರು ಬರುತ್ತೆ. ಯಾಕೆಂದ್ರೆ ಪುಟ್ಟಣ್ಣಜಿ ಜ್ಞಾಪಕ ಬರ್ತಾರೆ, ಬಾಲು ಜ್ಞಾಪಕ ಬರ್ತದೆ ಆ ಸಿನಿಮಾ ಜ್ಞಾಪಕ ಬರುತ್ತೆ ಕಥೆ ಜ್ಞಾಪಕ ಬರುತ್ತೆ.

ಕಾರ್ಯಕ್ರಮದ ಕೊನೆಯಲ್ಲಿ ಗಾಯಕ ರಾಮಚಂದ್ರ ಹಡಪದ್ ಅವರು ಬೆಂಗಳೂರಿಂದ ಬಂದ ಕಲಾವಿದರನ್ನು ಪರಿಚಯಿಸಿದರು. ಕೀಬೋರ್ಡ್‌ನಲ್ಲಿ ನಮ್ಮ ನಾಡಿನ ಶ್ರೇಷ್ಠ ಕಲಾವಿದ ಸೃಷ್ಟಿ ಉಮೇಶ್, ಕೊಳಲಲ್ಲಿ ನೀತು ನೀನಾದ್, ತಬಲದಲ್ಲಿ ರಘುನಾಥ್, ಡೋಲಕ್–ಷೇರು ಮುನ್ನ, ರಿದಂ ಪ್ಯಾಡ್ ಸೃಷ್ಟಿ ಶ್ರೀನಿವಾಸ್ ಹಾಗೂ ಅವರ ಜೊತೆ ಅಷ್ಟೇ ಮಧುರವಾಗಿ ಹಾಡಿದ ಸಹಗಾಯಕಿ ಹರ್ಷ ರಂಜನಿ ಅವರನ್ನು ಪರಿಚಯಿಸುತ್ತ ದೆಹಲಿ ಕರ್ನಾಟಕ ಸಂಘದೊಂದಿಗಿನ ತಮ್ಮ 10–12 ವರ್ಷಗಳ ಬಾಂಧವ್ಯವನ್ನು ಆಪ್ತವಾಗಿ ನೆನೆದರು.

ಈ ಕಾರ್ಯಕ್ರಮಕ್ಕೆ ಮೂರು ಲಕ್ಷ ರುಪಾಯಿಗಳ ಧನ ಸಹಾಯವನ್ನು ನೀಡಿದ ಕರ್ಣಾಟಕ ಬ್ಯಾಂಕ್ ಮತ್ತು ವಿಶೇಷವಾಗಿ ಬ್ಯಾಂಕ್ ಡಿಜಿಎಮ್ ಬಸವರಾಜ್ ಅವರಿಗೆ ಹೂಗುಚ್ಛ ನೀಡಿ ಸಮಸ್ತ ಕನ್ನಡಿಗರ ಪರವಾಗಿ ಧನ್ಯವಾದಗಳನ್ನು ಸಲ್ಲಿಸಲಾಯಿತು. ಪ್ರಣಯರಾಜ ಶ್ರೀನಾಥ್ ಅಂತಹ ಮಹಾನ್ ಚೇತನದ ಜೊತೆಗೆ ಮಧುರವಾದ ಸಂಜೆಯನ್ನು ಕಳೆದ ನಾವೆಲ್ಲರೂ ಭಾಗ್ಯವಂತರು. ಈ ನಾಡು ಕಂಡ ಮೆಲುದನಿಯ, ಸರಳ ಸುಂದರ ವ್ಯಕ್ತಿತ್ವದ ಶ್ರೀನಾಥ್ ಅವರು ಚಿರ ಯುವಕರಾಗಿ ಆರೋಗ್ಯವಂತರಾಗಿರಲಿ, ಇನ್ನಷ್ಟು ವರ್ಷಗಳ ಕಾಲ ವೇದಿಕೆಯನ್ನು ಹಂಚಿಕೊಳ್ಳುವಂತಹ ಶಕ್ತಿ ಕರುಣಿಸಲಿ ದೇವರು ಅಂತ ಬೇಡಿಕೊಳ್ಳುತ್ತೇವೆ. ಸಮಸ್ತ ದೆಹಲಿ ಕನ್ನಡಿಗರಿಂದ ಅವರಿಗೆ ಆತ್ಮೀಯ ಶುಭ ಹಾರೈಕೆಗಳು. ❑

**ಹರಿಪ್ರಿಯ**



# "ಶೌರ್ಯ, ಸ್ವಾಭಿಮಾನ ಮತ್ತು ಸ್ವಾತಂತ್ರ್ಯದ ಪ್ರತೀಕ"
# ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತೋತ್ಸವ




ದೆಹಲಿ ಕರ್ನಾಟಕ ಸಂಘ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ, ನವದೆಹಲಿ ಸಹಯೋಗದಲ್ಲಿ ದಿನಾಂಕ 23.08.2026 ರಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಜಯಂತೋತ್ಸವ ಕಾರ್ಯಕ್ರಮವನ್ನು ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳು, ಕರ್ನಾಟಕ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಚ್.ಎಂ. ರೇವಣ್ಣ ಹಾಗೂ ಇತರ ಗಣ್ಯರು ದೀಪ ಪ್ರಜ್ವಲಿಸುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸ್ವಾತಂತ್ರ ಹೋರಾಟದಲ್ಲಿ ದೇಶೀಯ ಯುದ್ಧದ ಮೂಲಕ ಚಳ್ಳೆಹಣ್ಣು ತಿನ್ನಿಸಿದ ಸಂಗೊಳ್ಳಿ ರಾಯಣ್ಣ ಬ್ರಿಟಿಷರಲ್ಲಿ ನಡುಕ ಹುಟ್ಟಿಸಿದ್ದರು. ಸ್ವಾತಂತ್ರ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣ ಪಾತ್ರಃಸ್ಮರಣೀಯ ಎಂದು ಶ್ರೀ ಎಚ್.ಎಂ. ರೇವಣ್ಣ ಅಭಿಪ್ರಾಯಪಟ್ಟರು. ಸ್ವಾತಂತ್ರ ದಿನಾಚರಣೆಯ ದಿನದಂದೇ ಅವರ ಹುಟ್ಟು ಹಬ್ಬ ಹಾಗೂ ಮರಣದಂಡನೆ ವಿಧಿಸಿದ ದಿನ ನಾವು ಗಣರಾಜ್ಯೋತ್ಸವ ಆಚರಿಸುತ್ತೇವೆ ಇದು ಕಾಕತಾಳೀಯವಾದರೂ ಅವರಿಗೆ ಸಲ್ಲುವ ಗೌರವ ಎಂದರು.

ಸರ್ಕಾರ ಅವರ ಹೆಸರಿನಲ್ಲಿ ಸೈನಿಕ ಶಾಲೆ ತೆರೆದಿದೆ, ಮಕ್ಕಳು ಅವರ ದೇಶಪ್ರೇಮ, ನಿಷ್ಠೆಯಂತಹ ಆದರ್ಶಗಳನ್ನು ಪಾಲಿಸಲಿ ಎಂಬುದು ನಮ್ಮ ಆಶಯ. ಬಸವಣ್ಣನವರ ಸಮಾನತೆ, ಬುದ್ಧನ ಆದರ್ಶ, ಅಂಬೇಡ್ಕರ್ ಸಿದ್ಧಾಂತ ಅನುಸರಣೆ ಮಾಡುವ ಏಕಮಾತ್ರ ರಾಜ್ಯ ಕರ್ನಾಟಕ ಎಂದು ಶ್ಲಾಘಿಸಿದರು.

ದೇಶದಾದ್ಯಂತ 13 ಕೋಟಿ ಕುರುಬ ಸಮುದಾಯ ಇದೆ. ಅಲ್ಲಲ್ಲಿ ನಮ್ಮಲ್ಲೇ ಒಡಕುಗಳಿವೆ undefined ಅದನ್ನೂ ಮೀರಿ ಎಲ್ಲರನ್ನೂ ಒಗ್ಗೂಡಿಸಬೇಕು, ನಾವು ಪಕ್ಷಾತೀತವಾಗಿ ಕೆಲಸ ಮಾಡೋಣ, ಅಕ್ಟೋಬರ್‌ನಲ್ಲಿ ರಾಷ್ಟ್ರಮಟ್ಟದ ಸಮಾವೇಶ ಮಾಡುವ ಉದ್ದೇಶವಿದೆ ಎಂದರು. ದೆಹಲಿ ಕರ್ನಾಟಕ ಸಂಘಕ್ಕೆ ಸರ್ಕಾರದಿಂದ 25 ಲಕ್ಷ ರೂಪಾಯಿಗಳ ಅನುದಾನವನ್ನು ಕೊಡಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಭರವಸೆಯನ್ನು ನೀಡಿದರು ಮತ್ತು ಕನಕದಾಸರ ಕೀರ್ತನೆಗಳು 14 ಭಾಷೆಯಲ್ಲಿದೆ ಎಲ್ಲರೂ ಓದಬೇಕು ಎಂದರು. ಕನಕದಾಸರ ಬಗ್ಗೆ ಕನ್ನಡದಲ್ಲಿರುವ ಸಾಹಿತ್ಯವನ್ನು ಕೀರ್ತನೆಗಳನ್ನು ಅವರ ಕೃತಿಗಳನ್ನು 15 ಭಾಷೆಗೆ ಅನುವಾದ ಮಾಡಿಸಿದ್ದೇವೆ. ಕುರುಬ ಸಾಂಸ್ಕೃತಿಕ ಪರಿಷತ್ತಿನ ಆಶ್ರಯದಲ್ಲಿ ಕಾ.ತ. ಚಿಕ್ಕಣ್ಣನವರ ನೇತೃತ್ವದಲ್ಲಿ ಆ ಕೃತಿಗಳನ್ನು ತಂದಿದ್ದೇವೆ. ಅದಲ್ಲದೆ ಕುರುಬರ ಸಂಸ್ಕೃತಿಯನ್ನು 14 ಸಂಪುಟದಲ್ಲಿ ತರುವ ಕೆಲಸವನ್ನು ಮಾಡಿದ್ದೇವೆ. ರಾಜಕೀಯಕ್ಕಿಂತ ಸಾಹಿತ್ಯಿಕವಾಗಿ ಕನಕದಾಸರ ಮತ್ತು ಸಂಗೊಳ್ಳಿ ರಾಯಣ್ಣನವರ ಸೇವೆ ಮಾಡಲು ಅವಕಾಶ ನೀಡಿರುವಂತಹ ಸಿದ್ದರಾಮಯ್ಯನವರಿಗೆ ವೈಯಕ್ತಿಕವಾಗಿ ಹಾಗೂ ಎಲ್ಲರ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿದರು.

ಮುಖ್ಯ ಅತಿಥಿ ಮಾನ್ಯ ಲೋಕಸಭಾ ಸಂಸದರಾದ ಶ್ರೀ ಕೆ. ರಾಜಶೇಖರ್ ಬಸವರಾಜ್ ಹಿಟ್ನಾಳ್ ಅವರು ಮಾತನಾಡುತ್ತಾ ದೆಹಲಿ ಕರ್ನಾಟಕ ಸಂಘಕ್ಕೆ ಬಹಳ ದಿನದಿಂದ ಭೇಟಿ ನೀಡುವ ಉದ್ದೇಶ ಇತ್ತು ಸಾಧ್ಯವಾಗಿರಲಿಲ್ಲ. ಸಂಗೊಳ್ಳಿ ರಾಯಣ್ಣ ಕಾರ್ಯಕ್ರಮ ಮೂಲಕ ಇಲ್ಲಿಗೆ ಬಂದಿರುವುದು ಖುಷಿ ತಂದಿದೆ ಎಂದು ಹೇಳುತ್ತಾ, ಕರ್ನಾಟಕದ ಜನರು ದೆಹಲಿಯಲ್ಲಿ ಬದುಕು ಕಟ್ಟಿಕೊಂಡಿದ್ದರೂ ರಾಜ್ಯದ ಆಚರಣೆಗಳನ್ನು ಬಿಟ್ಟಿಲ್ಲ ಇದು ಖುಷಿಯ ವಿಚಾರ ಎಂದರು.

ಮತ್ತೋರ್ವ ಮುಖ್ಯ ಅತಿಥಿ ಮಾನ್ಯ ರಾಜ್ಯಸಭಾ ಸದಸ್ಯರು ಹಾಗೂ ಭಾರತೀಯ ಜನತಾ ಪಾರ್ಟಿಯ ಉಪಾಧ್ಯಕ್ಷರಾದ ಪ್ರೊ. ಎಂ. ನಾಗರಾಜ್ ಅವರು ಮಾತನಾಡುತ್ತ ಕರ್ನಾಟಕದಲ್ಲಿ ಈ ಸಮುದಾಯ 50 ಲಕ್ಷಕ್ಕೂ ಮೀರಿ ಇರುವಂತಹದ್ದು. ಅಂದರೆ ರಾಜ್ಯದ ಮೂರನೇ ಅತೀ ದೊಡ್ಡ ಸಮುದಾಯಕ್ಕೆ ಕಳೆದ 40 ವರ್ಷಗಳಿಂದ ರಾಜ್ಯ ಸಭೆಯಲ್ಲಿ ಯಾವುದೇ ಪ್ರಾತಿನಿಧ್ಯ ಇರಲಿಲ್ಲ. ಮೋದಿ ಸರ್ಕಾರ ಹಿಂದುಳಿದ ವರ್ಗದಿಂದ ಬಂದ ನನಗೆ ಅವಕಾಶ ನೀಡಿದೆ. ಅದಕ್ಕಾಗಿ ನಾನು ಧನ್ಯವಾದ ಹೇಳುತ್ತೇನೆ ಎಂದರು. 1857ರಲ್ಲಿ ಸಿಪಾಯಿದಂಗೆ ಆಗಿರುವುದು ಗೊತ್ತಿದೆ. ಅದಕ್ಕೂ 30 ವರ್ಷಗಳ ಮುಂಚೆಯೇ ಅದೇ ರೀತಿಯ ದಂಗೆಯನ್ನು ಕಿತ್ತೂರು ಚೆನ್ನಮ್ಮ ರಾಣಿಯ ಬಂಟನಾದ ಸಂಗೊಳ್ಳಿ ರಾಯಣ್ಣ ಹುಟ್ಟು ಹಾಕಿದ್ದರು, ಬ್ರಿಟಿಷರನ್ನು ಹೆದರಿಸಿದ್ದು ಚರಿತ್ರೆಯಲ್ಲಿದೆ ಎಂದರು.

ದಕ್ಷಿಣ ಭಾರತದ ಹಿಂದುಳಿದ ವರ್ಗದ ಒಕ್ಕೂಟದ ಅಧ್ಯಕ್ಷರಾದ. ಜುಬಾಲು ಶ್ರೀನಿವಾಸುಲು ಅವರು ಮಾತನಾಡುತ್ತ "ಆಂಧ್ರ ಮತ್ತು ಕರ್ನಾಟಕದ ಅಣ್ಣ ತಮ್ಮಂದಿರಾದ ಕನ್ನಡಿಗರು ಹಾಗೂ ತೆಲುಗಿನವರ ನಡುವೆ ಇರುವ ಆತ್ಮೀಯ ಸಂಬಂಧವನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. ಈ ಕಾರ್ಯಕ್ರಮದಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು. ಇಲ್ಲಿ ನಡೆದಿರುವ ಈ ಸಾಂಸ್ಕೃತಿಕ ಸಂಗಮವು ಎರಡೂ ರಾಜ್ಯಗಳ ನಡುವಿನ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸಲಿ ಎಂಬುದು ನನ್ನ ಆಶಯ." ಕುಲಪತಿ/ಅಧ್ಯಕ್ಷರು ಸೇರಿದಂತೆ ಈ ಕಾರ್ಯಕ್ರಮಕ್ಕೆ ಕಾರಣರಾದ ಎಲ್ಲರಿಗೂ ನನ್ನ ಕೃತಜ್ಞತೆಗಳು.

"ಕೊಪ್ಪಳದ ರಾಜಶೇಖರ್ ಸರ್ ಅವರು ನನ್ನನ್ನು ಆಹ್ವಾನಿಸಿ, ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶವನ್ನು ನೀಡಿರುವುದು ನನಗೆ ಸಂತೋಷ ತಂದಿದೆ." ತಿರುಪತಿ ಮೀಟಿಂಗ್‌ಗೆ ಹೋಗಿದ್ದಾಗ ರಾಜಶೇಖರ್ ಅವರ ಪರಿಚಯವಾಯಿತು.

ತಿರುಪತಿಯಲ್ಲಿ 14 ರಾಜ್ಯಗಳ ಸಂಘ ಒಟ್ಟಿಗೆ ಸೇರಿದಾಗ, ನಾನು ಆ ದಿನ ಭಾರತದಾದ್ಯಂತ ಇಷ್ಟು ಜನರನ್ನು ನೋಡಿದೆ. ತಿರುಪತಿಯಲ್ಲಿ ಎಲ್ಲರೂ ಆಶ್ಚರ್ಯಚಕಿತರಾದರು, ಮಾಧ್ಯಮದವರು ಕೂಡ ಬಂದಿದ್ದರು. ಆದ್ದರಿಂದ ಈ ಕಾರ್ಯಕ್ರಮವನ್ನು ಏರ್ಪಡಿಸಿದ ರಾಜಶೇಖರ್ ಸರ್ ಅವರಿಗೆ ಪ್ರತ್ಯೇಕ ಧನ್ಯವಾದಗಳು. ರೇವಣ್ಣ ಅವರೊಂದಿಗೆ ವೇದಿಕೆ ಹಂಚಿಕೊಂಡಿದ್ದು ಇದು ಮೂರನೇ ಬಾರಿ, ನನಗೆ ಬಹಳ ಆನಂದವಾಗಿದೆ. ಕನಕದಾಸ ಹಾಗೂ ಸಂಗೊಳ್ಳಿ ರಾಯಣ್ಣ ಸ್ಮರಣೆಯ. ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ ಎಲ್ಲರಿಗೂ ನನ್ನ



ಅಭಿನಂದನೆಗಳು ಮತ್ತು ಧನ್ಯವಾದಗಳು. ವಿಶೇಷವಾಗಿ ರಾಧಾಕೃಷ್ಣ ಹಾಗೂ ಮಹದೇವ ಅವರಿಗೂ ಧನ್ಯವಾದಗಳು ಎಂದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್. ಅವರು ಮಾತನಾಡುತ್ತಾ ಈಗಾಗಲೇ ವೇದಿಕೆ ಮೇಲಿನ ದಿಗ್ಗಜರು ನಿಮ್ಮನ್ನೆಲ್ಲ ಉದ್ದೇಶಿಸಿ ಮಾತನಾಡಿದ್ದಾರೆ. ಅವರ ಮಾತಿನಲ್ಲಿದ್ದಂತಹ ಮೌಲ್ಯ, ಮಾತಿನಲ್ಲಿದ್ದಂತಹ ಕಂಪನ ಎಲ್ಲವನ್ನು ಅನುಭವಿಸಿದ್ದೀರಿ ಅಂತ ಭಾವಿಸುತ್ತೇನೆ. ಅಲ್ಲದೇ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾಗಿ ಇಂದು ವೇದಿಕೆಯ ಮೇಲೆ ಇರುವುದರಿಂದ ಅದರಲ್ಲೂ ವಿಶೇಷವಾಗಿ ಮೂರು-ನಾಲ್ಕು ದಶಕಗಳಿಂದ ದೆಹಲಿ ಕರ್ನಾಟಕ ಸಂಘ ಎಲ್ಲ ಚಟುವಟಿಕೆಗಳಿಗೆ ಹಿನ್ನೆಲೆಯಿಂದ ನಿಂತು ಪ್ರೇರಣಾಶಕ್ತಿಯಾಗಿರುವಂತಹ ನಮ್ಮೆಲ್ಲರ ಆತ್ಮೀಯರಾದ ಎಚ್.ಎಂ. ರೇವಣ್ಣನವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅನಂತ ಅನಂತ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಲೋಕ ಸಭೆಯಿಂದ ಸಂಸತ್ತಿಗೆ ಆರಿಸಿ ಬಂದಂತಹ ರಾಜಶೇಖರ್ ಹಿಟ್ನಾಳ್ ಅವರಿಗೂ ಹೃದಯಪೂರ್ವಕ ಅಭಿನಂದನೆ, ಪ್ರೊ. ನಾಗರಾಜ ಅವರ ಆಗಮನ ನಮ್ಮ ಶಕ್ತಿ. ನಿಮ್ಮಂತಹ ಹಿರಿಯರು ಸಂಘಕ್ಕೆ ಬರುವುದೇ ನಮ್ಮ ಸಂಘದ ಶಕ್ತಿ. ರೇವಣ್ಣನವರು ಮಾತನಾಡುವಾಗ ಬುದ್ಧ, ಬಸವ, ಅಂಬೇಡ್ಕರ್ ಚಿಂತನೆಗಳ ಬಗ್ಗೆ ಹೇಳಿದ್ದು, ಅಂದರೆ ಒಬ್ಬ ವ್ಯಕ್ತಿ ಒಳ್ಳೆಯ ಮನಸ್ಸಿದ್ದು ಸಮಾಜಕ್ಕೆ ಒಳ್ಳೆಯದು ಬಯಸುತ್ತಾನೆ. ಅಂದರೆ ಇನ್ನು ಮಿಕ್ಕಿದ ಎಲ್ಲಾ ತಳಹದಿಗಳನ್ನು ಮೀರಿ ಮಾನವತಾವಾದಿಯಾಗಿರುತ್ತಾನೆ. ಹಾಗಿದ್ದಾಗ ಮಾತ್ರ ರಾಷ್ಟ್ರಮಟ್ಟದಲ್ಲಿ ಬೆಳೆಯಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಮಹನೀಯರನ್ನು ಸ್ಮರಿಸುವ ಹಾಗು ಮುಂದಿನ ಪೀಳಿಗೆಗೆ ದಾಟಿಸುವಂತಹ ಪ್ರಯತ್ನವನ್ನು ಈ ರೀತಿಯ ಕಾರ್ಯಕ್ರಮಗಳ ಮೂಲಕ ಮಾಡುತ್ತಿರುವುದು ಬಹಳ ಒಳ್ಳೆಯ ನಡೆ ಎಂದರು.

ದೆಹಲಿ ಕರ್ನಾಟಕ ಸಂಘ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರಾಧಾಕೃಷ್ಣ ಮತ್ತು ಶ್ರೀ ಎಸ್.ಡಿ. ಶ್ರೀನಿವಾಸ್ ಅವರು ಉಪಸ್ಥಿತರಿದ್ದರು.






ಕಾರ್ಯಕ್ರಮವನ್ನು ಖಜಾಂಚಿ ಶ್ರೀಮತಿ ಆಶಾಲತಾ ಎಂ. ಅವರು ನಿರೂಪಿಸಿದರು. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಗೌರವಾಧ್ಯಕ್ಷರಾದ ಶ್ರೀ ಮುನಿರಾಜು ಅವರು ಸ್ವಾಗತಿಸಿದರು, ಅಧ್ಯಕ್ಷ ಶ್ರೀ ಮಹಾದೇವ್ ಆರ್. ಅವರು ವಂದನಾರ್ಪಣೆ ಸಲ್ಲಿಸಿದರು.

ತದನಂತರ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಭ್ರಮರಿ ಡಾನ್ಸ್ ರೆಪರೇಟರಿ ತಂಡ, ಬೆಂಗಳೂರು ಇವರಿಂದ 'ಮುತ್ತು ಬಂದಿದೆ ಕೇರಿಗೆ' ರಚನೆ-ಚಿಕ್ಕಣ್ಣ, ನಿರ್ದೇಶನ-ಸ್ನೇಹ ಕಪ್ಪಣ್ಣ, ಸಂಗೀತ-ಪ್ರವೀಣ್ ಡಿ. ರಾವ್ ಮತ್ತು ಡಾ. ಶ್ರೀನಿವಾಸ್ ಜಿ. ಕಪ್ಪಣ್ಣ-ತಾಂತ್ರಿಕ ನಿರ್ದೇಶನದ ಸಂಗೀತನೃತ್ಯರೂಪಕ ದೆಹಲಿ ಕನ್ನಡಿಗರ ಮನಸೂರೆಗೊಂಡಿತು. ❑

**ಅಭಿಮತ ವರದಿ**



ದಿನಾಂಕ : 15.08.2026 ರಂದು ನವದೆಹಲಿಯಲ್ಲಿ ಚಾತುರ್ಮಾಸ್ಯ ವ್ರತಾಚರಣೆಯಲ್ಲಿರುವ ಪೇಜಾವರ ಮಠಾಧೀಶರಾದ

ಶ್ರೀ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್. ಅವರೊಂದಿಗೆ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ಸಂಘದ ಆಜೀವ ಸದಸ್ಯರುಗಳು ಭೇಟಿ ಮಾಡಿ ದೇವರ ದರ್ಶನ ಪಡೆದು ಸ್ವಾಮೀಜಿಯವರಿಗೆ ಭಕ್ತಿ ಗೌರವ ಸಮರ್ಪಿಸಿ ಆಶೀರ್ವಾದ ಪಡೆದರು.

# ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 'ಗುರು ವಂದನೆ' ಕಾರ್ಯಕ್ರಮ




ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ದೆಹಲಿ ರಾಜ್ಯ ಘಟಕದ ವತಿಯಿಂದ ದಿನಾಂಕ 02.08.2026 ರಂದು ದೆಹಲಿ ಕರ್ನಾಟಕ ಸಂಘದ ವಿಚಾರಸಂಕೀರ್ಣ ಸಭಾಂಗಣದಲ್ಲಿ "ಗುರು ವಂದನೆ" ಕಾರ್ಯಕ್ರಮ ಭಕ್ತಿ, ಶ್ರದ್ಧೆ ಹಾಗೂ ಸಮುದಾಯದ ಏಕೀಕರಣದ ಆಶಯದೊಂದಿಗೆ ಯಶಸ್ವಿಯಾಗಿ ಜರುಗಿತು.

ಋಷಿಕೇಶದಲ್ಲಿ ಅನುಷ್ಠಾನವನ್ನು ಪೂರ್ಣಗೊಳಿಸಿ ದೆಹಲಿ ಮಾರ್ಗವಾಗಿ ಕರ್ನಾಟಕಕ್ಕೆ ಮರಳುತ್ತಿದ್ದ ಹಂಪಿ ಹೇಮಕೂಟ ಶೂನ್ಯ ಸಿಂಹಾಸನಾಧೀಶ್ವರ ಪರಮಪೂಜ್ಯ ಶ್ರೀಮನ್ ನಿರಂಜನ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು, ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನ ಮಠ, ಹೊಸಪೇಟೆ–ಬಳ್ಳಾರಿ–ಹಾಲಕೆರೆ ಅವರ ಪಾವನ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಿತು.

ಪೂಜ್ಯರೊಂದಿಗೆ ಶ್ರೀ ಸುವರ್ಣಗಿರಿ ವಿರಕ್ತಮಠ, ವಳಬಳ್ಳಾರಿಯ ಪೂಜ್ಯ ಶ್ರೀ ಮ.ನಿ.ಪ್ರ. ಬಸವಲಿಂಗ ಮಹಾಸ್ವಾಮಿಗಳು, ಶ್ರೀ ಕೊಟ್ಟೂರು ಸ್ವಾಮಿ ಶಾಖಾ ಮಠ, ಸೋಮಸಮುದ್ರದ ಪೂಜ್ಯ ಶ್ರೀ ಮ.ನಿ.ಪ್ರ. ಸಿದ್ದಲಿಂಗ ಮಹಾಸ್ವಾಮಿಗಳು ಹಾಗೂ ತಾರೀಹಾಳದ ಶ್ರೀ ಅಡವಿಸಿದ್ದೇಶ್ವರ ಮಠದ ಪೂಜ್ಯ ಶ್ರೀ ಅಡವೀಶ್ವರ ದೇವರು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಆಧ್ಯಾತ್ಮಿಕ ಮೆರುಗು ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀ ಶಿವಯ್ಯ ಸ್ವಾಮಿ, ಸದಸ್ಯರು, ರಾಜ್ಯ ಅಭಿವೃದ್ಧಿ ಸಮನ್ವಯ ಮತ್ತು ಮೇಲುಸ್ತುವಾರಿ ಸಮಿತಿ, ಭಾರತ ಸರ್ಕಾರ, ಶ್ರೀ ರೇಣುಕುಮಾರ ಆರ್., ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ, ನವದೆಹಲಿ; ಶ್ರೀ ಪಿ. ರಾಜಣ್ಣ, ಮುಖ್ಯ ಸಂಪರ್ಕಾಧಿಕಾರಿಗಳು, ಜೆಎಸ್‌ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಶನ್, ನೋಯ್ಡಾ; ಶ್ರೀ ಎನ್.ಪಿ. ಚಂದ್ರಶೇಖರ, ಅಧ್ಯಕ್ಷರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ದೆಹಲಿ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ದೆಹಲಿ ರಾಜ್ಯ ಘಟಕದ ಅಧ್ಯಕ್ಷ ಶ್ರೀಕಂಠ ಚೌಕಿಮಠ, ಉಪಾಧ್ಯಕ್ಷ ಶ್ರೀ ಮಹೇಶ ಕೋಳಿವಾಡ, ಪ್ರಧಾನ ಕಾರ್ಯದರ್ಶಿ ಶ್ರೀ ಉಮೇಶ ಬಿ.ಆರ್., ಕೋಶಾಧಿಕಾರಿ ಡಾ. ಬಸವರಾಜ ಹಿರೇಮಠ, ಕಾರ್ಯದರ್ಶಿ ಶ್ರೀ ಶಾಂತಕುಮಾರ ನಿಂಬಾಲ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕುಮಾರ ಸಿ. ಮತ್ತು ಶ್ರೀ ಬಸವರಾಜ ಬಂಗೇರ ಉಪಸ್ಥಿತರಿದ್ದರು.

"ಅಧಿಕಾರ ಸ್ವೀಕಾರವಲ್ಲ; ಸಮುದಾಯದ ಏಕೀಕರಣದ ಸಂಕಲ್ಪದ ದೀಕ್ಷೆ" ಪ್ರಾಸ್ತಾವಿಕವಾಗಿ ಮಾತನಾಡಿದ ದೆಹಲಿ ರಾಜ್ಯ ಘಟಕದ ಅಧ್ಯಕ್ಷ ಶ್ರೀಕಂಠ ಚೌಕಿಮಠ, ಮಹಾಸಭೆಯಿಂದ ಇತ್ತೀಚೆಗೆ ಆಯ್ಕೆಯಾದ ನೂತನ ಪದಾಧಿಕಾರಿಗಳು ಸಾಂಪ್ರದಾಯಿಕವಾದ "ಅಧಿಕಾರ ಗ್ರಹಣ" ಅಥವಾ "ಅಧಿಕಾರ ಸ್ವೀಕಾರ" ಸಮಾರಂಭವನ್ನು ಆಯೋಜಿಸದೆ, "ಗುರು ವಂದನೆ" ಎಂಬ ಪವಿತ್ರ ಕಾರ್ಯಕ್ರಮದ ಮೂಲಕ ಸಮುದಾಯದ ಏಕೀಕರಣದ ಸಂಕಲ್ಪದ ದೀಕ್ಷೆಯನ್ನು ಪಡೆಯುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ದೆಹಲಿಯಲ್ಲಿರುವ ವೀರಶೈವ–ಲಿಂಗಾಯತ ಬಾಂಧವರನ್ನು ಸಂಘಟಿಸಿ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಸಮುದಾಯವನ್ನು ಮತ್ತಷ್ಟು ಸದೃಢಗೊಳಿಸುವ ಆಶಯವನ್ನು ಅವರು ವ್ಯಕ್ತಪಡಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ರೇಣುಕುಮಾರ ಆರ್. ಮಾತನಾಡಿ, ಪ್ರತಿಯೊಂದು ಧರ್ಮ ಮತ್ತು ಸಮುದಾಯದಲ್ಲಿಯೂ ಹತ್ತು ಹಲವು ಸಮಸ್ಯೆಗಳು ಹಾಗೂ ಭಿನ್ನಾಭಿಪ್ರಾಯಗಳು ಸಹಜ. ಆದರೆ ಅವೆಲ್ಲವನ್ನೂ ಮೀರಿ ದೆಹಲಿ ಕರ್ನಾಟಕ ಸಂಘವು ಸರ್ವಧರ್ಮ ಸಮನ್ವಯದ ಕನ್ನಡಿಗರ ಮನೆಯಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಿದರು.

ತಾರೀಹಾಳದ ಶ್ರೀ ಅಡವಿಸಿದ್ದೇಶ್ವರ ಮಠದ ಪೂಜ್ಯ ಶ್ರೀ ಅಡವೀಶ್ವರ ದೇವರು ಧರ್ಮದ ಅವಶ್ಯಕತೆ, ಧಾರ್ಮಿಕ ಆಚಾರ–ವಿಚಾರಗಳ ಮಹತ್ವ ಹಾಗೂ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯದ ಕುರಿತು ಮಾತನಾಡಿದರು. ಮಕ್ಕಳಿಗೆ ಇಷ್ಟಲಿಂಗ ದೀಕ್ಷೆ ಆಯೋಜಿಸಲು ಜಗದ್ಗುರುಗಳ ಸಲಹೆ ಆಶೀರ್ವಚನ ನೀಡಿದ ಹಂಪಿ ಹೇಮಕೂಟ ಶೂನ್ಯ ಸಿಂಹಾಸನಾಧೀಶ್ವರ ಪರಮಪೂಜ್ಯ ಶ್ರೀಮನ್ ನಿರಂಜನ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು, ದೆಹಲಿ ಕರ್ನಾಟಕ ಸಂಘದ ಕಾರ್ಯ ಚಟುವಟಿಕೆಗಳನ್ನು ಶ್ಲಾಘಿಸಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ದೆಹಲಿ ರಾಜ್ಯ ಘಟಕದ ನೂತನ ಪದಾಧಿಕಾರಿಗಳನ್ನು ಅಭಿನಂದಿಸಿದರು.

ದೆಹಲಿಯಲ್ಲಿರುವ ವೀರಶೈವ–ಲಿಂಗಾಯತ ಬಾಂಧವರ ಮಕ್ಕಳಿಗಾಗಿ ಇಷ್ಟಲಿಂಗ ದೀಕ್ಷಾ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ಹೊಸ ಪೀಳಿಗೆಯಲ್ಲಿ ಧರ್ಮಜಾಗೃತಿ ಮೂಡಿಸುವ ವಿನೂತನ ಕಾರ್ಯಕ್ಕೆ ಮುಂದಾಗಬೇಕು ಎಂದು ಸಲಹೆ ನೀಡಿದರು. ಧರ್ಮಜಾಗೃತಿ, ಸಂಸ್ಕಾರ ಮತ್ತು ದೇಶಭಕ್ತಿಯ ಮಹತ್ವವನ್ನು ತಮ್ಮ ಆಶೀರ್ವಚನದಲ್ಲಿ ಪ್ರತಿಪಾದಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪೂಜ್ಯ ಗುರುಗಳಿಗೆ ಫಲಪುಷ್ಪಗಳನ್ನು ಸಮರ್ಪಿಸಿ ಭಕ್ತಿಪೂರ್ವಕ ಗೌರವ ಸಲ್ಲಿಸಲಾಯಿತು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ದೆಹಲಿ ರಾಜ್ಯ ಘಟಕದ ವತಿಯಿಂದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ರೇಣುಕುಮಾರ ಆರ್. ಅವರನ್ನು ಸನ್ಮಾನಿಸಲಾಯಿತು.

ಶ್ರೀ ಶಿವಯ್ಯ ಸ್ವಾಮಿ, ಸದಸ್ಯರು, ರಾಜ್ಯ ಅಭಿವೃದ್ಧಿ ಸಮನ್ವಯ ಮತ್ತು ಮೇಲುಸ್ತುವಾರಿ ಸಮಿತಿ, ಭಾರತ ಸರ್ಕಾರ ಅವರು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ದೆಹಲಿ ರಾಜ್ಯ ಘಟಕದ ನೂತನ ಅಧ್ಯಕ್ಷ ಶ್ರೀಕಂಠ ಚೌಕಿಮಠ ಅವರನ್ನು ಸನ್ಮಾನಿಸಿ ಅಭಿನಂದಿಸಿದರು.

ಶ್ರೀ ಎಚ್.ಎಸ್. ತೇಲಿ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು . ಡಾ. ಬಸವರಾಜ ಹಿರೇಮಠ ಸ್ವಾಗತಿಸಿದರು. ಶ್ರೀ ಕುಮಾರ ಸಿ. ಕಾರ್ಯಕ್ರಮ ನಿರೂಪಿಸಿದರು. ಶ್ರೀ ಶಾಂತಕುಮಾರ ನಿಂಬಾಳ ವಂದನಾರ್ಪಣೆ ಸಲ್ಲಿಸಿದರು.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಶಿವಪ್ಪ ಎಂ., ಅವರು ಕಾರ್ಯಕ್ರಮದ ಆಯೋಜನೆ ಹಾಗೂ ಯಶಸ್ಸಿಗೆ ಸಂಪೂರ್ಣ ಸಹಕಾರ ನೀಡಿದರು.

ಪೂಜ್ಯರ ಆಶೀರ್ವಾದ, ಗಣ್ಯರ ಉಪಸ್ಥಿತಿ, ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳ ಸಹಕಾರ ಹಾಗೂ ದೆಹಲಿಯ ಕನ್ನಡ ಬಾಂಧವರ ಉತ್ಸಾಹಪೂರ್ಣ ಭಾಗವಹಿಸುವಿಕೆಯೊಂದಿಗೆ "ಗುರು ವಂದನೆ" ಕಾರ್ಯಕ್ರಮವು ಅರ್ಥಪೂರ್ಣವಾಗಿ ಹಾಗೂ ಯಶಸ್ವಿಯಾಗಿ ನೆರವೇರಿತು.❑

**ಶ್ರೀಕಂಠ ಚೌಕಿಮಠ**

# ವಿಶ್ವ ಆತ್ಮಹತ್ಯೆ ತಡೆ ದಿನ (ಸೆಪ್ಟೆಂಬರ್ 10)

## ಒಂದು ಸಂಭಾಷಣೆ ಜೀವವನ್ನು ಉಳಿಸಬಹುದು

ಪ್ರತಿ ವರ್ಷ ಸೆಪ್ಟೆಂಬರ್ 10ರಂದು ವಿಶ್ವವು ವಿಶ್ವ ಆತ್ಮಹತ್ಯೆ ತಡೆ ದಿನವನ್ನು ಆಚರಿಸುತ್ತದೆ. ಇದು ಕೇವಲ ಒಂದು ದಿನದ ಆಚರಣೆಯಲ್ಲ; ಮೌನದೊಳಗೆ ಮುಚ್ಚಿಹೋಗಿರುವ ನೋವುಗಳನ್ನು ಆಲಿಸುವ, ಮಾನಸಿಕ ಆರೋಗ್ಯದ ಬಗ್ಗೆ ಸಮಾಜದ ದೃಷ್ಟಿಕೋನವನ್ನು ಬದಲಿಸುವ ಮತ್ತು ಪ್ರತಿಯೊಂದು ಜೀವವೂ ಅಮೂಲ್ಯ ಎಂಬ ಸತ್ಯವನ್ನು ನೆನಪಿಸುವ ದಿನ. ವಿಶ್ವ ಆರೋಗ್ಯ ಸಂಸ್ಥೆ (WHO) ಮತ್ತು ಅಂತರರಾಷ್ಟ್ರೀಯ ಆತ್ಮಹತ್ಯೆ ತಡೆ ಸಂಘಟನೆ (IASP) 2024–2026ರ ಅವಧಿಗೆ "ಆತ್ಮಹತ್ಯೆಯ ಕುರಿತ ಕಥನವನ್ನು ಬದಲಿಸೋಣ" (Changing the Narrative on Suicide) ಎಂಬ ಧ್ಯೇಯವಾಕ್ಯವನ್ನು ಘೋಷಿಸಿವೆ. ಈ ಧ್ಯೇಯ ನಮ್ಮನ್ನು ಮೌನದ ಬದಲಿಗೆ ಸಂವಾದದತ್ತ, ತೀರ್ಪಿನ ಬದಲಿಗೆ ಸಹಾನುಭೂತಿಯತ್ತ ಕರೆದೊಯ್ಯುತ್ತದೆ.

ಭಾರತದಲ್ಲಿ ಈ ಸಂವಾದದ ಅಗತ್ಯ ಇನ್ನಷ್ಟು ತುರ್ತಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, 15 ರಿಂದ 29 ವರ್ಷದ ಯುವಜನರಲ್ಲಿ ಆತ್ಮಹತ್ಯೆ ಇನ್ನೂ ಪ್ರಮುಖ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿದೆ. ಇದನ್ನು ಕೇವಲ ವೈದ್ಯಕೀಯ ಅಥವಾ ವೈಯಕ್ತಿಕ ಸಮಸ್ಯೆಯಾಗಿ ನೋಡುವುದು ಸಾಕಾಗುವುದಿಲ್ಲ. ಇದು ಕುಟುಂಬ, ಶಿಕ್ಷಣ, ಉದ್ಯೋಗ, ಸಂಬಂಧಗಳು ಮತ್ತು ಸಮಾಜದ ಒಟ್ಟಾರೆ ಮನೋಭಾವಕ್ಕೂ ಸಂಬಂಧಿಸಿದ ಪ್ರಶ್ನೆಯಾಗಿದೆ.

ಒಬ್ಬ ಮನೋಚಿಕಿತ್ಸಕರಾಗಿ ನನ್ನ ಅನುಭವ ಹೇಳುವುದು–ಭಾವನಾತ್ಮಕ ನೋವಿಗೆ ಮುಖವಿರುವುದಿಲ್ಲ. ಹೊರಗೆ ನಗುತ್ತಿರುವ ವ್ಯಕ್ತಿಯೊಳಗೂ ಆಳವಾದ ದುಃಖ ನೆಲೆಸಿರಬಹುದು. ದಿನನಿತ್ಯದ ಕೆಲಸಗಳನ್ನು ಮಾಡುತ್ತಾ, ಕುಟುಂಬದ ಜವಾಬ್ದಾರಿಗಳನ್ನು ನಿಭಾಯಿಸುತ್ತಾ, ಸ್ನೇಹಿತರೊಂದಿಗೆ ಬೆರೆಯುತ್ತಾ ಕಾಣುವ ವ್ಯಕ್ತಿಯೂ ಒಳಗೊಳಗೆ ಅಸಹನೀಯ ಹೋರಾಟ ನಡೆಸುತ್ತಿರಬಹುದು. ಆದ್ದರಿಂದ, ಯಾರೊಬ್ಬರ ನಗುವನ್ನು ಅವರ ನೆಮ್ಮದಿಯ ಅಳತೆಯಾಗಿ ಭಾವಿಸುವುದು ಅಪಾಯಕಾರಿ. ಆತ್ಮಹತ್ಯೆಯ ಬಗ್ಗೆ ಸಮಾಜದಲ್ಲಿ ಇನ್ನೂ ಒಂದು ದೊಡ್ಡ ತಪ್ಪು ಕಲ್ಪನೆ ಜೀವಂತವಾಗಿದೆ–ಅದರ ಬಗ್ಗೆ ಮಾತನಾಡಿದರೆ ಆತ್ಮಹತ್ಯೆಗೆ ಪ್ರೇರಣೆ ಸಿಗುತ್ತದೆ ಎಂಬುದು. ಆದರೆ ವೈಜ್ಞಾನಿಕ ಅಧ್ಯಯನಗಳು ಹೇಳುವುದು ಅದರ ವಿರುದ್ಧ. ಸುರಕ್ಷಿತ, ತೀರ್ಪುರಹಿತ ವಾತಾವರಣದಲ್ಲಿ ಒಬ್ಬ ವ್ಯಕ್ತಿಗೆ ತನ್ನ ನೋವನ್ನು ಹಂಚಿಕೊಳ್ಳುವ ಅವಕಾಶ ಸಿಕ್ಕಾಗ, ಏಕಾಂತದ ಭಾರ ಕಡಿಮೆಯಾಗುತ್ತದೆ; ಭರವಸೆಯ ಕಿರಣ ಮೂಡುತ್ತದೆ. ಕೆಲವೊಮ್ಮೆ "ನೀವು ನಿಜವಾಗಿಯೂ ಹೇಗಿದ್ದೀರಿ?" ಎಂಬ ಸರಳ ಪ್ರಶ್ನೆಯೇ ಬದುಕಿನ ದಿಕ್ಕನ್ನು ಬದಲಾಯಿಸಬಹುದು.

ಮಾನಸಿಕ ಸಂಕಷ್ಟಗಳು ಸಾಮಾನ್ಯವಾಗಿ ಒಂದೇ ಘಟನೆಯಿಂದ ಉಂಟಾಗುವುದಿಲ್ಲ. ದೀರ್ಘಕಾಲದ ಒತ್ತಡ, ಸಂಬಂಧಗಳಲ್ಲಿನ ಬಿರುಕು, ಆರ್ಥಿಕ ಸಂಕಷ್ಟ, ಅನಾರೋಗ್ಯ, ಆಘಾತಕಾರಿ ಅನುಭವಗಳು, ಏಕಾಂತ ಅಥವಾ ನಿರಂತರ ನಿರ್ಲಕ್ಷ್ಯ–ಇವೆಲ್ಲವೂ ಸೇರಿ ನಿಧಾನವಾಗಿ ವ್ಯಕ್ತಿಯನ್ನು ನಿರಾಶೆಯ ಅಂಚಿಗೆ ತಳ್ಳಬಹುದು. ಅಂತಹ ಸಂದರ್ಭಗಳಲ್ಲಿ ಅವರಿಗೆ ಬೇಕಾಗಿರುವುದು ಉಪದೇಶವಲ್ಲ; ಅರ್ಥಮಾಡಿಕೊಳ್ಳುವ ಮನಸ್ಸು.



ಲೇಖಕರು : ರಮ್ಯಾ ಆರ್.ಎಸ್.
ಚಿಕಿತ್ಸಕಿ
ಟ್ರಾಮಾ-ಇನ್‌ಫಾರ್ಮ್ಡ್ ಪ್ರಾಕ್ಟಿಷನರ್
ಇಮೇಲ್ : rrs2397@gmail.com

ಭರವಸೆ ಎಂದರೆ ಯಾವಾಗಲೂ ಅದ್ಭುತದ ಕ್ಷಣವಲ್ಲ. ಅದು ಒಬ್ಬ ಸ್ನೇಹಿತನ ತಾಳ್ಮೆಯ ಮಾತಿನಲ್ಲಿ, ಕುಟುಂಬದ ಸದಸ್ಯನ ಕಾಳಜಿಯ ನೋಟದಲ್ಲಿ, ಚಿಕಿತ್ಸಕರ ಕೊಠಡಿಯಲ್ಲಿ ನಡೆಯುವ ಸಂಭಾಷಣೆಯಲ್ಲಿ ಅಥವಾ ಸಹಾಯ ಕೇಳುವ ಧೈರ್ಯದಲ್ಲಿ ಹುಟ್ಟಬಹುದು. ಗುಣಮುಖವಾಗುವ ಪಯಣ ಏರಿಳಿತಗಳಿಂದ ಕೂಡಿರಬಹುದು; ಆದರೆ ಅದು ಅಸಾಧ್ಯವಲ್ಲ.

ಮಾನಸಿಕ ಆರೋಗ್ಯದ ಬಗ್ಗೆ ನಮ್ಮ ಸಮಾಜದ ಭಾಷೆಯೂ ಬದಲಾಗಬೇಕಿದೆ. ನೋವನ್ನು ಮರೆಮಾಚುವುದೇ ಧೈರ್ಯವಲ್ಲ. ಅಗತ್ಯವಿದ್ದಾಗ ನೆರವು ಕೇಳುವುದು ಮತ್ತು ಸ್ವೀಕರಿಸುವುದೇ ನಿಜವಾದ ಧೈರ್ಯ. ಅದೇ ರೀತಿ, ಸಂಕಷ್ಟದಲ್ಲಿರುವ ವ್ಯಕ್ತಿಯ ಪಕ್ಕದಲ್ಲಿ ಯಾವುದೇ ತೀರ್ಪಿಲ್ಲದೆ ಕುಳಿತು ಆಲಿಸುವುದೂ ಅಪರೂಪದ ಮಾನವೀಯತೆ.

ನಿಮ್ಮ ಸುತ್ತಲಿನ ಯಾರಾದರೂ ಏಕಾಂತವನ್ನು ಆಯ್ದುಕೊಳ್ಳುತ್ತಿದ್ದರೆ, ನಿರಂತರ ನಿರಾಶೆಯ ಮಾತುಗಳನ್ನು ಆಡುತ್ತಿದ್ದರೆ, ತಮ್ಮ ಅಮೂಲ್ಯ ವಸ್ತುಗಳನ್ನು ಹಂಚಿಕೊಳ್ಳಲು ಆರಂಭಿಸಿದ್ದರೆ ಅಥವಾ "ನಾನು ಯಾರಿಗೂ ಮುಖ್ಯವಲ್ಲ" ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದರೆ, ಅದನ್ನು ನಿರ್ಲಕ್ಷಿಸಬೇಡಿ. ಅವರೊಂದಿಗೆ ಮಾತನಾಡಿ. ಅವರನ್ನು ಆಲಿಸಿ. ಅಗತ್ಯವಿದ್ದರೆ ಮನೋ ಆರೋಗ್ಯ ತಜ್ಞರ ನೆರವು ಪಡೆಯಲು ಪ್ರೋತ್ಸಾಹಿಸಿ. ನೀವು ಅವರ ಸಮಸ್ಯೆಯನ್ನು ಪರಿಹರಿಸಬೇಕಾಗಿಲ್ಲ; ಆದರೆ ಅವರು ಒಂಟಿಯಲ್ಲ ಎಂಬುದನ್ನು ಅವರಿಗೆ ಅನುಭವಿಸಬಹುದು.

ಇಂದು ಯಾವುದಾದರೂ ಕಾರಣದಿಂದ ಬದುಕು ಭಾರವಾಗಿ ತೋರುತ್ತಿರುವವರಿಗೆ ಒಂದು ಮಾತು–ನಿಮ್ಮ ನೋವು ನಿಜ, ಆದರೆ ಅದು ನಿಮ್ಮ ಭವಿಷ್ಯವಲ್ಲ. ಇಂದಿನ ಕತ್ತಲೆ ನಾಳೆಯ ಬೆಳಕನ್ನು ನಿರಾಕರಿಸುವುದಿಲ್ಲ. ನಿಮ್ಮನ್ನು ಅರ್ಥಮಾಡಿಕೊಳ್ಳಲು ಸಿದ್ಧರಾಗಿರುವ ಜನರಿದ್ದಾರೆ. ನೆರವಾಗಲು ತರಬೇತಿ ಪಡೆದ ತಜ್ಞರಿದ್ದಾರೆ. ನಿಮ್ಮ ಬದುಕು ಮುಂದುವರಿಯಬೇಕೆಂದು ಬಯಸುವ ಹೃದಯಗಳಿವೆ.

ವಿಶ್ವ ಆತ್ಮಹತ್ಯೆ ತಡೆ ದಿನವು ಕೇವಲ ಜೀವಹಾನಿಯನ್ನು ತಡೆಯುವ ದಿನವಲ್ಲ. ಇದು ಸಂಬಂಧಗಳನ್ನು ಗಟ್ಟಿಗೊಳಿಸುವ, ಸಹಾನುಭೂತಿಯನ್ನು ಬೆಳೆಸುವ ಮತ್ತು ಭರವಸೆಯನ್ನು ಜೀವಂತವಾಗಿಡುವ ದಿನ. ಮೌನದ ಬದಲಿಗೆ ಸಂಭಾಷಣೆ, ಕಳಂಕದ ಬದಲಿಗೆ ಅರ್ಥೈಸುವಿಕೆ, ಏಕಾಂತದ ಬದಲಿಗೆ ಜೊತೆಯಾಗುವಿಕೆಯ ಸಂಸ್ಕೃತಿಯನ್ನು ಕಟ್ಟುವ ದಿನ.

ಒಂದು ಕಾಳಜಿಯ ಪ್ರಶ್ನೆ. ಒಂದು ತಾಳ್ಮೆಯ ಕಿವಿ. ಒಂದು ಆತ್ಮೀಯ ಉಪಸ್ಥಿತಿ. ಇವು ಅತಿ ಚಿಕ್ಕ ಸಂಗತಿಗಳೆಂದು ತೋರಬಹುದು. ಆದರೆ ಕೆಲವೊಮ್ಮೆ ಅವೇ ಒಬ್ಬ ವ್ಯಕ್ತಿಯ ಬದುಕಿನ ಹೊಸ ಅಧ್ಯಾಯಕ್ಕೆ ಕಾರಣವಾಗುತ್ತವೆ.

ಪ್ರತಿಯೊಂದು ಜೀವವೂ ಅಮೂಲ್ಯ. ಪ್ರತಿಯೊಂದು ಬದುಕಿನ ಕಥೆಯೂ ಇನ್ನೊಂದು ಅಧ್ಯಾಯಕ್ಕೆ ಅರ್ಹವಾಗಿದೆ. ಮತ್ತು ಭರವಸೆ–ಯಾರೋ ಒಬ್ಬರು ನಮ್ಮನ್ನು ನಿಜವಾಗಿಯೂ ಅರ್ಥಮಾಡಿಕೊಳ್ಳಲು ಸಿದ್ಧರಾಗಿದ್ದಾರೆ ಎಂಬ ಅರಿವಿನಿಂದಲೇ ಆರಂಭವಾಗುತ್ತದೆ.❑

## ಲೇಖನಿಯ ಶಕ್ತಿ ಸಾಹಿತ್ಯವನ್ನಷ್ಟೆ ಅಲ್ಲ ಸಮಾಜದ ಭವಿಷ್ಯವನ್ನು ರೂಪಿಸಬಲ್ಲದು: ವಿನಾಯಕ ಕೃಷ್ಣ ಗೋಕಾಕ್ ಜೀವನಪಾಠ



ಕರ್ನಾಟಕದ ಶಿಕ್ಷಣ ವ್ಯವಸ್ಥೆ ಬದಲಾಯಿಸಿ ಅದೊಂದು ಚಳುವಳಿಗೆ ಕಾರಣವಾದವರು ಸಾಹಿತಿ. ಅವರೇ ವಿ.ಕೃ. ಗೋಕಾಕ್. ಹಾವೇರಿ ಜಿಲ್ಲೆಯ ಸವಣೂರು ಗ್ರಾಮದಲ್ಲಿ 9 ಆಗಸ್ಟ್ 1909ರಲ್ಲಿ ಜನಿಸಿದರು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸಾಹಿತ್ಯ ಅಧ್ಯಯನ ಮಾಡಿ 1938ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಯಲಯದಿಂದ ಗೌರವಕ್ಕೆ ಪಾತ್ರರಾಗಿ ಮಹಾರಾಷ್ಟ್ರದ ಸಾಂಗ್ಲಿಯ ವೆಲ್ಲಿಂಗ್ಟನ್ ಕಾಲೇಜ್‌ಗೆ ಪ್ರಾಂಶುಪಾಲರಾಗುತ್ತಾರೆ.

80ರ ದಶಕದಲ್ಲಿ ಕರ್ನಾಟಕದ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಭಾಷೆಯಾಗಿ ಅಳವಡಿಸಬೇಕೆಂಬ ಶಿಫಾರಸ್ಸು ಮಾಡುವ ಸಮಿತಿಗೆ ಇವರು ಅಧ್ಯಕ್ಷರಾಗಿದ್ದರು. ಇದು ಮುಂದೆ ಗೋಕಾಕ್ ಚಳುವಳಿ ಎಂಬ ಬೃಹತ್ ಆಂದೋಲನಕ್ಕೆ ಪ್ರೇರಣೆಯಾಯಿತು. ಕನ್ನಡ ಚಿತ್ರರಂಗದ ಮೇರು ನಟ ಡಾ. ರಾಜಕುಮಾರ್ ಮತ್ತು ಬಹುತೇಕ ಅಂದಿನ ಎಲ್ಲಾ ನಟ ನಟಿಯರು, ವಾಟಾಳ್ ನಾಗರಾಜ್, ಸಾಹಿತಿಗಳು, ಕವಿಗಳು ಮತ್ತು ಅಸಂಖ್ಯಾತ ಕನ್ನಡಿಗರು ಈ ಚಳುವಳಿಗೆ ಕಳೆಯನ್ನು ಕಟ್ಟದರು.

1990–91ರಲ್ಲಿ ಭಾರತ ಸಿಂಧು ರಶ್ಮಿ ಎಂಬ ಗೋಕಾಕ್ ಅವರ ಕಾವ್ಯ ಕೃತಿಗೆ ದೇಶದ ಅತ್ಯುನ್ನತ ಜ್ಞಾನಪೀಠ ಪ್ರಶಸ್ತಿ ಲಭಿಸುತ್ತದೆ. ಲೇಖನಿಯ ಶಕ್ತಿ ಸಮಾಜದ ಭವಿಷ್ಯವನ್ನು ರೂಪಿಸಬಲ್ಲದ್ದು ಎಂದು ವಿನಾಯಕ ಕೃಷ್ಣ ಗೋಕಾಕ್ ಸಾಧಿಸಿ ಸಾಬೀತುಪಡಿಸಿದರು.

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ-ದೆಹಲಿ ತುಳು ಸಿರಿಯ 'ಆಟಿದ ಗೇನ' ಕಾರ್ಯಕ್ರಮ



ಬುದ್ಧಿವಂತರ ಜಿಲ್ಲೆ ಎಂದು ಹೆಸರಾದ ತುಳುನಾಡಿನಲ್ಲಿ ಭಾರತ ಸರಕಾರದ ಐಎಎಸ್, ಐಪಿಎಸ್ ಮುಂತಾದ ಹುದ್ದೆಗಳಲ್ಲಿ ತುಳುವರ ಸಾಧನೆ ಹೇಳಿಕೊಳ್ಳುವಂತಿಲ್ಲ. ಆ ನೆಲೆಯಲ್ಲಿ ತುಳುನಾಡಿನ ಇಂದಿನ ಯುವಪೀಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗಿ ಸರಕಾರದ ಉನ್ನತ ಹುದ್ದೆಗಳತ್ತ ಆಸಕ್ತಿ ಬೆಳೆಸುವಂತಾಗಬೇಕು ಎಂದು ಡೈಜಿವರ್ಲ್ಡ್ ಸಮೂಹದ ಸಂಸ್ಥಾಪಕ, ಆಡಳಿತ ನಿರ್ದೇಶಕ ವಾಲ್ಟರ್ ನಂದಳಿಕೆ ಹೇಳಿದರು.

ಅವರು ಇತ್ತೀಚೆಗೆ ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ದೆಹಲಿ ತುಳುಸಿರಿ ಆಯೋಜಿಸಿದ ಆಟಿದ ಗೇನ ಕಾರ್ಯಕ್ರಮವನ್ನು ಹಿಂಗಾರ ಅರಳಿಸಿ ಉದ್ಘಾಟಿಸಿ ಮಾತನಾಡಿದರು. ತುಳುನಾಡಿನ ಮಹನೀಯರು ಬ್ಯಾಂಕ್, ಶಿಕ್ಷಣ, ಹೋಟೆಲ್ ಉದ್ಯಮಗಳಲ್ಲಿ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದವರು. ಇಂದು ನಗರಜೀವನದಲ್ಲಿ ಬದುಕುತ್ತಿರುವ ನಮಗೆ ಹಿರಿಯರ ಜೀವನಕ್ರಮ ಆದರ್ಶವಾದುದು. ಹಿರಿಯರ ಪ್ರತಿಯೊಂದು ಆಚರಣೆಯಲ್ಲಿ ಸತ್ವವಿದೆ. ಬದುಕಿನ ನೆಲೆಯನ್ನು ಕಂಡುಕೊಂಡು ಹೊರನಾಡಿಗೆ, ವಿದೇಶಗಳಿಗೆ ವಲಸೆ ಹೋದ ತುಳುವರು ತಮ್ಮ ಮಣ್ಣಿನ ಮೂಲ ಸಂಸ್ಕೃತಿಯನ್ನು ಮರೆಯಲಾರರು. ಜಾತಿ, ಧರ್ಮವನ್ನು ಮೀರಿ ಭಾಷೆಯ ನೆಲೆಯಲ್ಲಿ ಒಂದಾಗುವವರು ತುಳುವರು ಎಂದು ಹೇಳಿದರು.

ತುಳುವರ ಆಟಿ ತಿಂಗಳ ಹಿನ್ನೆಲೆ, ಮಹತ್ವದ ಕುರಿತು ಮಾತನಾಡಿದ ಮುಖ್ಯ ಅತಿಥಿ ಕೇಂದ್ರಾಡಳಿತ ಪ್ರದೇಶ ಚಂಡೀಗಢ ಇಲ್ಲಿನ ಮುಖ್ಯ ಕಾರ್ಯದರ್ಶಿ ಹೆಚ್. ರಾಜೇಶ್ ಪ್ರಸಾದ್ ಐಎಎಸ್ ಅವರು ನಮ್ಮ ಹಿರಿಯರಿಗೆ ಆಟಿ ತಿಂಗಳು ಕಷ್ಟದ ತಿಂಗಳಲ್ಲ, ಅದು ಅವರ ಬದುಕಾಗಿತ್ತು. ಆ ಸಮಯದಲ್ಲಿ ಪ್ರಕೃತಿದತ್ತವಾದ ಔಷಧೀಯ ಹಿನ್ನೆಲೆಯುಳ್ಳ ಆಹಾರ ಪದಾರ್ಥಗಳನ್ನು ಸೇವಿಸಿ ಆರೋಗ್ಯವನ್ನು ಕಾಪಾಡಿಕೊಳ್ಳುತ್ತಿದ್ದುದು ವಿಶೇಷವಾದುದು. ಈ ಕಾರಣಕ್ಕಾಗಿಯೇ ಇಂದಿಗೂ ಆಟಿ ತಿಂಗಳು ಮಹತ್ವ ಪಡೆದಿವೆ ಎಂದರು.



ಭಾರತ ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿರುವ ತುಳುನಾಡಿನ ಹೆಮ್ಮೆಯ ಅಧಿಕಾರಿ ರಕ್ಷಣಾ ಸಚಿವಾಲಯ ಭಾರತ ಸರ್ಕಾರ ಜಂಟಿ ನಿಯಂತ್ರಕರಾದ ಡಾ. ಅಕ್ಷತಾ ಎ. ರಾವ್ ಐಡಿಎಎಸ್ ನಮ್ಮ ನೆಲದ ಸಂಸ್ಕೃತಿ, ಆಹಾರ ಪದ್ಧತಿ ವೈವಿಧ್ಯಮಯ ಹಾಗೂ ಸತ್ವಯುತವಾಗಿದೆ ಎಂಬುವುದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿ. ರಾಷ್ಟ್ರ ರಾಜಧಾನಿಯಲ್ಲಿ ತುಳುನಾಡಿನ ಮಣ್ಣಿನ ಕಂಪನ್ನು ಪಸರಿಸುತ್ತಿರುವ ದೆಹಲಿ ತುಳುಸಿರಿಯ ಕಾರ್ಯ ಅನುಕರಣೀಯ ಎಂದರು.



ಅಧ್ಯಕ್ಷತೆ ವಹಿಸಿ ಮಾತನಾಡಿದ ದೆಹಲಿ ತುಳುಸಿರಿ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ನಮ್ಮ ಹಿರಿಯರ ಬದುಕಿನ ಗುರುತನ್ನು ಯುವಪೀಳಿಗೆಗೆ ತೆರೆದಿಡುವ ಆಶಯವನ್ನು ಹೊತ್ತು ಈ ಕಾರ್ಯಕ್ರಮವನ್ನು ಕಳೆದ ಮೂರು ವರ್ಷಗಳಿಂದೀಚೆಗೆ ಆಯೋಜಿಸಲಾಗುತ್ತಿದೆ. ದಿಲ್ಲಿಯಲ್ಲೂ ನಮ್ಮ ಹಳ್ಳಿಯ ಸೊಗಡನ್ನು ಬಿತ್ತರಿಸುವಲ್ಲಿ ದೆಹಲಿ ತುಳುಸಿರಿ ನಿರಂತರವಾಗಿ ಶ್ರಮಿಸುತ್ತಿದೆ. ಕರ್ನಾಟಕ ರಾಜ್ಯ ಸರಕಾರವು ತುಳು ಭಾಷೆಯನ್ನು ಅಧಿಕೃತ ಭಾಷೆಯೆಂದು ಮಾನ್ಯತೆಗೊಳಿಸಬೇಕು. ತದನಂತರ ದೆಹಲಿಯಲ್ಲಿರುವ ಕರಾವಳಿಯ ಉನ್ನತ ಅಧಿಕಾರಿಗಳ, ಜನಪ್ರತಿನಿಧಿಗಳ ಜೊತೆಗೂಡಿ ತುಳುಭಾಷೆಯನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸುವ ಪ್ರಕ್ರಿಯೆಯ ಹೋರಾಟಕ್ಕೆ ಮರುಚಾಲನೆ ನೀಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳಿದರು.

**ಆಟಿಯ ಊಟದಲ್ಲಿ 38 ಬಗೆ!**

ತುಳುನಾಡಿನಲ್ಲಿ ಆಟಿ ತಿಂಗಳಲ್ಲಿ ವಿಶೇಷವಾಗಿ ತಯಾರಿಸುವ ಪತ್ರೊಡೆ, ಹಲಸಿನ ಗಟ್ಟಿ, ಕಣಿಲೆ ಹೆಸರುಕಾಳು ಗಸಿ, ಕೊಟ್ಟಿಗೆ, ಅರಸಿನ ಗಟ್ಟಿ, ತಿಮರೆ ಚಟ್ನಿ, ನೀರು ಮಾವಿನಕಾಯಿ ಚಟ್ನಿ, ಮೆಂತೆ ಗಂಜಿ ಹೀಗೆ 38 ಬಗೆಯ ಸವಿರುಚಿಯ ಖಾದ್ಯಗಳನ್ನು ದೆಹಲಿ ಹಾಗೂ ಎನ್‌ಸಿಆರ್ ತುಳುವರು ತಮ್ಮ ತಮ್ಮ ಮನೆಯಲ್ಲಿಯೇ ತಯಾರಿಸಿ ಸುಮಾರು 250 ಜನರಿಗೆ ಉಣಬಡಿಸಿದರು.

ವೇದಿಕೆಯನ್ನು ಹಸಿರು ತೋರಣದ ಸಾಂಪ್ರದಾಯಿಕ ಶೈಲಿಯಲ್ಲಿ ಸಿಂಗರಿಸಲಾಗಿತ್ತು. ತುಳುನಾಡಿನ ಸಾಂಪ್ರದಾಯಿಕ ಜನಜೀವನದ ಹಿರಿಮೆಯನ್ನು ನೆನಪಿಸುವ ಹಳೆಯ ಪರಿಕರಗಳ ಪ್ರದರ್ಶನ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿತ್ತು. ಗಣ್ಯರಿಗೆ ವೀಳ್ಯದೆಲೆ, ಅಡಿಕೆ ನೀಡಿ ಸ್ವಾಗತಿಸಲಾಯಿತು. ಕು. ವೈಷ್ಣವಿ ತುಳು ಜನಪದ ನೃತ್ಯವನ್ನು, ಮೋಹನ್‌ದಾಸ್, ಮೆಲ್ವಿನ್ ಜಿ. ಲೋಬೊ ಮತ್ತು ಬಳಗ ತುಳು ಜನಪದ ಗೀತೆಗಳನ್ನು ಪ್ರಸ್ತುತಪಡಿಸಿದರು. ಮಕ್ಕಳಿಗೆ, ಮಹಿಳೆಯರಿಗೆ, ಪುರುಷರಿಗೆ ಮೂರು ವಿಭಾಗಗಳಲ್ಲಿ ಕರಾವಳಿಯ ಜನಪದ ಕ್ರೀಡೆಗಳನ್ನು ಆಯೋಜಿಸಲಾಗಿತ್ತು.

ದೆಹಲಿ, ನೊಯ್ಡಾ, ಗುರುಗಾಂವ್‌ನ ತುಳುವರು ಹಾಗೂ ಗಣ್ಯರು ಉಪಸ್ಥಿತರಿದ್ದರು. ದೆಹಲಿ ತುಳುಸಿರಿಯ ಕಾರ್ಯದರ್ಶಿ ಅರವಿಂದ ಬಿಜೈ ಸ್ವಾಗತಿಸಿದರು. ಜೊತೆ ಕಾರ್ಯದರ್ಶಿ ಕೃಷ್ಣರಾಜ್ ವಂದಿಸಿದರು. ಖಜಾಂಚಿ ನಾಗರಾಜ್ ಎಂ. ಅತಿಥಿ ಪರಿಚಯಗೈದರು. ಜೊತೆ ಕಾರ್ಯದರ್ಶಿ ಪ್ರಕಾಶ್ ಶೆಟ್ಟಿ ಉಳೆಪಾಡಿ, ಸದಸ್ಯೆ ಶ್ರೀಮತಿ ಅಶ್ವಿತಾ ಮಿಥೇಶ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಹರ್ಷಿತಾ ಕುಶಾಲಪ್ಪ, ರವಿ ಮೂಡಬಿದಿರೆ ಕಾರ್ಯಕ್ರಮ ನಿರ್ವಹಿಸಿದರು. ❑

**ಅರವಿಂದ ಬಿಜೈ**

# ಜನಕಪುರಿ ಕನ್ನಡ ಕೂಟದ ಸುವರ್ಣ ಮಹೋತ್ಸವ ಅಂಗವಾಗಿ ಉಪನ್ಯಾಸ ಕಾರ್ಯಕ್ರಮ




ಜನಕಪುರಿ ಕನ್ನಡ ಕೂಟದ ಸುವರ್ಣ ಮಹೋತ್ಸವದ ಶುಭ ಆರಂಭವನ್ನು ಆಧುನಿಕ ಬದುಕಿಗೆ ಪ್ರಾಚೀನ ಜ್ಞಾನದ ದಾರಿದೀಪ : ಆಹಾರದ ವಿಶೇಷ ಎಂಬ ವಿಷಯ ಕುರಿತ ಉಪನ್ಯಾಸವನ್ನು ಜನಕಪುರಿ ಕನ್ನಡ ಕೂಟ ಹಾಗು ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿತ್ತು.

ಉಪನ್ಯಾಸ ಕಾರ್ಯಕ್ರಮವು ಇದೇ ಆಗಸ್ಟ್ 1 ನೇ ತಾರೀಖು ಶನಿವಾರ ಸಂಜೆ 4:30ಗಂಟೆಗೆ ದೆಹಲಿ ಕರ್ನಾಟಕ ಸಂಘದ ವಿಚಾರ ಸಭಾಂಗಣದಲ್ಲಿ ಜರುಗಿತು. ಕಾರ್ಯಕ್ರಮವು ಜನಕಪುರಿ ಕನ್ನಡ ಕೂಟದ ಕಾರ್ಯದರ್ಶಿಗಳಾದ ಡಾ. ಬಸವರಾಜರವರು ಸ್ವಾಗತ ಭಾಷಣದೊಂದಿಗೆ ಆರಂಭವಾಯಿತು. ನಂತರ ಮುಖ್ಯ ಅತಿಥಿಗಳಾದಂತಹ ಮುರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗಾ ಸಂಸ್ಥೆಯ (ಆಯುಷ್ ಮಂತ್ರಾಲಯದ) ನಿರ್ದೇಶಕರಾದ ಡಾ. ಕಾಶೀನಾಥ್ ಸಮಗಂಡಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್., ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಡಾ. ಈಟಿ ಅಶೋಕ್, ಕಾರ್ಯದರ್ಶಿ ಡಾ. ಬಸವರಾಜ, ಉಪಾಧ್ಯಕ್ಷ ಡಾ. ಎಸ್.ಎಲ್. ಭಂಡಾರ್‌ಕರರವರು ದೀಪ ಪ್ರಜ್ವಲಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಡಾ. ರೂಪಶ್ರೀ, ಲಾವಣ್ಯ ಬಸವರಾಜ್, ಜಯಶ್ರೀ ಬಸವರಾಜ್ ಹಾಗೂ ಸುನಿತಾ ಅವರುಗಳು

**ಓಂ ನಮಾಮಿ ಧನ್ವಂತರಿ ಆದಿ ದೇವಂ ॥**
**ಸುರಾಸುರೈವಂದಿತ ಪಾದಪದ್ಮಂ ॥ ಲೋಕೆ**
**ಜರಾರುಕ್, ಭಯಮೃತ್ಯುನಾಶಂ ॥**
**ದಾತಾರ ಮೀಶಾಂ ವಿವಿದೌಷದೀನಾಂ ॥**

ಎಂಬ ಸಾಂದರ್ಭಿಕ ಧನ್ವಂತರಿ ಮಂತ್ರವನ್ನು ಹಾಡಿದರು. ಪ್ರಾಸ್ತಾವಿಕ ನುಡಿಯನ್ನು ಜನಕಪುರಿ ಕನ್ನಡ ಕೂಟದ ಅಧ್ಯಕ್ಷರು ಹಾಗೂ ಸ್ವತಃ ಆಯುರ್ವೇದದ ವೈದ್ಯರಾದಂತಹ ಡಾ. ಅಶೋಕ ಈಟಿಯವರು "ಜೀವನಶೈಲಿಯನ್ನು ಹೇಗೆ ಏಕೆ ಸುಧಾರಣೆ ಮಾಡಿಕೊಳ್ಳಬೇಕು. ಸಾಂಪ್ರದಾಯಿಕ ಶೈಲಿಯು ಜೀವನದ ಸದ್ಗುಣಗಳು, ಆಧುನಿಕ ಜೀವನದ ಶೈಲಿಯಲ್ಲಿ ಹೇಗೆ ಪ್ರಭಾವ ಬೀರುತ್ತದೆ. ನಮ್ಮ ಶಾಸ್ತ್ರ ಸಂಪ್ರದಾಯಗಳು ವೈದ್ಯಕೀಯವಾಗಿ ಚಿಕಿತ್ಸೆಮಾದರಿಯಲ್ಲಿ ಹೇಗೆ ಕೆಲಸ ಮಾಡುತ್ತವೆ ಎಂಬುದರ ಸಂಕ್ಷಿಪ್ತ ಮಾಹಿತಿಯನ್ನು ಹಲವಾರು ಉದಾಹರಣೆ ಕೊಡುವುದರ ಮೂಲಕ ವಿವರಿಸಿದರು. ನಂತರ ಮುಖ್ಯ ಅತಿಥಿಗಳಾದಂತಹ ಡಾ. ಕಾಶೀನಾಥ್ ಸಮಗಂಡಿ ಅವರ ಪರಿಚಯವನ್ನು ಜನಕಪುರಿ ಕನ್ನಡ ಕೂಟದ ಉಪಾಧ್ಯಕ್ಷರಾದ ಡಾ. ಎಸ್.ಎಲ್. ಭಂಡಾರ್‌ಕರ ಅವರು ಮಾಡಿಕೊಟ್ಟರು.

ಶ್ರೀ ಕಾಶೀನಾಥ ಸಮಗಂಡಿ ಅವರು ತಮ್ಮ ಉಪನ್ಯಾಸದಲ್ಲಿ ನೆರೆದಿದ್ದ ಸಭಿಕರೆಲ್ಲರಿಗೂ ಬಹಳ ಮಹತ್ತರವಾದ ಆರೋಗ್ಯಕರ ಜೀವನ ಸಾಗಿಸುವ ಕುರಿತು ಉಪಯುಕ್ತ ಮಾಹಿತಿ ನೀಡುತ್ತ ನಮ್ಮೆಲ್ಲರ ಗಮನ ಕೇಂದ್ರೀಕರಿಸಿದರು. ಸತತವಾಗಿ ಒಂದೂವರೆ ಗಂಟೆಗಳ ಕಾಲ ನಿರರ್ಗಳವಾಗಿ ಉಪನ್ಯಾಸ ನೀಡಿದರು. ಉಪನ್ಯಾಸದ ಕೆಲವು ಮುಖ್ಯಾಂಶಗಳನ್ನು ಇಲ್ಲಿ ನಾನು ಉಲ್ಲೇಖಿಸುತ್ತಿದ್ದೇನೆ.

"ಆಧುನಿಕ ಜೀವನದಲ್ಲಿ ಉಂಟಾಗುವ ಎಲ್ಲಾ ಅನಾರೋಗ್ಯಕ್ಕೆ ಆಯುರ್ವೇದದಲ್ಲಿ ಮದ್ದು ಇದೆ. ವಿಶ್ವ ಆರೋಗ್ಯ ಸಂಸ್ಥೆ (WHO) ಸಮೀಕ್ಷೆ ಪ್ರಕಾರ ಆಧುನಿಕ ಜೀವನದಲ್ಲಿ ಉಂಟಾಗುತ್ತಿರುವ ಯಾವುದೇ ಸಾಂಕ್ರಾಮಿಕ ರೋಗಕ್ಕೆ ಕಾರಣ ಬ್ಯಾಕ್ಟೀರಿಯಾಗಳಾಗಿದ್ದವು ಎಂಬುದನ್ನು ಇತ್ತೀಚಿನ ಸಂಶೋಧನೆ ಅಲ್ಲಗಳೆದಿದೆ. ಕಳೆದ 10 ವರ್ಷಗಳ ಸಮೀಕ್ಷೆಯ ಪ್ರಕಾರ ನಮ್ಮ ಜೀವನ ಶೈಲಿಯೇ ಇತ್ತೀಚಿನ ಸಾಂಕ್ರಾಮಿಕ ರೋಗಕ್ಕೆ ಕಾರಣ ಎಂದು ತಿಳಿಸಿದೆ. ನಮ್ಮ ದಿನನಿತ್ಯದ ಆಹಾರ ನಿಯಂತ್ರಣದಿಂದ ನಾವು ಕನಿಷ್ಠ 36 ರೋಗಗಳಿಂದ ಮುಕ್ತರಾಗಬಹುದು. ಆಹಾರವನ್ನು ಸಮ ಪ್ರಮಾಣದಲ್ಲಿ ಸರಿಯಾದ ಸಮಯಕ್ಕೆ ತೆಗೆದುಕೊಳ್ಳುವುದರಿಂದ ಆರೋಗ್ಯಕರ ಜೀವನವನ್ನು ನಡೆಸಬಹುದು, ಪ್ರತಿನಿತ್ಯ ದೇಹದ ಅಭ್ಯಂಜನ (ಮಸಾಜ್) ಮಾಡುವುದರಿಂದ ದೇಹವು ಲವಲವಿಕೆ ಕ್ರಿಯಾಶೀಲವಾಗಿರುವುದು ಜೊತೆಗೆ ಆರೋಗ್ಯವಾಗಿರುತ್ತದೆ. ಈ ರೀತಿ ಅಭ್ಯಂಜನ ಪ್ರತಿನಿತ್ಯಮಾಡಲು ಕಷ್ಟವಾದಲ್ಲಿ ಕನಿಷ್ಟ ಶಿರ, ಶ್ರವಣ, ಪಾದವನ್ನಾದರೂ ಪ್ರತಿನಿತ್ಯ ಮಸಾಜ್ ಮಾಡುವುದರಿಂದ ನಾವು ಆರೋಗ್ಯದಿಂದ ಇರಬಹುದು" ಎಂಬ ಕಿವಿ ಮಾತನ್ನು ತಿಳಿಸಿದರು. Early to bed early to rise makes a person healthy wealthy and wise ಪ್ರಾತಃಕಾಲದಲ್ಲಿ ಏಳುವುದು ರಾತ್ರಿ ಬೇಗ ಮಲಗುವುದು ಒಬ್ಬ ಆರೋಗ್ಯಕರ ವ್ಯಕ್ತಿಯ ಗುಣಲಕ್ಷಣಗಳಾಗಿರುತ್ತದೆ. ಇದರಿಂದಾಗಿ ದೇಹದ ಜೀರ್ಣಶಕ್ತಿ, ಪಚನ ಕ್ರಿಯೆ ಸ್ವಾಭಾವಿಕವಾಗಿರುತ್ತದೆ. ಯಾವ ವ್ಯಕ್ತಿ ಎಲ್ಲಾ ಸ್ವಾಭಾವಿಕ ಕ್ರಿಯೆಗೆ ಶ್ರಮ ಪಡಬೇಕಾಗುತ್ತದೊ ಅದು ಅನಾರೋಗ್ಯವುಂಟಾಗಲು ಕಾರಣವಾಗುತ್ತದೆ.

ಉದ್ಗಾರ ಶುದ್ಧಿ ಅಥವಾ ಶುದ್ಧತೇಗು, ಸ್ವಾಭಾವಿಕವಾಗಿ ಉಂಟಾಗುವ ಹಸಿವು, ಮಲಮೂತ್ರ ವಿಸರ್ಜನೆ, ಬಾಯಾರಿಕೆ, ಹಗುರವಾದ ದೇಹ ಅನುಭವ ಮತ್ತು ಉತ್ಸಾಹ ಈ ಆರು ಉತ್ತಮ ಜೀರ್ಣ ಲಕ್ಷಣಗಳು. ಈ ಆರು ಲಕ್ಷಣಗಳು ಯಾವುದೇ ಮನುಷ್ಯನಲ್ಲಿ ಕಂಡು ಬಂದಲ್ಲಿ ಮುಂದಿನ ಊಟ ಸೇವಿಸಲು ಅವನ ದೇಹ ಸಿದ್ಧವಾಗಿದೆ ಎಂದರ್ಥ. ಹಾಗೆಯೇ ಹಸಿವಾದಾಗ ಆಹಾರ ಸೇವನೆ ಮಾಡಬೇಕು , ರಾತ್ರಿ, ಮಧ್ಯರಾತ್ರಿಯಲ್ಲಿಯೂ ತಿಂದರೆ ತಪ್ಪಿಲ್ಲ. ಹಸಿವಾಗುವುದು ಮುಖ್ಯ ಎಂಬ ಹೊಸ ವಿಚಾರ ತಿಳಿಸಿದರು. ಊಟದ ಮೊದಲು ಯಾವ ಹಣ್ಣು ಹಸಿ ತರಕಾರಿ ತಿನ್ನಬೇಕು, ಊಟದ ನಂತರ ಯಾವ ಹಣ್ಣು ಹಸಿ ತರಕಾರಿ ತಿನ್ನಬೇಕು, ಊಟದ ಮೊದಲು, ಊಟದ ಮಧ್ಯೆ, ಊಟದ ನಂತರ ನೀರು ಕುಡಿಯಬೇಕೆ ಬೇಡವೇ ಎನ್ನುವುದರ ಮಾಹಿತಿಯನ್ನು ಸುದೀರ್ಘ ಚರ್ಚೆಯ ಮೂಲಕ ತಿಳಿಸಿದರು.

ಆಧುನಿಕ ಬದುಕಿನ ಬವಣೆಗೆ ಪ್ರಾಚೀನ ಜ್ಞಾನದಲ್ಲಿ ಪ್ರತಿ ಹಂತದಲ್ಲಿ, ಪ್ರತಿ ವಯಸ್ಸಿನವರಿಗೆ ದಾರಿ ದೀಪವಾದಂತಹ ಸಿದ್ದೌಷಧಿಯನ್ನು ಕಾಣಬಹುದು ಎಂದು ಹೇಳುವುದರ ಮೂಲಕ ತಮ್ಮ ಉಪನ್ಯಾಸವನ್ನು ಕೊನೆಗೊಳಿಸಿದರು.

ಅತ್ಯಂತ ಪ್ರತಿಭಾವಂತ, ವಾಗ್ಮಿ, ವಾಕ್ಚಾತುರ್ಯತೆಯುಳ್ಳ, ಸ್ಪಷ್ಟವಾಗಿ, ಸ್ಫುಟವಾಗಿ ಮಾತನಾಡಿದ ಡಾ. ಕಾಶೀನಾಥ್ ಸಮಗಂಡಿಯವರಿಗೆ

ಅನಂತಾನಂತ ಧನ್ಯವಾದಗಳು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ರೇಣುಕುಮಾರ್ ಅವರು ಅಧ್ಯಕ್ಷ ಭಾಷಣ ಮಾಡುತ್ತಾ ಸಾಧಕರ ಸಾಧನೆಯನ್ನು ಶ್ಲಾಘಿಸಿದರು. "ಸಾಧಕರು ನೈಜವಾಗಿರಬೇಕು. ಜನಸಾಮಾನ್ಯರಿಗೆ ಒಳಿತಾಗುವಂತೆ ಪ್ರೇರಣಾದಾಯಕರಾಗಿರಬೇಕು. ಸಾಧಕರ ಸಾಧನೆ ಒಗಟಾಗಿರಬಾರದು ಅನುಸರಿಸಲು ಯೋಗ್ಯವಾಗಿದ್ದು ಮಾರ್ಗದರ್ಶಕರಾಗಿರಬೇಕು". ಎಂದು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಜನಕಪುರಿ ಕನ್ನಡ ಕೂಟದ ವತಿಯಿಂದ ಸ್ಮರಣಿಕೆ, ಹೂ ಗುಚ್ಛ ಹಾಗೂ ಔಷಧಿ ಸಸಿ ನೀಡುವುದರ ಮೂಲಕ ಗೌರವ ಸಮರ್ಪಣೆಯನ್ನು ಮಾಡಿದರು.

ಜನಕಪುರಿ ಕನ್ನಡ ಕೂಟದ ಅಧ್ಯಕ್ಷರು ಡಾ. ಈಟಿ ಅಶೋಕ, ಕಾರ್ಯದರ್ಶಿಗಳಾದ ಡಾ. ಬಸವರಾಜ ಅವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ರೇಣುಕುಮಾರ್ ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರಿಗೆ ಹೂ ಗುಚ್ಛಗಳನ್ನು ಹಾಗು ಔಷಧಿ ಸಸಿಗಳನ್ನು ನೀಡುವುದರ ಮೂಲಕ ಗೌರವಿಸಿದರು.




ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಕೃಷ್ಣರಾಜ ಅವರು ನಿರ್ವಹಿಸಿದರು. ವಂದನಾರ್ಪಣೆಯನ್ನು ಶ್ರೀಮತಿ ಜಯಶ್ರೀ ಬಸವರಾಜ್ ಅವರು ನಡೆಸಿಕೊಟ್ಟರು. ❑

***ಡಾ. ಬಸವರಾಜ***
ಕಾರ್ಯದರ್ಶಿ, ಜನಕಪುರಿ ಕನ್ನಡ ಕೂಟ

## ದೆಹಲಿಯಲ್ಲಿ ಆಟಿ ಅಮಾವಾಸ್ಯೆ ಆಚರಣೆ: ತುಳುವರಿಂದ ಕಷಾಯ ಹಾಗೂ ಮೆಂತ್ಯ ಗಂಜಿ ವಿತರಣೆ




ನವದೆಹಲಿ ಅಗಸ್ಟ್ 12, 2026: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನೆಲೆಸಿರುವ ತುಳುನಾಡಿಗರು 'ಆಟಿ ಅಮಾವಾಸ್ಯೆ'ಯ ವಿಶೇಷ ಕಾರ್ಯಕ್ರಮವನ್ನು ಅತ್ಯಂತ ಶ್ರದ್ಧೆ ಹಾಗೂ ಸಂಭ್ರಮದಿಂದ ಆಚರಿಸಿದರು. ಕಳೆದ ಐದು ವರ್ಷಗಳಿಂದ ನಿರಂತರವಾಗಿ ಪ್ರಕಾಶ್ ಶೆಟ್ಟಿ ಉಳೆಪಾಡಿ ಹಾಗೂ ಉಸ್ಮಾನ್ ಅಬ್ದುಲ್ ಷರೀಫ್ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮವು ಯಶಸ್ವಿಯಾಗಿ ಆಯೋಜನೆಗೊಳ್ಳುತ್ತಾ ಬಂದಿದೆ.

ಕರಾವಳಿಯ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯ ಸಂಕೇತವಾದ ಆಟಿ ಅಮಾವಾಸ್ಯೆಯ ಅಂಗವಾಗಿ ಆಯೋಜಿಸಲಾಗಿದ್ದ ಈ ಕೂಟದಲ್ಲಿ ಸುಮಾರು 150ಕ್ಕೂ ಹೆಚ್ಚು ತುಳು-ಕನ್ನಡಿಗರು ಹಾಗೂ ಉತ್ತರ ಭಾರತೀಯರು ಉತ್ಸಾಹದಿಂದ ಭಾಗವಹಿಸಿದ್ದರು. ಆಗಮಿಸಿದ ಎಲ್ಲಾ ಬಂಧು-ಮಿತ್ರರಿಗೆ ಸಾಂಪ್ರದಾಯಿಕ ಆಟಿ ಕಷಾಯ ಹಾಗೂ ಆರೋಗ್ಯವರ್ಧಕ ಮೆಂತ್ಯ ಗಂಜಿಯನ್ನು ಉಚಿತವಾಗಿ ವಿತರಿಸಲಾಯಿತು.

ಆಟಿ ಅಮಾವಾಸ್ಯೆಯಂದು ಸೇವಿಸುವ ಈ ವಿಶೇಷ ಕಷಾಯವು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದರಿಂದ, ನೆರೆದವರೆಲ್ಲರೂ ಇದನ್ನು ಸ್ವೀಕರಿಸಿ ಶುಭ ಹಾರೈಸಿದರು.

ಕಾರ್ಯಕ್ರಮದ ಮಾರ್ಗದರ್ಶಕರಾದ ಡಾ. ನಿರಂಜನ್ ನಾಯಕ್, ಉಪಾಧ್ಯಕ್ಷರು-ಸರ್ಜಿಕಲ್ ಆಂಕಾಲಜಿ, ಪಾರಸ್ ಹೆಲ್ತ್ ಆಸ್ಪತ್ರೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಆಟಿ ಕಷಾಯದ ವೈಜ್ಞಾನಿಕ ಹಿನ್ನೆಲೆ, ಔಷಧೀಯ ಗುಣಗಳು ಹಾಗೂ ಆಧುನಿಕ ವೈದ್ಯಕೀಯ ಕ್ಷೇತ್ರದಲ್ಲಿ ಇದರ ಪ್ರಾಮುಖ್ಯತೆಯನ್ನು ಸಭಿಕರಿಗೆ ವಿವರವಾಗಿ ತಿಳಿಸಿಕೊಟ್ಟರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ರೇಣುಕುಮಾರ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ತುಳುನಾಡಿನ ಇಂತಹ ಕಾರ್ಯಕ್ರಮವನ್ನು ದೆಹಲಿಯಲ್ಲಿಯೂ ಪಸರಿಸಿರುವುದು ಶ್ಲಾಘನೀಯ ಕರ್ನಾಟಕದಾದ್ಯಂತ ಇರುವ ಇಂತಹ ವಿವಿಧ ಸಂಸ್ಕೃತಿ ಆಚಾರ ವಿಚಾರಗಳನ್ನು ದೆಹಲಿಯಲ್ಲಿ ಆಯೋಜಿಸಲು ಸಂಘ ಸದಾ ಸನ್ನದ್ಧವಾಗಿದೆ ಎಂದು ಆಯೋಜಕರನ್ನು ಹುರಿದುಂಬಿಸಿದರು.

ಉಲ್ಲೇಖನೀಯ ಸಂಗತಿಯೆಂದರೆ, ಕಳೆದ ಬಾರಿ "ಆಧುನಿಕ ವೈದ್ಯಕೀಯ ಕ್ಷೇತ್ರದಲ್ಲಿ ಪಾಲೆದ ಕಷಾಯದ ವೈಜ್ಞಾನಿಕ ಉಪಯೋಗಗಳು" ಎಂಬ ವಿಷಯದ ಮೇಲೆ ವಿವಿಧ ಕ್ಷೇತ್ರದ ದೇಶದ ಅತ್ಯುನ್ನತ ನುರಿತ ತಜ್ಞ ವೈದ್ಯರೊಂದಿಗೆ ರಾಷ್ಟ್ರೀಯ ಸಂವಾದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದ ಹೆಗ್ಗಳಿಕೆ ಈ ದೆಹಲಿಯ ತಂಡಕ್ಕಿದೆ.

ಕಾರ್ಯಕ್ರಮದ ಯಶಸ್ಸಿನ ಹಿಂದೆ ಸ್ವಯಂಸೇವಕರ ಶ್ರಮ ಅನನ್ಯವಾಗಿತ್ತು. ಮುಂಜಾನೆ 3:30ಕ್ಕೇ ಎದ್ದು ನಿಸ್ವಾರ್ಥ ಸೇವೆಯಲ್ಲಿ ತೊಡಗಿಸಿಕೊಂಡ ಸ್ವಯಂ ಸೇವಕರಾದ ಹರ್ಷಿತಾ ಕುಶಾಲಪ್ಪ, ಮೋಹನ್‌ದಾಸ್ ಮತ್ತು ಸತ್ಯನಾರಾಯಣ ಅವರ ಸೇವೆಯನ್ನು ಮುಕ್ತಕಂಠದಿಂದ ಶ್ಲಾಘಿಸಲಾಯಿತು. ಪಾಲೆ ಮರದ ತೊಗಟೆ ತರುವುದರ ಜೊತೆಗೆ ಕಷಾಯ ಮತ್ತು ಗಂಜಿ ತಯಾರಿಯಲ್ಲಿ ನೆರವಾದ ಪ್ರತಿಯೊಬ್ಬರಿಗೂ ಕೃತಜ್ಞತೆಗಳನ್ನು ಸಲ್ಲಿಸಲಾಯಿತು.

ನಮ್ಮ ನಾಡಿನ ಆಚಾರ-ವಿಚಾರ ಮತ್ತು ಕಷಾಯದ ಸಾಂಪ್ರದಾಯಿಕ ಮಹತ್ವವನ್ನು ಅರಿತು ಪ್ರೀತಿಯಿಂದ ಭಾಗವಹಿಸಿದ ಎಲ್ಲಾ ಬಾಂಧವರ ಸಹಕಾರವು ಎಂದೆಂದಿಗೂ ಹೀಗೆಯೇ ಮುಂದುವರಿಯಲಿ ಎಂದು ಸಂಘಟಕರು ಆಶಿಸಿದ್ದಾರೆ. ❑

***ಪ್ರಕಾಶ್ ಶೆಟ್ಟಿ ಉಳೆಪಾಡಿ***

# ಸ್ವಾತಂತ್ರ್ಯ ಎಂದರೆ–ಕೇವಲ ಇತಿಹಾಸದ ಪುಟಗಳಲ್ಲಿ ಅವಿಸ್ಮರಣೀಯವಾಗಿರುವುದಷ್ಟೇ ಅಲ್ಲ

**'ಸ್ವಾತಂತ್ರ್ಯ ಎಂದರೆ ನಿಮಗೆ ಏನು?' "ಅಭಿಮತ"ವು ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಓದುಗರಿಂದ ಲೇಖನಗಳನ್ನು ಆಹ್ವಾನಿಸಿತ್ತು. ಪ್ರತಿಕ್ರಿಯೆಯಾಗಿ ಬಂದ ಲೇಖನಗಳು ಅಭಿಮತ ಓದುಗರಿಗಾಗಿ....**

ಸ್ವಾತಂತ್ರ್ಯ ಎಂದರೆ ಕೇವಲ ಆಗಸ್ಟ್ 15ರಂದು ಧ್ವಜಾರೋಹಣ ಮಾಡುವುದು, ರಾಷ್ಟ್ರಗೀತೆ ಹಾಡುವುದು ಅಥವಾ ಇತಿಹಾಸದ ಪುಸ್ತಕಗಳಲ್ಲಿ ಬರೆದಿರುವ ಘಟನೆಗಳನ್ನು ನೆನಪಿಸಿಕೊಳ್ಳುವುದು ಮಾತ್ರವಲ್ಲ. ಅದು ನಮ್ಮ ರಕ್ತದಲ್ಲಿ, ನಮ್ಮ ಉಸಿರಿನಲ್ಲಿ, ನಮ್ಮ ಪ್ರತಿದಿನದ ನಡವಳಿಕೆಯಲ್ಲಿ ಜೀವಂತವಾಗಿರಬೇಕು. ಸ್ವತಂತ್ರ ಭಾರತದಲ್ಲಿ ನಾವೆಲ್ಲರೂ ಯಾವುದೇ ರೀತಿಯ ಚಿಂತೆಯಿಲ್ಲದೆ ಆರಾಮವಾಗಿ ಉಸಿರಾಡಲು, ಮನಸಿಗೆ ಬಂದದ್ದನ್ನು ಮಾಡಲು ಕಾರಣ ದೇಶಾದ್ಯಂತ ಲಕ್ಷಾನುಗಟ್ಟಲೇ ಜನರು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ, ಅದೆಷ್ಟೋ ವರ್ಷಗಳ ಕಾಲ ಸ್ವಾತಂತ್ರ್ಯಕ್ಕಾಗಿ ನಡೆಸಿದ ಸತತ ಹೋರಾಟ. ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯನ್ನು ಕೊನೆಗೊಳಿಸುವ ಅಹಿಂಸಾ ಸಂಗ್ರಾಮ.

ಆ ಹೋರಾಟದಲ್ಲಿ ಅಸಂಖ್ಯಾತ ಜನರು ತಮ್ಮ ಜೀವವನ್ನೇ ಅರ್ಪಿಸಿದರು. ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ನಡೆದ ಸತ್ಯಾಗ್ರಹ, ಅಸಹಕಾರ ಚಳುವಳಿ ಮತ್ತು ಕ್ವಿಟ್ ಇಂಡಿಯಾ ಚಳುವಳಿಗಳು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟವು. ಆ ತ್ಯಾಗವನ್ನು ನಾವು ಎಂದಿಗೂ ಮರೆಯಬಾರದು. ಆ ಎಲ್ಲಾ ಸ್ವಾತಂತ್ರ್ಯ ಯೋಧರಿಗೆ ಶತ ಶತ ನಮನಗಳು.

ನನ್ನ ಮಾವನವರಾದ ದಿ. ಶ್ರೀ ಗುರುರಾವ್ ರಂಗರಾವ್ ಇನಾಮದಾರರು ಸಹ ಈ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ಅವರ ತಾಯಿ ತಮ್ಮ ಹಿರಿಯ ಮಗನ ಜೊತೆಗೆ ಪ್ರೌಢಶಾಲಾ ಶಿಕ್ಷಣಕ್ಕಾಗಿ ಇವರನ್ನೂ ಸಹ ವಿಜಯಾಪುರ ಜಿಲ್ಲೆಯ ನಮ್ಮ ಹಳ್ಳಿ ಗೋಣಸಿಗಿಯ ಸಮೀಪವಿರುವ ಅಥಣಿ ಎಂಬ ಸಣ್ಣ ಪಟ್ಟಣಕ್ಕೆ ಕಳಿಸಿದ್ದರು. ಸ್ವಾತಂತ್ರ್ಯ ಚಳುವಳಿ ಪ್ರಾರಂಭವಾದಾಗ ನಮ್ಮ ಮಾವನವರ ವಯಸ್ಸು ಕೇವಲ 10 ವರ್ಷ.

ಒಂದು ದಿನ ಸಂಜೆ ಕೆಲವು ಸ್ವಾತಂತ್ರ್ಯ ಚಳುವಳಿಯ ನಾಯಕರಿಂದ ಹತ್ತಿರದ ಬಯಲು ಪ್ರದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯ ಸಭೆ ನಡೆಸುವವರಿದ್ದಾರೆ ಎಂದು ಈ ಇನಾಮದಾರ ಬಂಧುಗಳಿಗೆ ಗೊತ್ತಾಯಿತು. ಯಾವ ಹೆದರಿಕೆ ಅಥವಾ





ಹಿಂಜರಿಕೆ ಇಲ್ಲದೆ ತಮ್ಮ ಅಣ್ಣನ ಜೊತೆ ಅವರೂ ಸಹ ಭಾಗವಹಿಸಲು ಒಂದು ನಿಗದಿತ ಸ್ಥಳಕ್ಕೆ ಹೋದರು. ಸಭೆಯ ನಡುವೆ ಪೊಲೀಸ್ ಪಡೆ ನುಗ್ಗಿತು. ಲಾಠಿ ಚಾರ್ಜ್ ಮಾಡಲಾಯಿತು. ಅಲ್ಲಿಂದ ತಪ್ಪಿಸಿಕೊಂಡು ಪರಾರಿಯಾಗುವ ಮೊದಲ ಅಲ್ಲಿದ್ದವರನ್ನೆಲ್ಲ ಹಿಡಿದು ಹಿಂದೆ ಮುಂದೆ ನೋಡದೆ, ಪ್ರಾಣಿಗಳ ಹಾಗೆ ಪೋಲಿಸ್ ಗಾಡಿಗಳಲ್ಲಿ ತುಂಬಿಕೊಂಡು ಬೆಳಗಾವಿಯ ಹಿಂಡಲ್ಗಾ ಕೇಂದ್ರ ಕಾರಾಗೃಹದಲ್ಲಿ ಸೆರೆ ಹಾಕಿದರು. ಅಲ್ಲಿ 6 ತಿಂಗಳ ವರೆಗೆ ಬಂಧನದಲ್ಲಿ ಇದ್ದರು. ನಂತರ ಅಲ್ಲಿಂದ ಪುಣೆಯ ಯೆರವಡಾ ಜೈಲಿಗೆ ಸ್ಥಳಾಂತರಿಸಲಾಯಿತು. ಅಲ್ಲಿ 8 ತಿಂಗಳ ಕಾಲ ಅವರನ್ನು ಇಟ್ಟಿದ್ದರಂತೆ.

ಬಳಿಕ ಅಣ್ಣಾ–ತಮ್ಮ ಅಥಣಿಗೆ ಬಂದು ವಿದ್ಯಾಭ್ಯಾಸ ಮುಂದುವರೆಸಿ, ನಂತರ ಧಾರವಾಡದ ಕರ್ನಾಟಕ ಕಾಲೇಜಿನಿಗೆ MSc ಮುಗಿಸಿ, ಭಾರತ ಸರಕಾರದ ಉದ್ಯೋಗ ಸಚಿವಾಲಯದಲ್ಲಿ ಮುಖ್ಯ ಸಲಹೆಗಾರಾಗಿ (Chief Industrial Advisor) ದೆಹಲಿಯಲ್ಲಿ ಅನೇಕ ವರ್ಷಗಳ ಕಾಲ ಕಾರ್ಯ ನಿರ್ವಹಿಸಿ ನಿವೃತ್ತರಾದರು. ಈ ನಡುವೆ ದೆಹಲಿ ಕರ್ನಾಟಕ ಸಂಘದ ಏಳಿಗೆಗೆ ಎಲೆಮರೆಯ ಕಾಯಿಯಂತೆ ಅನೇಕ ವರ್ಷಗಳವರೆಗೆ ಎಲ್ಲರೊಂದಿಗೆ ಬೆರೆತು ಸೇವೆ ಸಲ್ಲಿಸಿದ್ದಾರೆ. ಅವರಿಗೆ ತಾವು ನೀಡಿದ ಸೇವೆಗಳ ಬಗ್ಗೆ ಸಾರ್ವಜನಿಕವಾಗಿ ಹೇಳಿಕೊಳ್ಳಲು ಸುತಾರಾಂ ಇಷ್ಟವಿರಲಿಲ್ಲ. ಹಾಗಾಗಿ ಅವರ ಫೋಟೋ ಹಳೆಯ ದಾಖಲೆಗಳಲ್ಲಿ ಕಂಡು ಬರುವುದಿಲ್ಲ. ಆದರೆ ಅದೇನೋ ಅಂತಾರಲ್ಲ– ಒಳಿತನ್ನು ಮಾಡಿದವರು ಹೆಸರು ಅಳಿಸಲು ಸಾಧ್ಯವಿಲ್ಲ ಎಂಬಂತೆ ಅವರ ಈ ನಿಸ್ವಾರ್ಥ ಸೇವೆಗಳನ್ನು ನೆನೆದು, ದೆಹಲಿ ಕರ್ನಾಟಕ ಸಂಘದಲ್ಲಿ ದಿ. ನಾಗರಾಜ್ ಅವರ ಅಧ್ಯಕ್ಷತೆ ಮತ್ತು ಶ್ರೀ ಕೃಷ್ಣ ಭಟ್ ಅವರು ಕಾರ್ಯದರ್ಶಿಗಳಾಗಿದ್ದ ಅವಧಿಯಲ್ಲಿ ನಮ್ಮ ಮಾವನವರಿಗೆ ಮಾನ್ಯ ಮಾಜಿ ಮುಖ್ಯಮಂತ್ರಿ ದಿ. ರಾಮಕೃಷ್ಣ ಹೆಗಡೆ ಅವರಿಂದ ಸನ್ಮಾನ ಮಾಡಲಾಗಿದೆ ಎಂದು ತಿಳಿಸಲು ತುಂಬಾ ಹೆಮ್ಮೆ ಎನಿಸುತ್ತದೆ.

ಈ ಸಾಮಾಜಿಕ ಕಾರ್ಯಗಳ ಜೊತೆಗೆ ನಮ್ಮ ಹಳ್ಳಿಯ ಸುಧಾರಣೆಗಾಗಿಯೂ ದಾದಾ ಅವರು ಅನೇಕ ಕೆಲಸಗಳನ್ನು ಮಾಡಿದ್ದಾರೆ. ತಮ್ಮ ಮೊಮ್ಮಕ್ಕಳಿಗೆ ಸ್ವಾತಂತ್ರ್ಯ ಹೋರಾಟ ಮತ್ತು ಜೈಲಿನಲ್ಲಿ ಕಳೆದ ಆ ದಿನಗಳನ್ನು ನೆನೆಯುತ್ತ,–"ನಿಮ್ಮ ಹಕ್ಕಿಗಾಗಿ ನೀವು ಹೋರಾಡಲೇ ಬೇಕು. ಯಾವತ್ತೂ ಯಾವುದಕ್ಕೂ ಹೆದರಬಾರದು. ಬಲಶಾಲಿಯಾಗಿರಿ, ಧೈರ್ಯಶಾಲಿಯಾಗಿರಿ, ಜನರಿಗೆ ಸಹಾಯ ಮಾಡಿರಿ ಮತ್ತು ನಮ್ಮ ಮನೆತನದ ಹೆಸರನ್ನು ಉಳಿಸಿರಿ" ಅಂತ ಹೇಳ್ತಾ ಇದ್ದದ್ದು ಇನ್ನೂ ನನಗೆ ನೆನಪಿದೆ.

ಪ್ರೀತಿಯ ದಾದಾ ನಿಮ್ಮ ಬಗ್ಗೆ ನಮಗೆಲ್ಲಾ ತುಂಬಾ ಅಭಿಮಾನವಿದೆ. ನಿಮ್ಮ ಮಾರ್ಗದರ್ಶನ ಮತ್ತು ಹಿತವಚನಗಳು ನನ್ನ ಮಕ್ಕಳಿಗೆ ಶ್ರೀರಕ್ಷೆ ಇದ್ದಂತೆ.

ಸ್ನೇಹಿತರೇ, ನಮ್ಮ ಮಾವನವರು, ಅಜ್ಜ–ಅಜ್ಜಿಯರು, ಸ್ವಾತಂತ್ರ್ಯ ಹೋರಾಟಗಾರರು ಕೇವಲ ಸಂಕಟವನ್ನು ಅನುಭವಿಸಿ, ಜೀವವನ್ನು ಅರ್ಪಿಸಿ ನಮಗೆ ಈ ಸ್ವಾತಂತ್ರ್ಯವನ್ನು ಉಡುಗೊರೆಯಾಗಿ ನೀಡಿದರು. ಅವರು ಕೇವಲ ಇತಿಹಾಸದ ಪುಟಗಳಲ್ಲಿ ಹೆಸರುಗಳಾಗಿ ಉಳಿಯಬಾರದು; ಅವರ ತ್ಯಾಗವು ನಮ್ಮ ಜೀವನದಲ್ಲಿ ಮುಂದುವರಿಯಬೇಕು.

ಸ್ವಾತಂತ್ರ್ಯವೆಂದರೆ ನಮ್ಮ ದೇಶದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕು, ಘನತೆ ಮತ್ತು ಸುರಕ್ಷತೆ ಇರುವುದು. ಅದು ಮಹಿಳೆಯರು ರಾತ್ರಿ ಹೊರಗೆ ಹೋಗುವಾಗ ಭಯವಿಲ್ಲದಿರುವುದು, ಮಕ್ಕಳು ಶಾಲೆಗೆ ಹೋಗುವಾಗ ಸುರಕ್ಷಿತರಾಗಿರುವುದು, ಬಡವರು ನ್ಯಾಯ ಪಡೆಯುವುದು, ಮತ್ತು ಪ್ರತಿಯೊಬ್ಬರೂ ತಮ್ಮ ಕನಸುಗಳನ್ನು ನನಸಾಗಿಸುವ ಸ್ವಾತಂತ್ರ್ಯವನ್ನು ಹೊಂದಿರುವುದು. ಇಂದು ನಾವು ನೋಡುತ್ತಿರುವ ಅನೇಕ ಘಟನೆಗಳು–ಅನ್ಯಾಯ, ಶೋಷಣೆ, ಹಿಂಸೆ–ಸ್ವಾತಂತ್ರ್ಯದ ನಿಜವಾದ ಅರ್ಥವನ್ನು ಕಳೆದುಕೊಳ್ಳುತ್ತಿರುವುದನ್ನು ತೋರಿಸುತ್ತವೆ. ಸ್ವಾತಂತ್ರ್ಯವು ಕಾಗದದ ಮೇಲಿನ ಹಕ್ಕು ಮಾತ್ರವಾಗಿ ಉಳಿದರೆ, ಅದು ಅರ್ಥಹೀನವಾಗುತ್ತದೆ. ನಮ್ಮ ಹಿರಿಯರು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಹೋರಾಡಿದ್ದು ಕೇವಲ ವಿದೇಶಿ ಆಳ್ವಿಕೆಯನ್ನು ಕೊನೆಗೊಳಿಸಲು ಮಾತ್ರವಲ್ಲ. ಅವರು ನ್ಯಾಯ, ಸಮಾನತೆ ಮತ್ತು ಮಾನವೀಯತೆಯನ್ನು ಸ್ಥಾಪಿಸಲು ಹೋರಾಡಿದರು. ಆದ್ದರಿಂದ ನಾವು ಅವರನ್ನು ನೆನಪಿಸಿಕೊಳ್ಳುವಾಗ, ಕೇವಲ ಅವರ ಹೆಸರುಗಳನ್ನು ಪುಸ್ತಕಗಳಲ್ಲಿ ಓದುವುದಲ್ಲದೆ, ಅವರ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅನುಷ್ಠಾನಗೊಳಿಸಬೇಕು. ಅನ್ಯಾಯವನ್ನು ನೋಡಿದಾಗ ಮೌನವಾಗಿರುವುದು, ಭ್ರಷ್ಟಾಚಾರವನ್ನು ಸಹಿಸಿಕೊಳ್ಳುವುದು, ಮಹಿಳೆ–ಮಕ್ಕಳ ಮೇಲಿನ ಹಿಂಸೆಯನ್ನು ನಿರ್ಲಕ್ಷಿಸುವುದು–ಇವೆಲ್ಲವೂ ಸ್ವಾತಂತ್ರ್ಯದ ಮೇಲಿನ ದ್ರೋಹ.

ನಿಜವಾದ ಸ್ವಾತಂತ್ರ್ಯವು ನಮ್ಮಲ್ಲಿ ಪ್ರತಿಯೊಬ್ಬರೂ ಜವಾಬ್ದಾರಿಯನ್ನು ಹೊರುವಾಗ ಮಾತ್ರ ಸಾಧ್ಯ. ಅದು ನಮ್ಮ ಮತದಾನದಲ್ಲಿ, ನಮ್ಮ ಕೆಲಸದಲ್ಲಿ, ನಮ್ಮ ಮಾತುಗಳಲ್ಲಿ ಮತ್ತು ನಮ್ಮ ಕ್ರಿಯೆಗಳಲ್ಲಿ ಕಾಣಬೇಕು. ಇತಿಹಾಸವು ನಮಗೆ ಪಾಠ ಕಲಿಸುತ್ತದೆ, ಆದರೆ ಭವಿಷ್ಯವನ್ನು ನಿರ್ಮಿಸುವುದು ನಮ್ಮ ಕೆಲಸ. ಸ್ವಾತಂತ್ರ್ಯವನ್ನು ಕೇವಲ ನೆನಪಿನಲ್ಲಿ ಇಡದೆ, ಅದನ್ನು ಪ್ರತಿದಿನ ಜೀವಂತವಾಗಿ ಇರಿಸೋಣ. ನಮ್ಮ ಮಕ್ಕಳು ಸ್ವಾತಂತ್ರ್ಯವನ್ನು ಇತಿಹಾಸದ ಪುಟಗಳಲ್ಲಿ ಮಾತ್ರವಲ್ಲ, ತಮ್ಮ ಜೀವನದಲ್ಲಿ ಅನುಭವಿಸುವಂತೆ ಮಾಡೋಣ. ನಮ್ಮ ಜೀವನದಲ್ಲಿ ಇಂತಹ ವಿಶೇಷ ವ್ಯಕ್ತಿಗಳೊಂದಿಗೆ ಹಂಚಿಕೊಂಡ ಸುಂದರ ಸವಿ ನೆನಪುಗಳು ಎಂದಿಗೂ ಮಾಸುವುದಿಲ್ಲ. ತಮ್ಮ ದೇಶಕ್ಕೆ ಮತ್ತು ತಮ್ಮ ಮುಂದಿನ ಪೀಳಿಗೆಗೆ ಸ್ವಾತಂತ್ರ್ಯವನ್ನು ತರಲು ಹಿಂಜರಿಯದೇ ಹೋರಾಡಿದ ಆ ಎಲ್ಲಾ ವೀರ ಚೇತನಗಳಿಗೆ ಹೃದಯಾಳದಿಂದ ನಮನಗಳು. ❑

ಜೈ ಹಿಂದ್

**ಸವಿತಾ ಇನಾಮದಾರ್**

# ಸ್ವಾತಂತ್ರ್ಯವೆಂದರೇ ಸ್ವೇಚ್ಛೆಯೇ?

ನಮ್ಮ ದೇಶಕ್ಕೆ ಸ್ವಾತಂತ್ರ್ಯ ನೀಡುವುದಕ್ಕಾಗಿ ಹೋರಾಡಿದ ಕೋಟ್ಯಾಂತರ ಜನರಿಗೆ ಸ್ವಾತಂತ್ರ್ಯ ಎಂದರೇನು ಎಂಬ ಕುರಿತು ಸ್ಪಷ್ಟ ಚಿತ್ರಣವಿರಲಿಲ್ಲ. ಸ್ವಾತಂತ್ರ್ಯದ ನಿಜವಾದ ಅರ್ಥ ಕೆಲವೇ ಕೆಲವು ಮೇಧಾವಿಗಳಿಗೆ ತಿಳಿದಿತ್ತು. ಬಹುಪಾಲು ಜನರ ಮಟ್ಟಿಗೆ ಸ್ವಾತಂತ್ರ್ಯವೆಂದರೆ ಬ್ರಿಟಿಷರನ್ನು ಭಾರತದಿಂದ ಹೊರಗಟ್ಟುವುದಷ್ಟೇ ಆಗಿತ್ತು. ನಿಜವಾದ ಅರ್ಥವೇನೆಂಬುದನ್ನು ಅರಿತುಕೊಳ್ಳುವ ಸಹನೆಯಾಗಲಿ, ಅವಶ್ಯಕತೆಯಾಗಲಿ ಜನರಿಗೆ ಇರಲಿಲ್ಲ. ಈಗಲೂ ಇಲ್ಲ. ಪ್ರತಿವರ್ಷ ನಡೆಯುವ ಸ್ವಾತಂತ್ರ್ಯ ದಿನಾಚರಣೆ ಎಂಬುದು ಕೇವಲ ಧ್ವಜ ಹಾರಿಸಿ ಭಾಷಣ ಮಾಡುವುದಕ್ಕೆ ಸೀಮಿತವಾಗುತ್ತಾ ಜನರಿಗೆ ರಜೆಯ ಒಂದು ದಿನವಾಗಿ ತನ್ನ ಅರ್ಥ ಕಳೆದುಕೊಳ್ಳತೊಡಗಿದೆ.

ನಮ್ಮ ಸಂವಿಧಾನ ರಚನಾಕಾರರು ಉಚ್ಚರಿಸಿದ ನಾಗರಿಕರ ಹಕ್ಕು ಮತ್ತು ಕರ್ತವ್ಯಗಳು ಆಳುವ ಸರ್ಕಾರ ಮತ್ತು ಜನರಲ್ಲಿ ಜವಾಬ್ದಾರಿಯ ಮಹತ್ವದ ಅರಿವು ಮೂಡಿಸುವ ಉದ್ದೇಶವನ್ನು ಹೊಂದಿತ್ತು. ಆದರೆ ಇಂದು ದೇಶದ ಅನೇಕ ಸರ್ಕಾರಗಳು ತಮ್ಮ ಕರ್ತವ್ಯಗಳನ್ನು ಮರೆತಿವೆ, ಜನರು ಕೂಡ. ಜನರಿಗೆ ಕೇವಲ ತಮ್ಮ ಹಕ್ಕಿನದೊಂದೇ ಚಿಂತೆಯಾಗಿಬಿಟ್ಟಿದೆ. ತಮ್ಮ ತಮ್ಮ ಹಕ್ಕಿಗಾಗಿ ಹೋರಾಡುವವರೇ ಹೆಚ್ಚಾಗಿದ್ದಾರೆ. ಕರ್ತವ್ಯಕ್ಕಾಗಿ ಹೋರಾಡುವವರು ಅತ್ಯಂತ ವಿರಳ. ಹೀಗಾಗಿ ಒಂದು ರೀತಿಯ ಸ್ವೇಚ್ಛೆಯ ಪ್ರವೃತ್ತಿ ಎಲ್ಲೆಡೆ ಕಂಡು ಬರುತ್ತಿದೆ. ಉಪವಾಸ, ಸತ್ಯಾಗ್ರಹ, ಪ್ರಾಯೋಪವೇಶ, ಹರತಾಳಗಳ ದುರುಪಯೋಗಕ್ಕೆ ಜನತೆ, ಸರಕಾರಗಳೆರಡೂ ಎಷ್ಟೋ ಕಡೆ ಕಾರಣಗಳಾದದ್ದುಂಟು. ಪರಸ್ಪರ ದೂರುವುದೊಂದನ್ನು ಬಿಟ್ಟರೆ ಸ್ವದೋಷವನ್ನು ತಿಳಿದುಕೊಂಡು ತಿದ್ದಿಕೊಳ್ಳುವ ಬುದ್ಧಿಯು ಹುಟ್ಟುವಂಥ ವಾತಾವರಣವನ್ನು ನಮ್ಮ ಪ್ರಭುತ್ವ ಸೃಷ್ಟಿಸಿದೆ.

ಪ್ರಜಾಪ್ರಭುತ್ವದಲ್ಲಿ ಶಿಕ್ಷಣಕ್ಕಿರುವ ಮಹತ್ವ ಮತ್ತೊಂದಕ್ಕಿಲ್ಲ. ಅದರ ಯಶಸ್ಸು ಮತ್ತು ವೈಫಲ್ಯಗಳು ನೀತಿವಂತಿಕೆಯ ಮಟ್ಟವನ್ನು ಅವಲಂಬಿಸಿವೆ. ಸ್ವಾತಂತ್ರ್ಯದ ಮಟ್ಟಿನಲ್ಲಿ ನೀತಿಯನ್ನು ಕಡೆಗಣಿಸಿದ್ದೇ ಭಾರತದ ಇಂದಿನ ರಾಜಕೀಯ, ಆರ್ಥಿಕ, ಸಾಮಾಜಿಕ ಅವ್ಯವಸ್ಥೆಗಳಿಗೆ ಕಾರಣ.

ಹತ್ತು ವರ್ಷಗಳ ಹಿಂದೆ ಪ್ರಧಾನಮಂತ್ರಿ ಮೋದಿಯವರು ಸ್ವಚ್ಛ ಭಾರತ ಅಭಿಯಾನವನ್ನು ಘೋಷಿಸಿದ್ದರು. ಆರಂಭದ ಒಂದೆರಡು ವರ್ಷ ಜನರು ಆ ಘೋಷಣೆಯನ್ನು ಬಹಳ ಮುತುವರ್ಜಿಯಿಂದ ಪಾಲಿಸಿದರು. ಬರುಬರುತ್ತಾ ಸ್ವಚ್ಛತೆಯನ್ನು ಅನುಷ್ಠಾನಗೊಳಿಸುವ ವಿಷಯದಲ್ಲಿ ಮತ್ತೆ ಉದಾಸೀನತೆ ಕಂಡುಬರುತ್ತಿದೆ. ಅನುಷ್ಠಾನಗೊಳಿಸುವ ಅಧಿಕಾರಿಗಳಿಗಾಗಲಿ, ಪಾಲಿಸುವ ನಾಗರಿಕರಿಗಾಗಲಿ ತಮ್ಮ ದೇಶ ಸ್ವಚ್ಛವಾಗಿರಬೇಕು, ದೇಶದ ಗಾಳಿ ನೀರು ನಿರ್ಮಲವಾಗಿರಬೇಕು, ಅದರಿಂದ ಆರೋಗ್ಯ ಸಮಸ್ಯೆ ಕಡಿಮೆಯಾಗಿ ದೇಶಕ್ಕೆ ಉತ್ತಮ ಉಳಿತಾಯವಾಗಬಲ್ಲದು ಎಂಬ ಆಶಯವೇ ಇಲ್ಲದಂತಾಗಿದೆ. ಯಾರಾದರೂ ಮಂತ್ರಿ ಮಹೋದಯರು ಬರುವವರಿದ್ದರೆ, ಅವರು ಸಾಗುವ ಹಾದಿಯ ಕಸ ಗುಡಿಸಿ ಅಲ್ಲಿಯೇ ಪಕ್ಕದ ಚರಂಡಿ ಅಥವಾ ಮೋರಿಗೆ ಆ ಕಸವನ್ನು ತಳ್ಳಿ ತಮ್ಮ ಡ್ಯೂಟಿ ಮುಗಿಸುವ ಸ್ವಚ್ಛತಾ ಕರ್ಮಿಗಳು, ತಮ್ಮ ಮನೆಯ ಕಸವನ್ನು, ಪ್ಲಾಸ್ಟಿಕ್ ಚೀಲವನ್ನು ಪಕ್ಕದ ಮನೆಯ ಎದುರು ಅಥವಾ ರಸ್ತೆಗೆ ಎಸೆಯುವ ನಾಗರಿಕರು, ಸ್ವಾತಂತ್ರ್ಯವನ್ನು ಸ್ವೇಚ್ಛೆ ಎಂದು ತಿಳಿದಿದ್ದಾರೋ ಹೇಗೆ ಎಂಬ ಅನುಮಾನ ಉಂಟಾಗುತ್ತದೆ.

ಸರ್ಕಾರಗಳಿಗೆ ಪ್ಲಾಸ್ಟಿಕ್ ಪೆಡಂಭೂತದ ಕುರಿತು ಚೆನ್ನಾಗಿ ಅರಿವಿದ್ದರೂ ಕೂಡ ಅದನ್ನು ಸಂಪೂರ್ಣ ನಿಷೇಧಿಸಲು ಅಸಮರ್ಥವಾಗಿಬಿಟ್ಟಿವೆ. ನೀತಿ ನಿಯಮಗಳನ್ನು, ಆದೇಶಗಳನ್ನು ಹೇರಲು ಬ್ರಿಟಿಷರು ಬಹಳ ಸಮರ್ಥರಿದ್ದರು ಎಂಬುದಕ್ಕೆ ನನ್ನ ಅಜ್ಜ ತಾವು ಕಣ್ಣಾರೆ ಕಂಡ ಒಂದು ಉದಾಹರಣೆಯನ್ನು ನೀಡುತ್ತಿದ್ದರು. 1940ರ ಆಸುಪಾಸು ಎಡಮಾವಿನ ಹೊಳೆ ಸೇತುವೆಯನ್ನು ಕಟ್ಟುವ ಸಮಯದಲ್ಲಿ, ಇಬ್ಬರು ಗಾರೆ ಕೆಲಸಗಾರರು ಮಾತನಾಡುತ್ತಾ ಕೆಲಸ ಮಾಡುವುದನ್ನು ಕಂಡ ಕುದುರೆ ಸವಾರ ಉಸ್ತುವಾರಿ ಬ್ರಿಟಿಷ್ ಅಧಿಕಾರಿ, ಅಲ್ಲಿಗೆ ಬಂದು ತನ್ನ ಬೂಟು ಕಾಲಲ್ಲಿ ಒದೆಯುತ್ತಾ ಬಾಯಿ ಮುಚ್ಚಿಕೊಂಡು ಕೆಲಸ ಮಾಡಲು ಆದೇಶಿಸಿದನಂತೆ. ಶಿಕ್ಷೆ ತೀರಾ ಅಮಾನವೀಯವಾಗಿದ್ದರೂ, ಶಿಸ್ತು ಮತ್ತು ಪ್ರಾಮಾಣಿಕತೆಗೆ ಮಹತ್ವ ನೀಡುವುದಾಗಿತ್ತು ಎಂಬುದಕ್ಕೆ ಇಂದಿಗೂ ನಿಂತಿರುವ ಆ ಸೇತುವೆಯೇ ಸಾಕ್ಷಿಯಾಗಿದೆ. ಸ್ವತಂತ್ರ ಭಾರತದಲ್ಲಿ ಇಂದು ತಪ್ಪು ಮಾಡುತ್ತಿರುವ ಕೆಳ ಅಧಿಕಾರಿಯ ಮೇಲೆ ಮೇಲಧಿಕಾರಿ ಕ್ರಮ ಜರುಗಿಸಿದರೆ, ಪೀಡಿತ ಅಥವಾ ವಿಕ್ಟಿಮ್ ಕಾರ್ಡ್ ಇನ್ನಾವುದೋ ಕಾರಣದಿಂದ ಆತನ ವಿರುದ್ಧ ಕೋರ್ಟು ಖಟ್ಲೆ ನಡೆಯುವ ಸಾಧ್ಯತೆಯೇ ಹೆಚ್ಚು. ಬಸವಣ್ಣನವರು ಹೇಳಿದ 'ಕಾಯಕವೇ ಕೈಲಾಸ' ಎಂಬ ಮಂತ್ರವನ್ನು ಕಾಯಾ ವಾಚಾ ಮನಸಾ ಪಾಲಿಸುವವರನ್ನು ದುರ್ಬೀನು ಹಿಡಿದು ಹುಡುಕಬೇಕಾಗಿದೆ ಇಂದು. ಅದೆಷ್ಟೋ ಕೇಸುಗಳು ಕೋರ್ಟುಗಳಲ್ಲಿ ಕೊಳೆಯುತ್ತಾ ಬಿದ್ದಿವೆ. ಕೋರ್ಟುಗಳ ಆದೇಶದ ಉಲ್ಲಂಘನೆಯಂತೂ ಪರಾಕಾಷ್ಠೆಯನ್ನು ತಲುಪಿದೆ. ಇದು ಸ್ವಾತಂತ್ರ್ಯವೇ ಅಥವಾ ಸ್ವೇಚ್ಛೆಯೇ?

ದೇಶದ ಸಂಪನ್ಮೂಲ ಬಳಕೆಯಲ್ಲೂ ಸ್ವೇಚ್ಛಾಚಾರ ಕಂಡುಬರುತ್ತಿದೆ. ಮುಂದಿನ ಪೀಳಿಗೆಗೆ ಅದನ್ನು ಉಳಿಸುವ ಬಗ್ಗೆ ಜನರಾಗಲಿ, ಸರ್ಕಾರಗಳಾಗಲಿ ಗಂಭೀರವಾಗಿ ಯೋಚಿಸುತ್ತಿಲ್ಲ ಎಂಬುದಕ್ಕೆ ಇತ್ತೀಚೆಗೆ ಭಾರತದಲ್ಲಿ ಸ್ಥಾಪನೆಯಾಗುತ್ತಿರುವ ಎ.ಐ. (AI) ಡೇಟಾ ಸೆಂಟರ್‌ಗಳೇ ಉದಾಹರಣೆ. ಆ ಡೇಟಾ ಸೆಂಟರ್‌ಗಳು ನದಿ ನೀರಿನ ಉಷ್ಣತೆ ಹೆಚ್ಚಿಸುವ ಮೂಲಕ ಎಲ್-ನಿನೋದಂತಹ ಭಯಾನಕ ಹವಾಮಾನ ವಿದ್ಯಮಾನಗಳಿಗೆ ಕಾರಣಗಳಾಗುತ್ತಿವೆ. ಪಟ್ಟಿ ಮಾಡಲು ಹೋದರೆ ಕೊನೆಯಿಲ್ಲ. ಅಷ್ಟು ವಿಡಂಬನಾತ್ಮಕ ಸಂಗತಿಗಳು ನಮ್ಮ ದೇಶದಲ್ಲಿ ನಡೆಯುತ್ತಿವೆ.

ಅಭಿವೃದ್ಧಿಯ ಹೆಸರಿನಲ್ಲಿ ಬೆಟ್ಟ ಗುಡ್ಡಗಳನ್ನು ಕಡಿಯುವುದು, ಅರಣ್ಯ ನಾಶ, ಒಂದೇ ನದಿಗೆ ಹಲವು ಅಣೆಕಟ್ಟುಗಳ ನಿರ್ಮಾಣ, ವಾಹನ ಸಂಖ್ಯೆಯಲ್ಲಿ ಹೆಚ್ಚಳದ ಕಾರಣ ರಸ್ತೆ ಅಗಲೀಕರಣ ಇತ್ಯಾದಿಗಳ ನೆಪದಲ್ಲಿ ಮರ ಕಡಿಯುವುದು–ಇವೆಲ್ಲಾ ಸ್ವಾತಂತ್ರ್ಯವಲ್ಲ, ಬದಲಿಗೆ ಸ್ವೇಚ್ಛೆಯ ಲಕ್ಷಣಗಳು.

ನಮ್ಮ ತ್ರಿವರ್ಣ ಧ್ವಜ ಆಕಾಶದೆತ್ತರಕ್ಕೆ ಏರಿ ಹಾರುತ್ತಿರುವುದು ಸ್ವಾತಂತ್ರ್ಯದ ಗುರುತು. ಆ ಧ್ವಜ ತನ್ನಿಷ್ಟದಂತೆ ಎಲ್ಲೆಲ್ಲೋ ಹಾರಾಡುವಂತಿಲ್ಲ, ಏಕೆಂದರೆ ಅದನ್ನು ಒಂದು ಕಂಬಕ್ಕೆ ಹಗ್ಗದಿಂದ ಕಟ್ಟಿ ಇಡಲಾಗಿದೆ. ಅದೇ ರೀತಿ ನಾವು ಕೂಡ ಕರ್ತವ್ಯವೆಂಬ ಹಗ್ಗದಿಂದ ಕಟ್ಟಲ್ಪಟ್ಟವರಾಗಿ ನಮ್ಮ ಕೆಲಸಗಳನ್ನು ನಿರ್ಭಯದಿಂದ, ಯಾವ ಕಟ್ಟಳೆಗಳಿಲ್ಲದೆ ನಿರ್ವಹಿಸಿದಾಗಲೇ ಅದು ಸ್ವಾತಂತ್ರ್ಯದ ಗುರುತಾಗಬಲ್ಲದು. ದೇಶದಲ್ಲಿ ಕರ್ತವ್ಯ ಪ್ರಜ್ಞರು ಇಲ್ಲವೇ ಇಲ್ಲ ಎಂದೇನಿಲ್ಲ. ಆದರೆ ಅವರ ಸಂಖ್ಯೆ ಬಹಳ ಕಡಿಮೆ ಇದೆ. ಹೀಗಾಗಿ ನಮ್ಮ ದೇಶ ತನ್ನ ಸ್ವಾತಂತ್ರ್ಯದ ಪೂರ್ಣ ಪ್ರಮಾಣದ ಬೆಳವಣಿಗೆಯನ್ನು ಇನ್ನೂ ತೋರಿಸಿಲ್ಲ.❑

***ಸಂತೋಷ್ ಕುಮಾರ್ ಉಪಾಧ್ಯಾಯ***

# ಸ್ವಾತಂತ್ರ್ಯ ಎಂದರೆ ನನಗೆ ಏನು?

ನಾನು ಸ್ವಾತಂತ್ರ್ಯದ ಬಗ್ಗೆ ಯೋಚಿಸಿದಾಗ, 1947ರಲ್ಲಿ ನಾವು ಗಳಿಸಿದ ಸ್ವಾತಂತ್ರ್ಯವೊಂದನ್ನೇ ನೆನಪಿಸಿಕೊಳ್ಳುವುದಿಲ್ಲ. ಒಬ್ಬ ಮಹಿಳೆಯಾಗಿ, ಗೃಹಿಣಿಯಾಗಿ, ತಾಯಿಯಾಗಿ ಮತ್ತು ಈ ದೇಶದ ಪ್ರಜೆಯಾಗಿ ನನ್ನ ಬದುಕಿನ ಪುಟ್ಟ ಪಯಣದಲ್ಲಿ ನಾನು ಅನುಭವಿಸಿದ ಸ್ವಾತಂತ್ರ್ಯದ ಬಗ್ಗೆಯೂ ಯೋಚಿಸುತ್ತೇನೆ. ಸುಮಾರು ಮೂರು ದಶಕಗಳಿಂದ ನಾನು ದೆಹಲಿಯಲ್ಲಿ ವಾಸಿಸುತ್ತಿದ್ದೇನೆ. ಈ ವರ್ಷಗಳಲ್ಲಿ ನಗರ ಬದಲಾಗುವುದನ್ನು, ಬೆಳೆಯುವುದನ್ನು, ಹಲವು ಸವಾಲುಗಳನ್ನು ಎದುರಿಸುವುದನ್ನು ಮತ್ತು ಹೊಸ ರೂಪ ಪಡೆದುಕೊಳ್ಳುವುದನ್ನು ನೋಡಿದ್ದೇನೆ. ಮಹಿಳೆಯರಿಗಾಗಿ ಹೊಸ ಅವಕಾಶಗಳು ತೆರೆದುಕೊಳ್ಳುವುದನ್ನೂ, ಮಕ್ಕಳು ಹೆಚ್ಚು ಆತ್ಮವಿಶ್ವಾಸದಿಂದ ಬೆಳೆಯುವುದನ್ನೂ, ಭಾರತದ ವಿವಿಧ ಭಾಗಗಳಿಂದ ಬಂದ ಜನರು ಈ ವೈವಿಧ್ಯಮಯ ನಗರದಲ್ಲಿ ತಮ್ಮ ಬದುಕು ಕಟ್ಟಿಕೊಳ್ಳಲು ಒಂದಾಗುವುದನ್ನೂ ಕಂಡಿದ್ದೇನೆ.

ಗೃಹಿಣಿಯಾಗಿ ನನಗೆ ಸ್ವಾತಂತ್ರ್ಯವೆಂದರೆ ಯಾವಾಗಲೂ ದೊಡ್ಡದಾದ, ಅದ್ದೂರಿಯಾದ ಸಂಗತಿಯೇನಲ್ಲ. ನನ್ನದೇ ಆದ ಅಭಿಪ್ರಾಯವನ್ನು ಹೊಂದುವ ಸ್ವಾತಂತ್ರ್ಯ, ನನ್ನ ಕುಟುಂಬಕ್ಕೆ ಸಂಬಂಧಿಸಿದ ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯ, ಆತ್ಮವಿಶ್ವಾಸದಿಂದ ಮನೆಯಿಂದ ಹೊರಗೆ ಹೆಜ್ಜೆ ಇಡುವ ಸ್ವಾತಂತ್ರ್ಯ, ಹೊಸದನ್ನು ಕಲಿಯುವ ಅವಕಾಶ ಮತ್ತು ಸಮಾಜದಲ್ಲಿ ಸಕ್ರಿಯವಾಗಿ ಭಾಗವಹಿಸುವ ಸ್ವಾತಂತ್ರ್ಯ ಇವೆಲ್ಲವೂ ನನಗೆ ಸ್ವಾತಂತ್ರ್ಯವೇ. ಅದೇ ಸಮಯದಲ್ಲಿ, ಮತ್ತೊಬ್ಬರ ಅಭಿಪ್ರಾಯವನ್ನು ಗೌರವಿಸುತ್ತಾ ನನ್ನ ಮಾತನ್ನು ಮುಕ್ತವಾಗಿ ಹೇಳುವ ಹಕ್ಕು ಕೂಡ ಸ್ವಾತಂತ್ರ್ಯದ ಭಾಗವೇ. ನಮ್ಮ ಸಂವಿಧಾನ ನಮಗೆ ಸಮಾನತೆ, ನ್ಯಾಯ ಮತ್ತು ಸ್ವಾತಂತ್ರ್ಯದ ಸುಂದರ ಭರವಸೆಯನ್ನು ನೀಡಿದೆ. ಆದರೆ ಈ ಮೌಲ್ಯಗಳು ನಮ್ಮ ಮನೆಗಳಿಗೂ, ನಮ್ಮ ದೈನಂದಿನ ಬದುಕಿಗೂ ತಲುಪಿದಾಗ ಮಾತ್ರ ಸ್ವಾತಂತ್ರ್ಯ ನಿಜವಾದ ಅರ್ಥವನ್ನು ಪಡೆದುಕೊಳ್ಳುತ್ತದೆ ಎಂದು ನಾನು ನಂಬುತ್ತೇನೆ. ಒಂದು ಹೆಣ್ಣುಮಗುವಿಗೆ ಕನಸು ಕಾಣಲು ಪ್ರೋತ್ಸಾಹ ಸಿಗುವಾಗ, ಒಬ್ಬ ಮಹಿಳೆಯ ಧ್ವನಿಗೆ ಗೌರವ ದೊರೆಯುವಾಗ, ಪ್ರತಿಯೊಬ್ಬ ವ್ಯಕ್ತಿಯನ್ನೂ ಘನತೆಯಿಂದ ಕಾಣುವಾಗ ಸ್ವಾತಂತ್ರ್ಯದ ಅರ್ಥ ಮತ್ತಷ್ಟು ಗಾಢವಾಗುತ್ತದೆ.

ದೆಹಲಿಯಲ್ಲಿ ಸುಮಾರು ಮೂವತ್ತು ವರ್ಷಗಳ ಕಾಲ ಬದುಕಿದ ನಂತರ, ಭಾರತದ ಅತಿದೊಡ್ಡ ಶಕ್ತಿ ಅದರ ವೈವಿಧ್ಯತೆಯಲ್ಲಿದೆ ಎಂಬ ನಂಬಿಕೆ ನನ್ನಲ್ಲಿ ಗಟ್ಟಿಯಾಗಿದೆ. ನಾವು ಬೇರೆ ಬೇರೆ ಭಾಷೆಗಳನ್ನು ಮಾತನಾಡಬಹುದು, ವಿಭಿನ್ನ ಸಂಪ್ರದಾಯಗಳನ್ನು ಅನುಸರಿಸಬಹುದು, ವಿಭಿನ್ನ ಹಿನ್ನೆಲೆಗಳಿಂದ ಬಂದಿರಬಹುದು. ಆದರೂ ಉತ್ತಮ ಭವಿಷ್ಯದ ಕುರಿತ ನಮ್ಮ ಆಶಯಗಳು ಒಂದೇ ಆಗಿವೆ. ಹೀಗಾಗಿ, ನನಗೆ ಸ್ವಾತಂತ್ರ್ಯವೆಂದರೆ ಕೇವಲ ಹಿಂದಿನ ತ್ಯಾಗಗಳನ್ನು ಸ್ಮರಿಸುವುದಲ್ಲ. ಇಂದು ನಾವು ನಿರ್ಮಿಸುತ್ತಿರುವ ಭಾರತದ ಬಗ್ಗೆ ನಮ್ಮ ಹೊಣೆಗಾರಿಕೆಯನ್ನು ಅರಿತುಕೊಳ್ಳುವುದೂ ಹೌದು. ಪ್ರತಿಯೊಬ್ಬರಿಗೂ ಕನಸು ಕಾಣುವ ಸ್ವಾತಂತ್ರ್ಯವಿರುವ, ಬೆಳೆಯಲು ಅವಕಾಶವಿರುವ ಮತ್ತು ಘನತೆಯಿಂದ ಬದುಕುವ ಧೈರ್ಯವಿರುವ ಭಾರತವನ್ನು ನಿರ್ಮಿಸುವುದು–ಅದೇ ನಿಜವಾದ ಸ್ವಾತಂತ್ರ್ಯ. ನನಗೆ ಸ್ವಾತಂತ್ರ್ಯದ ನಿಜವಾದ ಅರ್ಥ ಇದೇ.❑

***ಅಶ್ವಿನಿ ಬಿ.ಎಸ್.***

# ದೆಹಲಿ ಕರ್ನಾಟಕ ಸಂಘದಲ್ಲಿ ರಾಷ್ಟ್ರ ಧ್ವಜಾರೋಹಣದ ಮೂಲಕ 80ನೇ ಸ್ವಾತಂತ್ರ್ಯ ದಿನಾಚರಣೆ



ದಿನಾಂಕ 15 ಆಗಸ್ಟ್ 2026 ರಂದು ದೆಹಲಿ ಕರ್ನಾಟಕ ಸಂಘವು ಪ್ರತಿವರ್ಷದಂತೆ ಈ ಬಾರಿಯೂ ರಾಷ್ಟ್ರ ಧ್ವಜಾರೋಹಣ ಮಾಡುವ ಮೂಲಕ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.

ದೆಹಲಿ ಕರ್ನಾಟಕ ಸಂಘದ ನೂತನ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಹಾಗೂ ಈ ಸಾಲಿನ ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಡಾ. ಕೆರೆಮನೆ ಶಿವಾನಂದ ಹೆಗಡೆ ಅವರು ಜಂಟಿಯಾಗಿ ರಾಷ್ಟ್ರಧ್ವಜಾರೋಹಣ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಅವರು, ಬ್ರಿಟಿಷರ ಆಳ್ವಿಕೆಯಿಂದ ಭಾರತಕ್ಕೆ ಸ್ವಾತಂತ್ರ್ಯ ದೊರಕಲು ಅನೇಕ ಮಹನೀಯರು ತಮ್ಮ ತ್ಯಾಗ, ಬಲಿದಾನ ಮತ್ತು ಹೋರಾಟದ ಮೂಲಕ ಅಮೂಲ್ಯ ಕೊಡುಗೆ ನೀಡಿದ್ದಾರೆ. ಅವರ ತ್ಯಾಗ ಮತ್ತು ಹೋರಾಟದ ಫಲವಾಗಿ ಇಂದು ನಾವು ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಿಂದ ಆಚರಿಸುವ ಸುವರ್ಣಾವಕಾಶವನ್ನು ಪಡೆದಿದ್ದೇವೆ ಎಂದು ತಿಳಿಸಿದರು.

ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ಬಲಿದಾನಗಳನ್ನು ಸ್ಮರಿಸುವುದರ ಜೊತೆಗೆ, ದೇಶದ ಏಕತೆ, ಅಖಂಡತೆ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕನ ಮೇಲಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು, ಸದಸ್ಯರು, ಕನ್ನಡಿಗರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದು, ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸಿದರು. ದೇಶಭಕ್ತಿ ಮತ್ತು ರಾಷ್ಟ್ರಪ್ರೇಮದ ಭಾವನೆಯೊಂದಿಗೆ ಕಾರ್ಯಕ್ರಮವು ಅರ್ಥಪೂರ್ಣವಾಗಿ ನೆರವೇರಿತು. ❑

***ಅಭಿಮತ ವರದಿ***

---

## ೮೦ನೇ ಸ್ವಾತಂತ್ರ್ಯ ಸಂಭ್ರಮಾಚರಣೆ




ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಧ್ವಜಾರೋಹಣ ನೆರವೇರಿಸಿ ಮಾತನಾಡಿದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಬಿ.ಆರ್. ಉಮೇಶ್ ಅವರು ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಜೀವನ ಮೌಲ್ಯಗಳಿಗೆ ಒತ್ತು ನೀಡಿ ದೇಶದ ಸಂಸ್ಕೃತಿ ಪರಂಪರೆಯನ್ನು ಬೆಳೆಸಬೇಕು. ದೇಶಕ್ಕಾಗಿ ಹೋರಾಡಿ ಪ್ರಾಣತ್ಯಾಗ ಮಾಡಿದ ಸ್ವಾತಂತ್ರ್ಯ ಹೋರಾಟಗಾರರ ಅರಿವು ನಮ್ಮಲ್ಲಿರಬೇಕು. ಸ್ವಾತಂತ್ರ್ಯ ಎಂದರೆ ಕೇವಲ ಪರಕೀಯರ ಆಡಳಿತದಿಂದ ಮುಕ್ತಿ ಮಾತ್ರವಲ್ಲ, ಅದು ನಮ್ಮ ಜವಾಬ್ದಾರಿ ಶಿಸ್ತು ಪ್ರಾಮಾಣಿಕತೆ ಮತ್ತು ಸೇವೆಯ ಸಂಕೇತವು ಹೌದು. ವಿದ್ಯಾರ್ಥಿಗಳಾದ ನೀವೆಲ್ಲರೂ ಉತ್ತಮ ಶಿಕ್ಷಣ ಪಡೆಯಬೇಕು, ಗುರುಹಿರಿಯರನ್ನು ಗೌರವಿಸಬೇಕು ಪರಿಸರವನ್ನು ರಕ್ಷಿಸಬೇಕು ಈ ದೇಶದ ಕಾನೂನನ್ನು ಗೌರವಿಸಬೇಕು ಮತ್ತು ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ, ಗೌರವ ಖಜಾಂಚಿ ಕಾಶಿನಾಥ್ ಬಿರಾದರ್, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲಾ ಪ್ರಾಂಶುಪಾಲ ಪ್ರಶಾಂತ್ ಕುಮಾರ್, ಉಪಪ್ರಾಂಶುಪಾಲೆ ಪ್ರೇಮಲತಾ ಬಿ., ಶಾಲಾ ಶಿಕ್ಷಕ–ಶಿಕ್ಷಕೇತರ ವೃಂದ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ದೇಶಭಕ್ತಿಯನ್ನು ಬಿಂಬಿಸುವ ವಿಚಾರಧಾರೆಗಳು, ಸ್ವಾತಂತ್ರ್ಯ ಮಹತ್ವದ ಕಿರು ಪ್ರಹಸನ, ಹಾಡುಗಳು ಮತ್ತು ನೃತ್ಯಗಳು ಪ್ರದರ್ಶನಗೊಂಡಿತು. ❑

***ಅರವಿಂದ ಬಿಜ್ಜೆ***

# ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್ (ರಿ.), ನವದೆಹಲಿ 2026-2028 ನೇ ಅವಧಿಗೆ ನೂತನ ಪದಾಧಿಕಾರಿಗಳ ಆಯ್ಕೆ

ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್ (ರಿ.), ನವದೆಹಲಿಯು ದಿನಾಂಖ 02.08.2026 ರಂದು ವಾರ್ಷಿಕ ಸಾಮಾನ್ಯ ಸಭೆ ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ನಿರ್ಗಮಿತ ಅಧ್ಯಕ್ಷರಾದ ಶ್ರೀ ವೈಜಿನಾಥ ವಿ. ಬಿರಾದಾರ ಅವರ ಅಧ್ಯಕ್ಷತೆಯಲ್ಲಿ ಸೌಹಾರ್ದಯುತವಾಗಿ ನೆರವೇರಿತು.

ಸಭೆಯಲ್ಲಿ ಟ್ರಸ್ಟ್‌ನ 2026-2028ನೇ ಅವಧಿಗೆ ನೂತನ ಆಡಳಿತ ಮಂಡಳಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿಗಳಾದ ಡಾ. ಶಿವಾಜಿ ಎಲ್. ಭಂಡಾರ್‌ಕರ ಅವರನ್ನು ನೂತನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ನೂತನ ಅಧ್ಯಕ್ಷರಾದ ಡಾ. ಶಿವಾಜಿ ಎಲ್. ಭಂಡಾರ್‌ಕರ ಅವರು ಈ ಕೆಳಕಂಡ ಪದಾಧಿಕಾರಿಗಳನ್ನು ಪ್ರಸ್ತಾಪಿಸಿದರು, ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ನೂತನ ಪದಾಧಿಕಾರಿಗಳ ಸಂಪೂರ್ಣ ವಿವರಣೆ.

**ಪದಾಧಿಕಾರಿಗಳು:**

**ಅಧ್ಯಕ್ಷರು** : ಡಾ. ಶಿವಾಜಿ ಎಲ್. ಭಂಡಾರ್‌ಕರ, **ಉಪಾಧ್ಯಕ್ಷರು** : ಶ್ರೀ ಶಶಿಕಾಂತ ಪಾಟೀಲ (ಗುರುಗ್ರಾಮ), **ಮಹಿಳಾ ಉಪಾಧ್ಯಕ್ಷರು** : ಶ್ರೀಮತಿ ಸೀಮಾ ಕಾಶಿನಾಥ ಬಿರಾದಾರ. **ಪ್ರಧಾನ ಕಾರ್ಯದರ್ಶಿ** : ಶ್ರೀ ರಾಜಕುಮಾರ ನೀಲೂರ, **ಜಂಟಿ ಕಾರ್ಯದರ್ಶಿಗಳು** : ಶ್ರೀ ಹನುಮಂತ ದೇಶಮುಖ ಹಾಗೂ ಶ್ರೀ ಚಂದ್ರಶೇಖರ ಜೋಳದರಾಶಿ. **ಖಜಾಂಚಿ** : ಶ್ರೀ ಶಾಂತಕುಮಾರ ನಿಂಬಾಳ

**ಕಾರ್ಯಕಾರಿ ಸಮಿತಿಯ ಸದಸ್ಯರು:**

ಶ್ರೀ ಬಾಬು ಹೆಗಣೆ, ಶ್ರೀ ಪ್ರಭುಶೆಟ್ಟಿ ಪಾಟೀಲ, ಶ್ರೀ ಬಸವರಾಜ ಜ್ಯೋತೆಪ್ಪ, ಶ್ರೀ ಪ್ರಭಾಕರ ಮಡ್ಡಿತೊಟ, ಶ್ರೀ ಕಾಶಿನಾಥ ಬಿರಾದಾರ.

ಸಭೆಯಲ್ಲಿ ಟ್ರಸ್ಟ್‌ನ ಮುಂಬರುವ ಕಾರ್ಯಕ್ರಮಗಳ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು. ಕಳೆದ ಮೂರು ವರ್ಷಗಳಿಂದ ನವದೆಹಲಿಯಲ್ಲಿ ಯಶಸ್ವಿಯಾಗಿ ಆಚರಿಸಿಕೊಂಡು ಬರುತ್ತಿರುವ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯನ್ನು ಇದೇ ರೀತಿಯಲ್ಲಿ 17ನೇ ಸೆಪ್ಟೆಂಬರ್ 2026 ರಂದು ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ರಾಷ್ಟ್ರಧ್ವಜ ಹಾರಿಸುವ ಮೂಲಕ ಆಚರಿಸಲು ತೀರ್ಮಾನಿಸಲಾಯಿತು.

ಟ್ರಸ್ಟ್‌ನ ಸ್ಥಾಪನೆ ಹಾಗೂ ಬೆಳವಣಿಗೆಯಲ್ಲಿ ಮಹತ್ವದ ಕೊಡುಗೆ ನೀಡುತ್ತಿರುವ ನಿರ್ಗಮಿತ ಅಧ್ಯಕ್ಷರಾದ ಶ್ರೀಯುತ ವಿ.ವಿ. ಬಿರಾದಾರ ಅವರ ಅಪಾರ ಅನುಭವ, ಸೇವೆ ಹಾಗೂ ನಾಯಕತ್ವವನ್ನು ಪರಿಗಣಿಸಿ, ಅವರನ್ನು ಟ್ರಸ್ಟ್‌ನ ಗೌರವಾಧ್ಯಕ್ಷರಾಗಿ ಸರ್ವಾನುಮತದಿಂದ ನೇಮಕ ಮಾಡಲಾಯಿತು.

ನೂತನ ಅಧ್ಯಕ್ಷರಾದ ಡಾ. ಶಿವಾಜಿ ಎಲ್. ಭಂಡಾರ್‌ಕರ ಅವರು ನೂತನವಾಗಿ ಸೇರ್ಪಡೆಯಾದ ಕಾರ್ಯಕಾರಿ ಸದಸ್ಯರಾದ ಶ್ರೀ ಪ್ರಭಾಕರ ಮಡ್ಡಿತೊಟ ಹಾಗೂ ಶ್ರೀ ಕಾಶಿನಾಥ ಬಿರಾದಾರ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ, ನೂತನ ಪದಾಧಿಕಾರಿಗಳನ್ನು ಅಭಿನಂದಿಸಿದರು. ಟ್ರಸ್ಟ್‌ನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವುದಾಗಿ ಹಾಗೂ ದೆಹಲಿ, ಎನ್‌ಸಿಆರ್‌ನಲ್ಲಿ ನೆಲೆಸಿರುವ ಕಲ್ಯಾಣ ಕರ್ನಾಟಕ ಭಾಗದ ಕನ್ನಡಿಗರ ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಹಾಗು ಇನ್ನಿತರ ಹಿತಾಸಕ್ತಿಗಾಗಿ ಹಲವಾರು ಹೊಸ ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದರು.





ಡಾ. ಎಸ್.ಎಲ್. ಭಂಡಾರ್‌ಕರ
ಅಧ್ಯಕ್ಷರು



ರಾಜಕುಮಾರ ನೀಲೂರ
ಪ್ರಧಾನ ಕಾರ್ಯದರ್ಶಿ

ಇದೇ ವೇಳೆ ಮುಂಬರುವ ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ವಿಜೃಂಭಣೆಯಿಂದ ಆಚರಿಸುವ ಕುರಿತು ಚರ್ಚಿಸಲಾಯಿತು. ಕೊನೆಯದಾಗಿ ನೂತನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರಾಜಕುಮಾರ ನೀಲೂರ ಅವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.❑

*ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್*

## ಪಂಜಾಬಿ ಕವಿಯತ್ರಿ ಅಮೃತಾ ಪ್ರೀತಮ್ ಅವರ ಜನ್ಮದಿನ 31 ಆಗಸ್ಟ್ ಅವರ ನೆನಪಿಗಾಗಿ ಈ ಪದ್ಯ

ಇಂದು ಸೂರ್ಯ ಸ್ವಲ್ಪ ಬೆದರಿ
ಬೆಳಕಿನ ಒಂದು ಕಿಟಕಿ ತೆರೆದ
ಮೋಡದ ಒಂದು ಕಿಟಕಿ ಮುಚ್ಚಿದ
ಮತ್ತು ಕತ್ತಲಿನ ಮೆಟ್ಟಿಲಿಳಿದ !

ಆಗಸದ ಹುಬ್ಬಿನ ಮೇಲೆ
ಬೆವರ ಹನಿಗಳೇಕೋ
ನಕ್ಷತ್ರಗಳ ಗುಂಡಿ ಬಿಚ್ಚಿ
ಅವನು ಚಂದ್ರನ ಕುರ್ತಾ ಕಳಚಿದ..!

ನಾನು ಮನಸಿನ ಒಂದು ಮೂಲೆಯಲ್ಲಿ ಕುಳಿತಿರುವೆ
ಹಸಿ ಕಟ್ಟಿಗೆಯೊಳಗಿಂದ
ಕಡು ಕಪ್ಪು ಹೊಗೆಯೇಳುವಂತೆ
ನಿನ್ನ ನೆನಪಾಯಿತು !

ಜೊತೆಗೆ ಸಾವಿರ ನೆನಪುಗಳು,
ಹೀಗೆ ಒಣ ಕಟ್ಟಿಗೆಯ
ಕೆಂಪುಬೆಂಕಿ ನಿಡುಸುಯ್ಯುವಂತೆ
ಈಗ ತಾನೇ ಎರಡು ಕಟ್ಟಿಗೆಗಳನ್ನು ಆರಿಸಿದ್ದೇನೆ,

ವರುಷ ಇದ್ದಿಲಿನಂತೆ ಹರಡಿವೆ
ಕೆಲವು ಆರಿದವು ಕೆಲವು ಆರದೇ ಉಳಿದವು
ಕಾಲದ ಕೈ ಗುಡಿಸುವಾಗ
ಬೆರಳ ತುದಿಗೆ ಬೊಕ್ಕೆಗಳೆದ್ದವು.

ನಿನ್ನ ಪ್ರೀತಿಯ ಕೈಯಿಂದ ಜಾರಿ
ಬದುಕಿನ ಮಡಕೆ ಒಡೆಯಿತು
ಇತಿಹಾಸದ ಅತಿಥಿ
ನನ್ನ ಅಡುಗೆಮನೆಯಿಂದ ಹಸಿದ ಹೊಟ್ಟೆಯಲ್ಲೆ ಎದ್ದ !

ಮೂಲ : ಅಮೃತಾ ಪ್ರೀತಂ
ಕನ್ನಡಕ್ಕೆ : *ರೇಣುಕಾ ನಿಡಗುಂದಿ*

# ರಂಗಮಂಚ್ ಗುರುಗ್ರಾಮದಲ್ಲಿ ನಡೆದ ವಾರ್ಷಿಕ ಮಹಾಸಭೆ ಹಾಗೂ 2026-2028 ರ ನೂತನ ಕಾರ್ಯಕಾರಿ ಸಮಿತಿ ಆಯ್ಕೆ

ದಿನಾಂಕ 16.08.2026 ರಂದು ಬೆಳಗಿನ 8.00 ಗಂಟೆಗೆ ಸರಿಯಾಗಿ ದೆಹಲಿ ಕರ್ನಾಟಕ ಸಂಘದಿಂದ ಬಸ್ಸು ಗುರುಗ್ರಾಮಕ್ಕೆ ತೆರಳಿತು, ಸುಮಾರು 9.30 ಕ್ಕೆ ರಂಗಮಂಚ್ ಗುರುಗ್ರಾಮಕ್ಕೆ ತಲುಪಿ ಕಾಫಿ, ಟೀ, ಮತ್ತು ತಂಪಾದ ಪಾನೀಯವನ್ನು ಎಲ್ಲರೂ ಸವಿದು ರಂಗಮಂಚದ ಒಳಗೆ ಪ್ರವೇಶಿಸಿದರು. ನಂತರ ರುಚಿಕರವಾದ ಉಪಹಾರ ಸವಿದು ಕೆಲ ಸಮಯ ಎಲ್ಲರೂ ಅಲ್ಲಿರುವ ಆಟಗಳನ್ನು ಆಡಿದರು. ಸುಮಾರು 11.30 ಕ್ಕೆ ಸರ್ವ ಸದಸ್ಯರ ಸಭೆ ಶುರುವಾಯಿತು.



ಅಧ್ಯಕ್ಷರಾದ ಶ್ರೀ ಅನಂತರಾವು ಅರಳಿ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ನಮ್ಮ ಸಂಘವು ನಮ್ಮ ಕಾರ್ಯಾವಧಿಯಲ್ಲಿ ಅತ್ಯುತ್ತಮ ಕಾರ್ಯಕ್ರಮಗಳನ್ನು ದೆಹಲಿ ಕನ್ನಡಿಗರನ್ನು ಒಗ್ಗೂಡಿಸಿಕೊಂಡು ಮಾಡಿಕೊಂಡು ಬಂದಿದೆ, ಅದಕ್ಕಾಗಿ ಉತ್ತಮ ಪ್ರಶಂಸೆಗಳು ಕೂಡ ಬಂದಿವೆ. ಮುಂಬರುವ ದಿನಗಳಲ್ಲಿ ಹೊಸ ಕಾರ್ಯಕಾರಿ ಸಮಿತಿಯು ಉತ್ತಮ ಕಾರ್ಯಕ್ರಮಗಳನ್ನು ಮಾಡಲಿ ಎಂದು ಹಾರೈಸಿದರು.

ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರಶಾಂತ್ ಕುಮಾರ್ ಅವರು ತಮ್ಮ ಅವಧಿಯಲ್ಲಿ ಆದ ಖರ್ಚುವೆಚ್ಚದ ಲೆಕ್ಕಾಚಾರದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ತದ ನಂತರ ಹೊಸ ಕಾರ್ಯಕಾರಿ ಸಮಿತಿಯ ಆಯ್ಕೆ ಪ್ರಕ್ರಿಯೆಯನ್ನು ಸದಸ್ಯರಾದ ಶ್ರೀ ಹನುಮೇಗೌಡರಿಗೆ ಹಸ್ತಾಂತರಿಸಲಾಯಿತು.

ಅಧ್ಯಕ್ಷರ ಸ್ಥಾನಕ್ಕೆ ಪ್ರಶಾಂತ್ ಕುಮಾರ್, ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಶ್ರೀ ಬಿ.ಎನ್. ಮೋಹನ್ ಕುಮಾರ್, ಉಪಾಧ್ಯಕ್ಷರ ಸ್ಥಾನಕ್ಕೆ ಶ್ರೀ ಗೋವಿಂದರಾಜು, ಶ್ರೀಮತಿ ದಿವ್ಯಾಶ್ರೀ, ಖಜಾಂಚಿ ಸ್ಥಾನಕ್ಕೆ ಶ್ರೀ ಗಿರೀಶ್ ಗೌಡ, ಜಂಟಿ ಕಾರ್ಯದರ್ಶಿಗಳ ಸ್ಥಾನಕ್ಕೆ ಶ್ರೀ ಮಂಜು ಜಿ. ಗೌಡ ಮತ್ತು ಶ್ರೀಮತಿ ಲಕ್ಷ್ಮೀ ಗೌಡ. ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಅನಂತರಾಮ ಅರಳಿ ಅವರನ್ನು ಸಮಿತಿಯಲ್ಲಿ ಇರುವಂತೆ ಕೋರಿ ಅವರ ಒಪ್ಪಿಗೆ ಪಡೆದು ಆಯ್ಕೆ ಮಾಡಲಾಯಿತು. ಹಾಗೆಯೇ ಯುವಕರಾದ ಶ್ರೀ ಕಾರ್ತಿಕ್ ಹಾಗೂ ಶ್ರೀ ಹೇಮಂತ್ ಶೃಂಗಾನಾಡು, ಶ್ರೀ ಟಿ.ಡಿ. ಮಹೇಶ್ ಹಾಗೂ ಹೆಚ್. ಜಗದೀಶ್ ಅವರು ಅವಿರೋಧವಾಗಿ ಆಯ್ಕೆಯಾದರು. ಚುನಾವಣಾ ಅಧಿಕಾರಿಗಳಾದ ಶ್ರೀ ಹನುಮೇ ಗೌಡ ಅವರು ತುಂಬಾ ಅಚ್ಚುಕಟ್ಟಾಗಿ ಚುನಾವಣಾ ಪ್ರಕ್ರಿಯೆಯನ್ನು ನೆರವೇರಿಸಿದರು.

ಕೊನೆಯಲ್ಲಿ ಪ್ರಧಾನ ಕಾರ್ಯದರ್ಶಿಗಳಾದ ಪ್ರಶಾಂತ್ ಕುಮಾರ್ ಸಭೆಯಲ್ಲಿದ್ದ ಎಲ್ಲರಿಗೂ ಧನ್ಯವಾದಗಳನ್ನು ಕೋರಿದರು. ಆಗಮಿಸಿದ್ದ ಸದಸ್ಯರು ಮಹಿಳೆಯರು ಮಕ್ಕಳು,ಹಿರಿಯರು ಕಿರಿಯರು ಎಲ್ಲರೂ ವಾಯುವಿಹಾರದ ಆನಂದವನ್ನು ಅನುಭವಿಸಿದರು. ಮುಂಜಾನೆಯ ಉಪಹಾರದಿಂದ ಶುರುವಾದ ವಾಯು ವಿಹಾರ ಸಾಯಂಕಾಲದ ಉಪಹಾರ,ಟೀ ಕಾಫಿಯೊಂದಿಗೆ ಮುಕ್ತಾಯಗೊಂಡಿತು. ಬಸ್ಸಿನಲ್ಲಿ



**ಪ್ರಶಾಂತ್ ಕುಮಾರ್**
**ಅಧ್ಯಕ್ಷರು**



**ಬಿ.ಎನ್. ಮೋಹನ್ ಕುಮಾರ್**
**ಪ್ರಧಾನ ಕಾರ್ಯದರ್ಶಿ**

ಎಲ್ಲರೂ ಅಂತಾಕ್ಷರಿ ಆಡುತ್ತ, ಹಾಡುತ್ತ, ತಮಾಷೆ ಮಾಡಿಕೊಳ್ಳುತ್ತ ವಾಪಸ್ಸು ದೆಹಲಿ ಕರ್ನಾಟಕ ಸಂಘವನ್ನು ತಲುಪಿದೆವು. ಒಟ್ಟಿನಲ್ಲಿ ದೆಹಲಿ ಒಕ್ಕಲಿಗ ಗೌಡ ಸಂಘದ ವಾಯು ವಿಹಾರವು ಅತ್ಯಂತ ಆನಂದಮಯ ಹಾಗೂ ಸುಖಕರವಾಗಿತ್ತು.❑

***ಗಿರೀಶ್ ಗೌಡ***

---

# ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ವತಿಯಿಂದ ಶ್ರೀ ಪೀರಪ್ಪರವರಿಗೆ ಅದ್ದೂರಿ ಬೀಳ್ಕೊಡುಗೆ



ದೆಹಲಿ ಪೋಲಿಸ್ ಕನ್ನಡಿಗ ಸಹಾಯಕ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಪೀರಪ್ಪ ಕಡಕೋಳ ರವರು ಸುಮಾರು 33 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ ಸ್ವಯಂ ಸೇವಾ ನಿವೃತ್ತಿ ಪಡೆದು ತಾಯ್ನಾಡಿಗೆ ಹಿಂತಿರುಗುತ್ತಿದ್ದಾರೆ.

ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ತೇರದಾಳ್ ಗ್ರಾಮದ ಶ್ರೀ ಗಿರಿಮಲ್ಲಪ್ಪ ಕಡಕೋಳ ಹಾಗೂ ಶ್ರೀಮತಿ ಚಂದ್ರಮ್ಮ ಕಡಕೋಳ ದಂಪತಿಗಳ ಮಗನಾಗಿ 01.06.1973 ರಂದು ಜನಿಸಿದ ಇವರು ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ದಿನಾಂಕ 01.08.1994 ರಂದು ದೆಹಲಿ ಪೋಲಿಸ್ ಹುದ್ದೆಗೆ ನೇಮಕವಾಗಿ ಸುಮಾರು 32 ವರ್ಷಗಳ ಕಾಲ ಹಲವಾರು ವಿಭಾಗಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಶ್ರೀಮತಿ ಲಕ್ಷ್ಮೀ ಕಡಕೋಳ ಅವರ ಪತ್ನಿ, ಇವರಿಗೆ ಇಬ್ಬರು ಮುದ್ದಾದ ಮಕ್ಕಳು, ಮಗಳು ಕುಮಾರಿ ಪ್ರಿಯಾ ಕಡಕೋಳ (ಸಾಫ್ಟ್‌ವೇರ್ ಇಂಜಿನಿಯರ್ ಬೆಂಗಳೂರು), ಮಗ ಕುಮಾರ ಪ್ರವೀಣ್ ಕಡಕೋಳ (ಇಂಜಿನಿಯರ್ ಬೆಂಗಳೂರು), ಇಬ್ಬರು ಮಕ್ಕಳು ಬೆಂಗಳೂರಿನಲ್ಲಿ ಮಲ್ಟಿ ನ್ಯಾಷನಲ್ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಪೀರಪ್ಪನವರು ತಮ್ಮ ವೃತ್ತಿಯಲ್ಲಿ ಯಾವುದೇ ಒಂದು ಕಪ್ಪು ಚುಕ್ಕೆ ಇಲ್ಲದೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ ಮಕ್ಕಳ ಯೋಗಕ್ಷೇಮಕ್ಕಾಗಿ ಸ್ವಯಂ ನಿವೃತ್ತಿ ಪಡೆದು ತಾಯ್ನಾಡಿಗೆ ಹಿಂತಿರುಗುತ್ತಿದ್ದಾರೆ.

ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ವತಿಯಿಂದ ಅವರಿಗೆ ಅಶೋಕ್ ವಿಹಾರ ಪೋಲೀಸ್ ಕಾಲೋನಿಯಲ್ಲಿ ಸದಸ್ಯರು, ಮಹಿಳೆಯರು ಹಾಗೂ ಮಕ್ಕಳು ಅದ್ದೂರಿಯಿಂದ ಉಡುಗೊರೆ ನೀಡಿ ಬೀಳ್ಕೊಡುಗೆ ನೀಡಲಾಯಿತು. ಪೀರಪ್ಪರವರಿಗೆ ದೇವರು ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಸಮಸ್ತ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಪರವಾಗಿ ಹಾರೈಸುತ್ತಾ, ಮುಂದಿನ ಭವಿಷ್ಯ ಉಜ್ವಲವಾಗಿರಲಿ ಎಂದು ಆಶಿಸುತ್ತೇವೆ.❑

***ಹೆಚ್.ಕೆ. ಮಂಜುನಾಥ್***
ಅಧ್ಯಕ್ಷರು, ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿ, ದೆಹಲಿ

# ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ದೆಹಲಿ ಘಟಕದ ಅಧ್ಯಕ್ಷರಾಗಿ ಡಾ. ನಿರಂಜನ್ ನಾಯ್ಕ್ ಆಯ್ಕೆ





ಡಾ. ನಿರಂಜನ್ ನಾಯ್ಕ್
ಅಧ್ಯಕ್ಷರು



ಪ್ರಶಾಂತ್ ಶೆಟ್ಟಿ
ಪ್ರಧಾನ ಕಾರ್ಯದರ್ಶಿ

ನಮ್ಮ ಮಣ್ಣಿನಕಲೆ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಯಕ್ಷಗಾನದ ಪಾತ್ರ ಮಹತ್ವವಾದದ್ದು. ಈ ನಿಟ್ಟಿನಲ್ಲಿ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಸುಮಾರು ಹತ್ತು ವರ್ಷಗಳ ಹಿಂದೆ ಯಕ್ಷಧ್ರುವ ಪಟ್ಲ ಫೌಂಡೇಶನ್ ಘಟಕ ಸ್ಥಾಪಿತವಾಗಿ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಾ ಜೊತೆಗೆ ಹೊರನಾಡಿನಲ್ಲಿರುವ ಯಕ್ಷಕಲಾ ಪ್ರೇಮಿಗಳಿಗೆ ನಿರಂತರವಾಗಿ ರಸದೌತಣವನ್ನು ನೀಡುತ್ತಿದೆ. ದೆಹಲಿಯ ಸಾಂಸ್ಕೃತಿಕ ರಾಯಭಾರಿ ಎಂದು ಹೆಸರಾದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರ ಅಧ್ಯಕ್ಷತೆಯಲ್ಲಿ ದೆಹಲಿ ಘಟಕವು ನಿರಂತರವಾಗಿ ಯಕ್ಷಗಾನಕ್ಕಾಗಿ ಶ್ರಮಿಸುತಿದೆ. ಇತ್ತೀಚೆಗೆ ವಸಂತ ಶೆಟ್ಟಿ ಬೆಳ್ಳಾರೆ ಅಧ್ಯಕ್ಷತೆಯಲ್ಲಿ ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕದ ನೂತನ ಪದಾಧಿಕಾರಿಗಳ ಸಮಿತಿಯನ್ನು ರಚನೆ ಮಾಡಲಾಯಿತು. ನೂತನ ಅಧ್ಯಕ್ಷರಾಗಿ ಪಾರಸ್ ಹೆಲ್ತ್ ಆಸ್ಪತ್ರೆಯ ಸರ್ಜಿಕಲ್ ಆಂಕಾಲಜಿ ವಿಭಾಗದ ಉಪಾಧ್ಯಕ್ಷ, ಖ್ಯಾತ ಕ್ಯಾನ್ಸರ್ ಚಿಕಿತ್ಸಕ ಡಾ. ನಿರಂಜನ್ ನಾಯ್ಕ್ ಹಾಗೂ ಕಾರ್ಯದರ್ಶಿಯಾಗಿ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಪ್ರಶಾಂತ್ ಶೆಟ್ಟಿ ಅವರು ಆಯ್ಕೆಯಾಗಿರುತ್ತಾರೆ.

ಗೌರವ ಅಧ್ಯಕ್ಷ–ಟಿ. ಶಿವಪ್ರಸಾದ್ ಶೆಟ್ಟಿ, ಅಧ್ಯಕ್ಷ–ಡಾ. ನಿರಂಜನ್ ನಾಯ್ಕ್, ಉಪಾಧ್ಯಕ್ಷರುಗಳು–ರಾಧಾಕೃಷ್ಣ ಮತ್ತು ಮಾಲಿನಿ ಪ್ರಹ್ಲಾದ್, ಸಂಚಾಲಕರು–ಕಾರ್ತಿಕ್ ರೈ, ಕಾರ್ಯದರ್ಶಿ–ಪ್ರಶಾಂತ್ ಶೆಟ್ಟಿ, ಖಜಾಂಚಿ ಕೃಷ್ಣರಾಜ್ ಕೆ.ಎನ್., ಜಂಟಿ ಕಾರ್ಯದರ್ಶಿಗಳು–ನಯನಾ ಭಟ್ ಮತ್ತು ಹರ್ಷಿತಾ ಕುಶಾಲಪ್ಪ

**ಸದಸ್ಯರು :** ವಸಂತ ಶೆಟ್ಟಿ ಬೆಳ್ಳಾರೆ, ಮಂಜುನಾಥ ನಾಯಕ್, ಮಿಥೇಶ್ ಶೆಟ್ಟಿ, ಶರೀಫ್ ಯು.ಎ., ಪೂಜಾ ಪಿ. ರಾವ್, ಶುಭಾ ದೇವಿಪ್ರಸಾದ್, ಸತ್ಯನಾರಾಯಣ, ಪ್ರಕಾಶ್ ಶೆಟ್ಟಿ ಉಳೆಪಾಡಿ, ಅರವಿಂದ ಬಿಜೈ, ನಾಗರಾಜ್ ಎಂ., ರಾಘವೇಂದ್ರ ನಾಯ್ಕ. ❑

# ರವಿಚಂದ್ರ ಶೆಟ್ಟಿ ಅವರಿಗೆ ನುಡಿ ನಮನ






ಜನಾನುರಾಗಿಯಾಗಿ ತನ್ನನ್ನು ತಾನು ಸಮರ್ಪಣಾ ಮನೋಭಾವದಿಂದ ತೊಡಗಿಸಿಕೊಂಡ ರವಿಚಂದ್ರ ಶೆಟ್ಟಿಯವರ ಅಗಲಿಕೆ ಕಲಾಲೋಕಕ್ಕೆ ಅಪಾರ ನೋವು ತಂದಿದೆ. ಅವರ ಕಲಾಸೇವೆಯನ್ನು ಯುವಪೀಳಿಗೆಯು ಸ್ಮರಿಸಬೇಕು ಎಂದು ಖ್ಯಾತ ಯಕ್ಷಗಾನ ಕಲಾವಿದ ಕೆರೆಮನೆ ಶಿವಾನಂದ ಹೆಗಡೆ ಹೇಳಿದರು.

ದಿನಾಂಕ 01.08.2026 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಇತ್ತೀಚೆಗೆ ಅಗಲಿದ ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್, ಕೇಂದ್ರ ಘಟಕದ ಜೊತೆ ಕಾರ್ಯದರ್ಶಿ, ಸಮಾಜಬಂಧು, ಸಹೃದಯಿ ರವಿಚಂದ್ರ ಶೆಟ್ಟಿ ಅಶೋಕನಗರ ಇವರಿಗೆ ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕದ ವತಿಯಿಂದ ಭಾವಚಿತ್ರಕ್ಕೆ ಪುಷ್ಪವನ್ನು ಅರ್ಪಿಸಿ, ನುಡಿನಮನಗೈಯುತ್ತಾ ಇಂದಿನ ಕಾಲದಲ್ಲಿ ಸಮಾಜ ಸೇವೆಯಲ್ಲಿ ಸಕ್ರಿಯವಾಗಿರುವವರೇ ವಿರಳ. ಆದರೆ ರವಿಚಂದ್ರ ಶೆಟ್ಟಿ ಅವರ ಸಾಮಾಜಿಕ ಕಳಕಳಿ, ಧಾರ್ಮಿಕ ಚಟುವಟಿಕೆ ಮರೆಯಲಾಗದ್ದು. ಇಂತಹ ಕ್ರಿಯಾಶೀಲ ವ್ಯಕ್ತಿತ್ವದ, ಸಜ್ಜನಿಕೆಯ, ಅಪರೂಪದ ವ್ಯಕ್ತಿತ್ವವನ್ನು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕವು ನೆನಪಿಸಿಕೊಳ್ಳುತ್ತಿರುವುದು ಸ್ಮರಣೀಯ ಎಂದರು.

ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕದ ನಿಕಟಪೂರ್ವ ಅಧ್ಯಕ್ಷ, ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತ ಸಾಮಾಜಿಕ ಹಿತಚಿಂತನೆಯೊಂದಿಗೆ ಕಲಾಸೇವೆಯನ್ನು ತನ್ನ ಬದುಕಿನ ಗುರಿಯಾಗಿಸಿದ್ದ ರವಿಚಂದ್ರ ಶೆಟ್ಟಿ ಅವರು ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಲ್ಲದೆ ಪ್ರಪ್ರಥಮ ಬಾರಿಗೆ ಕಾಶ್ಮೀರದಲ್ಲಿ ನಡೆದ ಯಕ್ಷಗಾನ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ನೆನಪು ಎಂದಿಗೂ ಕಣ್ಮರೆಯಾಗದು ಎಂದರು ಹಾಗೂ ಕಾರ್ಯಕ್ರಮವನ್ನು ನಿರೂಪಿಸಿದರು.

ಶ್ರೀಮತಿ ಪೂಜಾ ರಾವ್ ರವಿಚಂದ್ರ ಶೆಟ್ಟಿಯವರ ಸಮಾಜ ಸೇವೆ, ಸಾಧನೆಯ ಚಿತ್ರಣವನ್ನು ಮುಂದಿಟ್ಟರು. ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕದ ಕಾರ್ಯದರ್ಶಿ ಪ್ರಶಾಂತ ಶೆಟ್ಟಿ ಸಂತಾಪ ಸೂಚಿಸುತ್ತಾ ರವಿಚಂದ್ರ ಶೆಟ್ಟಿಯವರ ಸಾಂಸ್ಕೃತಿಕ ಒಲವಿನ ಜೊತೆಗೆ ದೆಹಲಿಯ ಒಡನಾಟವನ್ನು ಸ್ಮರಿಸಿಕೊಂಡರು.

ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕದ ಗೌರವಾಧ್ಯಕ್ಷ ಶಿವಪ್ರಸಾದ್ ಶೆಟ್ಟಿ, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಭಾರ ಗೌರವ ಕಾರ್ಯದರ್ಶಿ, ಗೌರವ ಖಜಾಂಚಿ ಕಾಶಿನಾಥ ಬಿರಾದರ್, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಉಮೇಶ್ ಬಿ.ಆರ್., ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಶಾಂತಕುಮಾರ್ ನಿಂಬಾಳ, ದೆಹಲಿ ತುಳುಸಿರಿಯ ಮಾಜಿ ಅಧ್ಯಕ್ಷ ಕೆ.ಆರ್. ರಾಮಮೂರ್ತಿ ಹಾಗೂ ದೆಹಲಿ ಕನ್ನಡಿಗರು, ಯಕ್ಷಪ್ರೇಮಿಗಳು ಉಪಸ್ಥಿತರಿದ್ದರು. ❑

**ಅರವಿಂದ ಬಿಜೈ**

Delhi Karnataka Sangha Abhimata
August 2026, Vol. No.36, Issue No. 11, Price Rs.1/-
RNI Regn. No. 53405/91, DL-SW-01/4016/22-24
Date of Publication : Aug 8th / 9th, Posting Date : 10th / 11th, Total Pages-28 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Renuka Nidagundi









